ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 3 ಗುರುವಾರ 2025

46

ಸಂಪುಟ: 46 | ಸಂಚಿಕೆ: 77 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಐದು ವರ್ಷವೂ ನಾನೇ ಸಿಎಂ!

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಪರೋಕ್ಷವಾಗಿ ಸುರ್ಜೇವಾಲ ಶಾಸಕರ ಅಭಿಪ್ರಾಯ ಪಡೆಯುತ್ತಿರುವ ವೇಳೆಯೇ ಸಿದ್ದರಾಮಯ್ಯ ಹೇಳಿಕೆ

ಬೆಂಗಳೂರು, ಜು.2(ಕೆಎಂಶಿ)– ಸರ್ಕಾರ ಐದು ವರ್ಷಗಳ ಕಾಲ ಬಂಡೆಯಂತಿದ್ದು, ನಾನೇ ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸುತ್ತೇನೆ ಎಂದು ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.



ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಕಳೆದ ಮೂರು ದಿನಗಳಿಂದ ಪರೋಕ್ಷವಾಗಿ ಪಕ್ಷದ ಶಾಸಕರ ಅಭಿಪ್ರಾಯ ಸಂಗ್ರಹಿಸುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹೇಳಿಕೆ ನೀಡಿದ್ದಾರೆ.

ನಂದಿಬೆಟ್ಟದಲ್ಲಿ ಜರುಗಿದ ಸಚಿವ ಸಂಪುಟ ಸಭೆಗೂ ಮುನ್ನ ಬೋಗ ನಂದೀಶ್ವರ ದೇವಸ್ಥಾನದ ಮುಂಭಾಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಐದು ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಬಂಡೆ ರೀತಿ ಇರುತ್ತದೆ ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದರು.

ಪತ್ರಿಕಾಗೋಷ್ಠಿ ಮುಗಿಯುವ ಹಂತಕ್ಕೆ ಬಂದ ಸಂದರ್ಭದಲ್ಲಿ, ನನ್ನ ನೇತೃತ್ವದಲ್ಲೇ ಕಾಂಗ್ರೆಸ್ ಆಡಳಿತಾವಧಿ ಪೂರ್ಣಗೊಳ್ಳುತ್ತದೆ. ನಾನೇ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರುತ್ತೇನೆ. ಇದರಲ್ಲಿ ಯಾರಿಗೂ ಅನುಮಾನ ಬೇಡ ಎಂದು ಹೇಳಿದರು.

ನಾಯಕತ್ವ ವಿಚಾರವಾಗಿ ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ, ಎಲ್ಲರೂ ಒಗ್ಗಟ್ಟಾಗಿದ್ದೇವೆ. ತಮ್ಮ ಅಧಿಕಾರಾವಧಿ ಮತ್ತು ಸರ್ಕಾರದ ಅಧಿಕಾರಾವಧಿ ಬಗ್ಗೆ ಮಾತನಾಡಲು ಬಿಜೆಪಿ ನಾಯಕರು ಯಾರು? ಎಂದು ಪ್ರಶ್ನಿಸಿದರು. ಆ ಪಕ್ಷದ ಆರ್.ಅಶೋಕ್, ವಿಜಯೇಂದ್ರ ನಮ್ಮ ಹೈಕಮಾಂಡ, ನಾನು ಮುಖ್ಯಮಂತ್ರಿಯಾಗಿ ಐದು ವರ್ಷ ▶ 6ನೇ ಪುಟಕ್ಕೆ

ನನಗೆ ಬೇರೆ ದಾರಿ ಇಲ್ಲ; ಸಿಎಂ ಬೆನ್ನಿಗೆ ನಿಂತು ಬೆಂಬಲಿಸುತ್ತೇನೆ

ಚಿಕ್ಕಬಳ್ಳಾಪುರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷ ತಾವೇ ಸಿಎಂ ಎಂದು ಪ್ರತಿಪಾದಿಸುತ್ತಿದ್ದಂತೆಯೇ ಆ ಹುದ್ದೆಯ ಪ್ರಮುಖ ಆಕಾಂಕ್ಷಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ನನಗೆ ಬೇರೆ ದಾರಿ ಇಲ್ಲ. ನಾನು ಬೆಂಬಲ ನೀಡಲೇಬೇಕು ಮತ್ತು ಕಾಂಗ್ರೆಸ್ ಹೈಕಮಾಂಡ್‌ನ ನಿರ್ದೇಶನಗಳನ್ನು ಪಾಲಿಸುವುದಾಗಿ ಹೇಳಿದರು.



ನಂದಿ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಆಗಮಿಸಿದ್ದ ಡಿಸಿಎಂ ಡಿಕೆಶಿ, ನನಗೆ ಯಾವ ಆಯ್ಕೆ ಇದೆ? ಬೇರೆ ಮಾರ್ಗ ಇಲ್ಲ. ನಾನು ಅವರ(ಸಿದ್ದರಾಮಯ್ಯ) ಬೆನ್ನಿಗೆ ನಿಂತು ಬೆಂಬಲಿಸುತ್ತೇನೆ. ಅವರು ಸಿಎಂ ಆಗಿ ಮುಂದುವರೆಯುವುದಕ್ಕೆ ನನಗೆ ಆಕ್ಷೇಪವಿಲ್ಲ. ಪಕ್ಷದ ಹೈಕಮಾಂಡ್ ಏನು ಹೇಳುತ್ತದೆ ಅದನ್ನು ಮಾಡುತ್ತೇನೆ ಎಂದರು.

ನೀವು ಪಕ್ಷ ಕಟ್ಟಲು ಕಷ್ಟಪಟ್ಟಿದ್ದೀರಿ ಆ ಕಾರಣಕ್ಕೆ ನಿಮ್ಮ ಬೆಂಬಲಿಗರು ಸಿಎಂ ಸ್ಥಾನಕ್ಕೆ ನಿಮ್ಮ ಹೆಸರು ಪ್ರಸ್ತಾಪಿಸುತ್ತಿದ್ದಾರೆ ಎಂಬ ವರದಿಗಾರರ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ, ನಾನೊಬ್ಬನೆ ಪಕ್ಷ ಕಟ್ಟಿದ್ದೇನೆಯೇ? ನನ್ನಂತೆ ನೂರಾರು, ಸಾವಿರಾರು, ಲಕ್ಷಾಂತರ ಜನ ಪಕ್ಷ ಕಟ್ಟಿದ್ದಾರೆ. ಮೊದಲು ಅವರ ನಂಬಿಕೆ ಉಳಿಸಿಕೊಳ್ಳೋಣ. ಪಕ್ಷದ ಶಿಸ್ತು ಮುಖ್ಯ ಎಂದು ಸ್ಪಷ್ಟಪಡಿಸಿದ ಡಿಕೆಶಿ, ತಮ್ಮನ್ನು ಸಿಎಂ ಮಾಡುವಂತೆ ನಾನು ಯಾರನ್ನೂ ಕೇಳಿಲ್ಲ ಮತ್ತು ನಾಯಕತ್ವ ಬದಲಾವಣೆಯ ವಿಷಯದ ಬಗ್ಗೆ ಸಾರ್ವಜನಿಕ ಹೇಳಿಕೆ ನೀಡುವ ನಾಯಕರಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಸಿದರು.

ಶಿವಕುಮಾರ್ ಅವರನ್ನು ಸಿಎಂ ಮಾಡಬೇಕು ಎಂದು ಮಂಗಳವಾರ ಹೇಳಿಕೆ ನೀಡಿದ್ದ ರಾಮನಗರ ಕಾಂಗ್ರೆಸ್ ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್ ಅವರಿಗೆ ನೋಟಿಸ್ ನೀಡಿದ್ದೇನೆ. ಇತರರಿಗೂ ನೋಟಿಸ್ ನೀಡಬೇಕಾಗುತ್ತದೆ. ಶಿಸ್ತು ಮುಖ್ಯ. ಸಿಎಂ ಹುದ್ದೆಗೆ ನನ್ನ ಹೆಸರು ಹೇಳುವಂತೆ ನಾನು ಯಾರನ್ನೂ ಕೇಳಿಲ್ಲ. ಅದರ ಅಗತ್ಯ ನನಗೆ ಇಲ್ಲ. ಸಿಎಂ (ಸಿದ್ದರಾಮಯ್ಯ) ಇರುವಾಗ, ಯಾವುದೇ ಭಿನ್ನಾಭಿಪ್ರಾಯದ ಅಗತ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಅಕ್ಟೋಬರ್ ಇಲ್ಲವೇ ನವೆಂಬರ್‌ನಲ್ಲಿ ಸಿಎಂ ಬದಲಾವಣೆ ಖಚಿತ

● ಪ್ರತಿಪಕ್ಷ ನಾಯಕ ಆರ್.ಅಶೋಕ ವಿಶ್ವಾಸದ ನುಡಿ ● ವಾಲ್ಮೀಕಿ ನಿಗಮದ ಪ್ರಕರಣ ಸಿಬಿಐಗೆ; ಬಿಜೆಪಿಯ ಹೋರಾಟಕ್ಕೆ ನ್ಯಾಯ ಸಿಕ್ಕಿದೆ

ಬೆಂಗಳೂರು,ಜು.2–ಅಕ್ಟೋಬರ್ ಇಲ್ಲವೇ ನವೆಂಬರ್‌ನಲ್ಲಿ ಖಚಿತವಾಗಿ ಮುಖ್ಯಮಂತ್ರಿ ಬದಲಾವಣೆಯಾಗಲಿದೆ. ಕಾಂಗ್ರೆಸ್ ಪಕ್ಷ ಮನೆಯೊಂದು ಮೂರು ಬಾಗಿಲು ಆಗಿದ್ದು, ಸಿದ್ದರಾಮಯ್ಯನವರು ಸಿಎಂ ಆಗಿಯೇ ಇರುತ್ತಾರೆಂದು ಪಕ್ಷದ ವರಿಷ್ಠರು ಹೇಳಬೇಕು. ಆದರೆ ಭಯದಿಂದ ಸ್ವತಃ ಸಿದ್ದರಾಮಯ್ಯನವರೇ ಅದನ್ನು ಪದೇ ಪದೆ ಹೇಳುತ್ತಿದ್ದಾರೆ. ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತೇನೆ ಎನ್ನುವ ಡಿ.ಕೆ.ಶಿವಕುಮಾರ್ ಅವರೇ ಈ ರೀತಿಯ ಸಂದೇಶ ನೀಡುತ್ತಿದ್ದಾರೆ. ಸರ್ಕಾರದಲ್ಲಿ ಹಣವಿಲ್ಲದೆ, ಅಭಿವೃದ್ಧಿಶೂನ್ಯವಾಗಿ ಶಾಸಕರು ಬೇಸರಗೊಂಡಿದ್ದಾರೆ. ಜನರಿಗೆ ವಿಶ್ವಾಸ ಹೊರಟುಹೋಗಿದೆ ಎಂದರು.



2028 ರವರೆಗೆ ಸಿದ್ದರಾಮಯ್ಯನವರೇ ಸಿಎಂ ಎಂದು ಡಿ.ಕೆ.ಶಿವಕುಮಾರ್ ಹೇಳಲಿ. ಅದನ್ನು ಆರನೇ ಗ್ಯಾರಂಟಿ ಎಂದು ಅಂದುಕೊಂಡು ಸುಮ್ಮನಾಗುತ್ತೇವೆ ಎಂದರು.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮನಮೋಹನ್ ಸಿಂಗ್ ಹೆಸರು ಸೂಕ್ತವಲ್ಲ. ಜಿಲ್ಲೆಗಳ ಹೆಸರನ್ನು ಬದಲಿಸಿದಂತೆಯೇ ಏಕಾಏಕಿ ಹೆಸರು ಬದಲಿಸುತ್ತಿದ್ದಾರೆ. ಪೂರ್ವಿಕರು ಇಟ್ಟ ಹೆಸರನ್ನು ಹೀಗೆ ಬದಲಿಸಬಾರದು. ಬೆಂಗಳೂರನ್ನು ಈಗಾಗಲೇ ಒಡೆದುಹಾಕಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಬೆಂಗಳೂರನ್ನು ಒಂದಾಗಿಸಲಿದೆ. ಬೆಂಗಳೂರು ಅಭಿವೃದ್ಧಿ ಮಾಡುವುದು ಬಿಟ್ಟು, ನಾಮ ಫಲಕ ಬದಲಿಸುವುದರಿಂದ ಕೋಟ್ಯಾಂತರ ರೂ. ವ್ಯರ್ಥವಾಗಲಿದೆ ಎಂದರು.

> **“ ವಾಲ್ಮೀಕಿ ನಿಗಮದ ಹಗರಣವನ್ನು ಸಿಬಿಐಗೆ ನೀಡಿರುವುದರಿಂದ ಬಿಜೆಪಿಯ ಹೋರಾಟಕ್ಕೆ ಜಯ ಸಿಕ್ಕಿದೆ. ಕೋರ್ಟ್ ನಮಗೆ ನಿಜವಾದ ನ್ಯಾಯ ನೀಡಿದೆ. ಆರ್‌ಎಸ್‌ಎಸ್ ನಿಷೇಧ ಮಾಡಿದರೆ, ಮತ್ತೆ ಸಂಘಟನೆ ಪುಟಿದೇಳುತ್ತದೆ. ನಾನು, ಪ್ರಧಾನಿ ನರೇಂದ್ರ ಮೋದಿ, ಅನೇಕ ರಾಜ್ಯಗಳ ರಾಜ್ಯಪಾಲರು, ಹಲವಾರು ಸಂಸದರು, ಶಾಸಕರು ಆರ್‌ಎಸ್‌ಎಸ್‌ನಲ್ಲಿದ್ದಾರೆ. ಸಂಘಟನೆಯಲ್ಲಿ ಶಿಸ್ತನ್ನು ಕಲಿಸಲಾಗುತ್ತದೆ. ಆರ್‌ಎಸ್‌ಎಸ್ ಬಗ್ಗೆ ತಿಳಿದು ಮಾತನಾಡಬೇಕು. ಅದು ದೇಶಭಕ್ತ ಸಂಘಟನೆಯಾಗಿದ್ದು, ಅದರ ಬಗ್ಗೆ ಮಾತನಾಡುವಾಗ ಸ್ವಲ್ಪ ಅರಿವು ಇರಬೇಕು. ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ಜಾತ್ಯತೀತ, ಸಮಾಜವಾದ ಪದ ಇಲ್ಲ. ಈ ಬಗ್ಗೆ ಕಾಂಗ್ರೆಸ್ ನಾಯಕರು ಉತ್ತರಿಸಲಿ. ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗಬೇಕಿದೆ. ಇವೆರಡೂ ಪದಗಳು ಸಂವಿಧಾನದ ಪುಸ್ತಕಕ್ಕೆ ಸೇರ್ಪಡೆಯಾಗುವಾಗ ಸಂಸತ್ತಿನಲ್ಲಿ ಕೂಡ ಚರ್ಚೆಯಾಗಿಲ್ಲ.** –ಆರ್.ಅಶೋಕ್

ಕಾರ್ಮಿಕರ ಮಕ್ಕಳಿಗಾಗಿ ಪ್ರತಿ ಜಿಲ್ಲೆಯಲ್ಲಿ ವಸತಿ ಶಾಲೆ

- **ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ**
- **ಇಂದಿನ ಸಂಪುಟ ಸಭೆಯಲ್ಲಿ 48 ವಿಷಯ ಸಂಬಂಧ ವಿವಿಧ ಯೋಜನೆಗೆ 3400 ಕೋಟಿ ಬಿಡುಗಡೆ**
- **ಉನ್ನತ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಬೆಂಗಳೂರಲ್ಲಿ ವಸತಿ ಸಂಸ್ಥೆ**
- **ಬಾಗೇಪಲ್ಲಿ ಈಗ ಭಾಗ್ಯನಗರ; ಬೆಂಗಳೂರು ಗ್ರಾಮಾಂತರವೀಗ 'ಬೆಂಗಳೂರು ಉತ್ತರ ಜಿಲ್ಲೆ'**



ಬೆಂಗಳೂರು, ಜು.2(ಕೆಎಂಶಿ)– ಕಾರ್ಮಿಕರ ಮಕ್ಕಳಿಗಾಗಿ ಪ್ರತಿ ಜಿಲ್ಲೆಯಲ್ಲೂ ವಸತಿ ಶಾಲೆ ಪ್ರಾರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ನಂದಿಬೆಟ್ಟದಲ್ಲಿ ನಡೆದ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಿ ಕಾರ್ಮಿಕರು ಹೆಚ್ಚು ಇರುತ್ತಾರೋ ಅಂತಹ ಜಿಲ್ಲೆಗಳ ತಾಲೂಕಿನಲ್ಲಿ ಶಾಲೆ ಆರಂಭಿಸಲಾಗುವುದು. ಇದಕ್ಕಾಗಿ 1,125 ಕೋಟಿ ರೂ. ಮೀಸಲಿಡಲಾಗಿದೆ ಎಂದರು.

ಇಂದಿನ ಸಭೆಯಲ್ಲಿ 48 ವಿಷಯಗಳನ್ನು ಕೈಗೆತ್ತಿಕೊಂಡು ವಿವಿಧ ಯೋಜನೆಗಳಿಗಾಗಿ 3,400 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಬಿಜೆಪಿಯವರು ಬೊಕ್ಕಸದಲ್ಲಿ ಹಣ ಇಲ್ಲ ಎಂಬುದಾಗಿ ಅಪಪ್ರಚಾರ ಮಾಡುತ್ತಾರೆ. ಆದರೆ, ಒಂದೇ ಸಭೆಯಲ್ಲಿ ಇಷ್ಟು ದೊಡ್ಡ ಮೊತ್ತದ ಹಣ ಬಿಡುಗಡೆ ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿದರು.

ಉನ್ನತ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಅನುಕೂಲಕ್ಕೆ ಬೆಂಗಳೂರಿನಲ್ಲಿ ಎರಡು ವಸತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಬಾಗೇಪಲ್ಲಿ ಹೆಸರನ್ನು 'ಭಾಗ್ಯನಗರ' ಎಂಬುದಾಗಿ ಮರುನಾಮಕರಣ ಮಾಡಲು ನಿರ್ಧರಿಸಲಾಗಿದೆ, ಬೆಂಗಳೂರು ಗ್ರಾಮಾಂತರವನ್ನು 'ಬೆಂಗಳೂರು ಉತ್ತರ ಜಿಲ್ಲೆ' ಎಂಬುದಾಗಿ ಮರುನಾಮಕರಣ ಮಾಡಲಾಗುವುದು. ಎತ್ತಿನಹೊಳೆ ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಿ, 9 ಜಿಲ್ಲಾ ಕೇಂದ್ರ ಹಾಗೂ ಅದರ ವ್ಯಾಪ್ತಿಯ ಪಟ್ಟಣಗಳಿಗೆ ಕುಡಿಯುವ ನೀರು ಕಲ್ಪಿಸುವುದಾಗಿ ತಿಳಿಸಿದರು.


ಎರಡನೇ ಹಂತದಲ್ಲಿ ಈ ಭಾಗದ ಕೆರೆಗಳಿಗೆ ನೀರು ತುಂಬಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಅಗತ್ಯವಿರುವ ಹೆಚ್ಚುವರಿ ಹಣ ಬಿಡುಗಡೆ ಮಾಡಲಾಗುವುದು ಎಂದರು.

ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಪ್ರಕರಣ 10 ದಿನದಲ್ಲಿ ವರದಿ ಬರುವ ಸಾಧ್ಯತೆ

ಬೆಂಗಳೂರು, ಜು.2(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣ ಸಮೀಪದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ನ್ಯಾಯಾಂಗ ತನಿಖೆ ಮುಕ್ತಾಯ ಹಂತದಲ್ಲಿದ್ದು, 10 ದಿನಗಳಲ್ಲಿ ವರದಿ ಬರುವ ಸಾಧ್ಯತೆಯಿದೆ ಎಂದು ಸರ್ಕಾರ ತಿಳಿಸಿದೆ. ಕಾಲ್ತುಳಿತ ಪ್ರಕರಣ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ರಾಜೀನಾಮೆ ಭೂಮಿಕೆ ತಯಾರಿಗೆ ಸುರ್ಜೇವಾಲ ರಾಜ್ಯಕ್ಕೆ ಬಂದಿದ್ದಾರೆ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ ● ರಾಜ್ಯದ ಭ್ರಷ್ಟ ಸರ್ಕಾರದ ಬಗ್ಗೆ ಸುರ್ಜೇವಾಲ ತಲೆಕೆಡಿಸಿಕೊಂಡಿಲ್ಲ



ಬೆಂಗಳೂರು,ಜು.2(ಕೆಎಂಶಿ)–ಸಿದ್ದರಾಮಯ್ಯ ರಾಜೀನಾಮೆಗೆ ಭೂಮಿಕೆ ಸಿದ್ಧಪಡಿಸಲು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕರ್ನಾಟಕಕ್ಕೆ ಬಂದಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುರ್ಜೇವಾಲ ರಾಜ್ಯದ ಭ್ರಷ್ಟ ಸರ್ಕಾರ ನೆಲಕಚ್ಚಿದ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಮುಖ್ಯಮಂತ್ರಿಗಾದಿ ಕುರಿತು ಶಾಸಕರ ಅಭಿಪ್ರಾಯ ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಪೈಪೋಟಿ ಹೆಚ್ಚಾಗಿ, ಕುದುರೆ ವ್ಯಾಪಾರ ಜೋರಾಗಲಿದೆ ಎಂದರು.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ 100 ಶಾಸಕರ ಬೆಂಬಲವಿದೆ. ಅವರು ಮುಖ್ಯಮಂತ್ರಿ ಆಗಬೇಕು ಎಂದಿದ್ದರೆ, ಹಿರಿಯ ಶಾಸಕರಾದ ಬಿ.ಆರ್.ಪಾಟೀಲ್, ರಾಜುಕಾಗೆ ಸೇರಿದಂತೆ ಹಲವರು ಮುಖ್ಯಮಂತ್ರಿ ವಿರುದ್ಧ ಹೇಳಿಕೆ ಕೊಡುತ್ತಿದ್ದಾರೆ.

ಮುಖ್ಯಮಂತ್ರಿ ಪಕ್ಷದ ಶಾಸಕರ ವಿಶ್ವಾಸ ಕಳೆದುಕೊಂಡಿದ್ದಾರೆ. ಕುದುರೆ ವ್ಯಾಪಾರದ ಬಗ್ಗೆ ರಾಜ್ಯಪಾಲರು ಗಮನಿಸಬೇಕು ಎಂದು ವಿಜಯೇಂದ್ರ ವಿನಂತಿಸಿದರು.

ಹೃದಯಾಘಾತದಿಂದ ಹಾಸನ ಜಿಲ್ಲೆಯಲ್ಲಿ 35–40 ಜನರು ಸತ್ತಿದ್ದು, ಕೋವಿಡ್ ಲಸಿಕೆ ಕಾರಣ ಎಂಬ ಮುಖ್ಯಮಂತ್ರಿಗಳ ಆರೋಪ ಸರಿಯಲ್ಲ. ಹಾಸನ ಜಿಲ್ಲೆಗೆ ಮಾತ್ರ ಕೋವಿಡ್ ಲಸಿಕೆ ಕೊಡಲಾಗಿದೆಯೇ, ದೇಶದ ಕೋಟ್ಯಾಂತರ ಜನರಿಗೆ, ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಿಗೂ ಭಾರತ ಕೋವಿಡ್ ಲಸಿಕೆ ರಫ್ತು ಮಾಡಿದೆ. ಹಾಸನ ಜಿಲ್ಲೆ ಸಾವುಗಳ ಸಂಬಂಧ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಸಮರ್ಪಕ ತನಿಖೆ ನಡೆಸಬೇಕು, ತುರ್ತಾಗಿ ಸಭೆ ಕರೆದು ತಾಲೂಕು, ಜಿಲ್ಲಾ ಮಟ್ಟದಲ್ಲಿ ಸಮರ್ಪಕ ಔಷಧಿ ಸಿದ್ಧವಾಗಿ ಇಟ್ಟುಕೊಳ್ಳುವಲ್ಲಿ ಗಮನಹರಿಸಬೇಕು, ಅಪಪ್ರಚಾರ ಸಲ್ಲದು ಎಂದು ವಿಜಯೇಂದ್ರ ಹೇಳಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂಬ ಬಗ್ಗೆ ಸ್ವತಃ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿಯವರಿಗೇ ನಂಬಿಕೆ ಇಲ್ಲ, ಇನ್ನು ಪ್ರಿಯಾಂಕ್ ಖರ್ಗೆಗೆ ಇಂತಹ ಕನಸು ಹೇಗೆ ಬಿತ್ತು ಎಂದು ವ್ಯಂಗ್ಯವಾಡಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ರಾಷ್ಟ್ರಭಕ್ತ ಸಂಘಟನೆ, ಭಾರತ–ಚೀನಾ ಯುದ್ಧದ ವೇಳೆ ಆರೆಸ್ಸೆಸ್ ಪಾತ್ರವನ್ನು ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಸ್ವಾಗತಿಸಿದ್ದರು, ಆ ನಂತರವೇ ಸಂಘಟನೆಗೆ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಅವಕಾಶ ಕೊಡಲಾಗಿತ್ತು. ನೆಹರು, ಇಂದಿರಾ ಗಾಂಧಿ ಆರೆಸ್ಸೆಸ್ ನಿಷೇಧಿಸಿದ್ದರು. ಕಾಡಿ ಬೇಡಿದ ನಂತರ ನಿಷೇಧ ರದ್ದಾಯಿತೆಂಬ ಅಪ್ರಬುದ್ಧ ಹೇಳಿಕೆ ಮಾಹಿತಿ ಕೊರತೆಯಿಂದ ಕೂಡಿದೆ ಎಂದರು. ವಾಲ್ಮೀಕಿ ನಿಗಮದ ಹಗರಣದ ತನಿಖೆಯನ್ನು ರಾಜ್ಯ ಹೈಕೋರ್ಟ್ ಸಿಬಿಐಗೆ ವಹಿಸಿದ್ದು ▶ 6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯರಿಂದ ವೇದಿಕೆ ಮೇಲೆ ಅಪಮಾನ ಸ್ವಯಂ ನಿವೃತ್ತಿಗೆ ಎಎಸ್‌ಪಿ ನಿರ್ಧಾರ

ಧಾರವಾಡ, ಜು.2– ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ವೇದಿಕೆ ಮೇಲೆ ಹಿರಿಯ ಪೊಲೀಸ್ ಅಧಿಕಾರಿ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಎತ್ತಿದ್ದರು. ಸಾರ್ವಜನಿಕವಾಗಿ ಈ ಅನಿರೀಕ್ಷಿತ ನಡೆಯಿಂದ ಅವಮಾನಕ್ಕೀಡಾಗಿದ್ದ ಧಾರವಾಡ ಎಎಸ್‌ಪಿ ನಾರಾಯಣ ಭರಮನಿ ಅವರು ಸ್ವಯಂ ನಿವೃತ್ತಿಗೆ ಮುಂದಾಗಿದ್ದಾರೆ.



ನಾರಾಯಣ ಭರಮನಿ

ಅವರು ಅದಾಗಲೇ ರಾಜೀನಾಮೆಗೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅವರ ಮನವೊಲಿಸುವ ಪ್ರಯತ್ನಗಳನ್ನು ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳು ನಡೆಸುತ್ತಿದ್ದಾರೆ. ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಸಭೆ ವೇಳೆ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರಿಂದ ಕೋಪಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ತವ್ಯದಲ್ಲಿದ್ದ ನಾರಾಯಣ ಭರಮನಿ ಅವರನ್ನು ವೇದಿಕೆಗೆ ಕರೆದು ಹೊಡೆಯಲು ಕೈ ಎತ್ತಿದ್ದು ವಿವಾದಕ್ಕೆ ಕಾರಣವಾಗಿತ್ತು. ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯ ▶ 6ನೇ ಪುಟಕ್ಕೆ

ಹಾಸನ ಜಿಲ್ಲೆಯಲ್ಲಿ ಸರಣಿ ಸಾವಿಗೂ ಕೋವಿಡ್ ಲಸಿಕೆಗೂ ಸಂಬಂಧವಿಲ್ಲ

ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟನೆ

ನವದೆಹಲಿ,ಜು.2– ಕರ್ನಾಟಕದ ಹಾಸನ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಹೃದಯ ಸಂಬಂಧಿ ಕಾರಣಗಳಿಂದ ಸಾವಿನ ಸಂಖ್ಯೆ ಅಧಿಕವಾಗಿ ಸಂಭವಿಸಿದ್ದು, ಇದಕ್ಕೆ ಕೋವಿಡ್ ಲಸಿಕೆ ಕಾರಣವಾಗಿರಬಹುದೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂದೇಹ ವ್ಯಕ್ತಪಡಿಸಿರುವುದಕ್ಕೆ ದೆಹಲಿಯ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಸ್ಪಷ್ಟನೆ ನೀಡಿದೆ.

ಈ ಎರಡೂ ಸಂಸ್ಥೆಗಳು ನಡೆಸಿದ ವ್ಯಾಪಕ ಅಧ್ಯಯನಗಳು ಕೊರೊನಾ ಲಸಿಕೆಗಳು ಮತ್ತು ಹಠಾತ್ ಸಾವುಗಳ ನಡುವೆ ಯಾವುದೇ ಸಂಬಂಧ ಹೊಂದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋವಿಡ್ ಸೋಂಕಿನ ಸಮಯದಲ್ಲಿ ಜನರಿಗೆ ಕೋವಿಡ್ ಲಸಿಕೆಯನ್ನು ಆತುರವಾಗಿ ನೀಡಿದ್ದೆ ಜನರು ಹಠಾತ್ ಪ್ರಾಣ ಕಳೆದುಕೊಳ್ಳುತ್ತಿರುವುದಕ್ಕೆ ಕಾರಣವಾಗಿರಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಿನ್ನೆ ಹೇಳಿದ್ದರು.



ಹಠಾತ್ ಸಾವುಗಳು: ಇತ್ತೀಚಿನ ದಿನಗಳಲ್ಲಿ ಯುವ ವಯಸ್ಸಿನಲ್ಲಿಯೇ ಹಠಾತ್ ಸಾವು ಸಂಭವಿಸುತ್ತಿದೆ. ಇದಕ್ಕೆ ಕಾರಣವೇನೆಂದು ಹಲವಾರು ಸಂಸ್ಥೆಗಳ ಮೂಲಕ ತನಿಖೆ ಮಾಡಲಾಗಿದೆ, ಈ ಅಧ್ಯಯನಗಳು ಕೋವಿಡ್–19 ಲಸಿಕೆ ಮತ್ತು ಹಠಾತ್ ಸಾವುಗಳ ವರದಿಗಳ ನಡುವೆ ಯಾವುದೇ ನೇರ ಸಂಬಂಧವಿಲ್ಲ ಎಂದು ನಿರ್ಣಾಯಕವಾಗಿದೆ ▶ 6ನೇ ಪುಟಕ್ಕೆ

ಹುಲಿ, ಚಿರತೆ ಆಯ್ತು ಈಗ ಕೋತಿಗಳ ಮಾರಣಹೋಮ

■ 20 ಕೋತಿಗಳಿಗೆ ವಿಷಹಾಕಿ ಕೊಂದ ದುರುಳರು, 18 ಸಾವು, ಎರಡರ ಸ್ಥಿತಿ ಚಿಂತಾಜನಕ ■ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆಗೆ ವನ್ಯಜೀವಿ ಪ್ರಿಯರ ಆಗ್ರಹ



ಗುಂಡ್ಲುಪೇಟೆ ತಾಲೂಕಿನ ಕಂದೇಗಾಲ–ಕೊಡಸೋಗೆ ರಸ್ತೆಬದಿ ಕೋತಿಗಳ ಕೊಂದು ಅವುಗಳ ದೇಹವನ್ನು ಬಿಸಾಡಿ ಹೋಗಿರುವ ಕಿಡಿಗೇಡಿಗಳು.

ಗುಂಡ್ಲುಪೇಟೆ, ಜು.2(ಸೋಮ್‌ಜಿ, ಎಂಟಿವೈ)–ವಿಷ ಪ್ರಾಶನದಿಂದ ಐದು ಹುಲಿಗಳ ಮಾರಣಹೋಮ ಹಾಗೂ ಕಾಲುಗಳನ್ನು ಕತ್ತರಿಸಿ ಚಿರತೆ ಹತ್ಯೆಗೈದ ಪ್ರಕರಣದ ಬೆನ್ನಹಿಂದೆಯೇ ಕಿಡಿಗೇಡಿಗಳು 20 ಕೋತಿಗಳಿಗೆ ವಿಷ ಹಾಕಿ ಕೊಂದು ಗೋಣಿಚೀಲದಲ್ಲಿ ತುಂಬಿ ರಸ್ತೆಬದಿಗೆ ಎಸೆದು ಹೋಗಿರುವ ಅಮಾನವೀಯ ಘಟನೆ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಕಂದೇಗಾಲು ಬಳಿ ಸಂಭವಿಸಿದ್ದು, ಅವುಗಳಲ್ಲಿ 18 ಕೋತಿಗಳು ಮೃತಪಟ್ಟಿದ್ದರೆ, 2 ಕೋತಿಗಳ ಸ್ಥಿತಿ ಚಿಂತಾಜನಕವಾಗಿದೆ.

ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದ ಮೀಣ್ಯಂ ಅರಣ್ಯ ಪ್ರದೇಶದಲ್ಲಿ ವಿಷ ಪ್ರಾಶನದಿಂದ 10 ತಿಂಗಳ 4 ಮರಿಗಳೊಂದಿಗೆ 8 ವರ್ಷದ ತಾಯಿ ಹುಲಿ ಮೃತಪಟ್ಟ ಘಟನೆ ದೇಶಾದ್ಯಂತ ಚರ್ಚೆಗೆ ಗ್ರಾಸವಾಗುತ್ತಿದೆ. ▶ 6ನೇ ಪುಟಕ್ಕೆ

ಎಲ್ಲಿಯೋ ಕೊಂದು ತಂದು ಇಲ್ಲಿ ಬೀಸಾಡಿದ್ದಾರೆ

ಕೋತಿಗಳ ಕಳೇಬರ ಸಿಕ್ಕ ಕಂದೇಗಾಲ, ಕೊಡಸೋಗೆ ರಸ್ತೆಯಲ್ಲಿ ಕೋತಿಗಳ ಹಾವಳಿ ಬಗ್ಗೆ ಅರಣ್ಯ ಇಲಾಖೆಗೆ ಯಾವುದೇ ದೂರು ಸಲ್ಲಿಕೆಯಾಗಿಲ್ಲ. ಅಲ್ಲದೆ, ಆ ಭಾಗದಲ್ಲಿ ಕೋತಿಗಳ ಹಾವಳಿಯೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಕೋತಿಗಳನ್ನು ಎಲ್ಲೋ ಕೊಂದು ಅವುಗಳನ್ನು ತಂದು ಈ ರಸ್ತೆಯಲ್ಲಿ ಬೀಸಾಡಿರುವುದು ಖಚಿತವಾಗಿದೆ.

ಅರಣ್ಯ ಇಲಾಖೆಯಿಂದ ತನಿಖೆ ಚುರುಕು

ಕೋತಿಗಳ ಕಳೇಬರ ಸಿಕ್ಕ ಸ್ಥಳಕ್ಕೆ ಶ್ವಾನದಳ ಕರೆಸಿ, ಕೋತಿಗಳ ದೇಹ ಬಿದ್ದಿದ್ದ ಸ್ಥಳದಲ್ಲಿ ಮಾತ್ರ ಓಡಾಡಿ ಸುಮ್ಮನೆ ನಿಂತಿತು. ಇದರಿಂದ ವಾಹನದಲ್ಲಿ ತಂದು ಬೀಸಾಡಿರುವುದು ಖಚಿತವಾಗಿದೆ. ಅಲ್ಲದೆ, ಆ ಮಾರ್ಗದಲ್ಲಿ ಹೊಲ, ತೋಟ ಸೇರಿದಂತೆ ವಿವಿಧೆಡೆ ಅಳವಡಿಸಿರುವ ಸಿಸಿ ಕ್ಯಾಮರಾ ದೃಶ್ಯ ಪರಿಶೀಲಿಸಲಾಗುತ್ತಿದೆ. ಅಲ್ಲದೆ, ವಿವಿಧ ಮಾರ್ಗದಲ್ಲಿ ಆ ಸಮಯದಲ್ಲಿ ಓಡಾಡಿರುವ ವಾಹನ ಪತ್ತೆ ಮಾಡಲು ತನಿಖೆ ಆರಂಭಿಸಿದೆ.

ಎರಡು ದಿನದ ಹಿಂದೆ

ಹಂಗಳ ಸಮೀಪ ಎರಡು ದಿನದ ಹಿಂದೆ ವಿಷ ಪ್ರಾಶನದಿಂದ ನಿತ್ರಾಣಗೊಂಡಿದ್ದ ಒಂದು ಕೋತಿಗೆ ಚಿಕಿತ್ಸೆ ಕೊಡಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಆ ಕೋತಿ ಚೇತರಿಸಿಕೊಂಡಿದೆಯಾ ಅಥವಾ ಆ ಕೋತಿಗೂ ಜೀವಹಾನಿಯಾಗಿದೆಯಾ ಎಂಬ ಮಾಹಿತಿ ಸಿಕ್ಕಿಲ್ಲ. ಇದರಿಂದ ಕೋತಿ ಹಾವಳಿ ಇದ್ದ ಗ್ರಾಮಗಳು, ಕಾಡಂಚಿನ ಪ್ರದೇಶದಲ್ಲಿ ಪರಿಶೀಲಿಸಬೇಕು. ಇನ್ನಷ್ಟು ಪ್ರಾಣಿಗಳು ವಿಷ ಪ್ರಾಶನದಿಂದ ತೊಂದರೆಗೀಡಾಗಿರುವ ಸಾಧ್ಯತೆಯೂ ಇದ್ದು, ಕ್ರಮ ಕೈಗೊಳ್ಳುವಂತೆ ಪರಿಸರವಾದಿಗಳು ಆಗ್ರಹಿಸಿದ್ದಾರೆ.

ನಾಳೆ ವೈದ್ಯರಿಗೆ ನಮನ ಸಂಗೀತ, ನೃತ್ಯ ಸಮ್ಮಿಲನ

ಮೈಸೂರು, ಜು.2(ಜಿಎ)–ಮೈಸೂರು ರಿದಮ್ಸ್ ತಂಡದ ವತಿಯಿಂದ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಜು.4ರಂದು ಸಂಜೆ 4.30ರಿಂದ ರಾತ್ರಿ 9.30ರವರೆಗೆ ವೈದ್ಯರ ದಿನಾಚರಣೆ ಅಂಗವಾಗಿ 'ವೈದ್ಯರಿಗೆ ನಮನ ಸಂಗೀತ ನೃತ್ಯಗಳ ಸಮ್ಮಿಲನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಂಡದ ಸಂಚಾಲಕ ಎಸ್.ಅಮರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯ ಅತಿಥಿಗಳಾಗಿ ಎಂಎಲ್‌ಸಿಗಳಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಸಾ.ರಾ. ಮಹೇಶ್, ಗಾಯಕರಾದ ಅನಿತಾ ಸಾ.ರಾ. ಮಹೇಶ್, ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಭಾಗೀಯ ಉಪನಿರ್ದೇಶಕ ಡಾ.ಕೆ.ಹೆಚ್.ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕರ್ನಾಟಕ ಸುಗಮ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ನಾಗರಾಜ್ ವಿ.ಭೈರಿ, ಗಾಯಕ ಸ್ವಾನ್ಲಿ ಪಾರ್ಕರ್ ಪಾಲ್ಗೊಳ್ಳಲಿದ್ದಾರೆ ಎಂದರು.


ಕಾರ್ಯಕ್ರಮದಲ್ಲಿ 13 ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ಹಾಗೂ ಪುಸ್ತಕಗಳನ್ನು ವಿತರಿಸಲಾಗುವುದು. ಸವಿನೆನಪು ಫೌಂಡೇಶನ್ ವತಿಯಿಂದ ಆರ್ಥಿಕವಾಗಿ ಹಿಂದುಳಿದ 11 ಮಕ್ಕಳಿಗೆ ಒಂದು ವರ್ಷದ ಶಾಲಾ ಶುಲ್ಕವನ್ನು ಭರಿಸಲಾಗುವುದು. ಗಾಯಕರಾದ ಡಾ.ಸುಮ, ನಾಗೇಂದ್ರ, ಸಂತೋಷ್ ನಾಯರ್, ಜೆ.ಚೇತನ್, ಜಾಯ್ಸ್ ವೈಶಾಖ್ ಮುತ್ತಿತರರು ಹಾಡುವರು. ಕನ್ನಡ, ತಮಿಳು ತೆಲುಗು, ಮಲಯಾಳಂ ಮತ್ತು ಹಿಂದಿ ಭಾಷೆಯ 35 ಹಾಡುಗಳನ್ನು ಪ್ರಸ್ತುತಪಡಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಡಾ.ಎಲ್. ಸುಮ, ನಾಗೇಂದ್ರ, ಜಿ.ಪಿ.ಚೇತನ್, ಸಂಚಾಲಕ ಪ್ರವೀಣ್ ಫಾಟ್ಕೆ ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ ವೈದ್ಯರ ದಿನಾಚರಣೆ



ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂನಲ್ಲಿ ವೈದ್ಯರ ದಿನ ಆಚರಿಸಲಾಯಿತು. ಈ ವೇಳೆ ಮೈಸೂರಿನ ವೈದ್ಯರಾದ ಡಾ.ವಿಜಯ್ ಚೆಲುವರಾಜ್, ಡಾ.ಅಮರ್‌ಲಾಲ್, ಡಾ.ಸಿಎಪಿ ಪ್ರಭು, ಡಾ.ಪಲ್ಲವಿ ಪ್ರಭು, ಡಾ.ಆರ್.ಎ.ಅಪ್ಸರ್, ಡಾ.ಮಧು ಅವರನ್ನು ಸನ್ಮಾನಿಸಲಾಯಿತು. ಮಲಬಾರ್ ಗೋಲ್ಡ್‌ನ ಸೌತ್ ಝೋನಲ್ ಹೆಡ್ ಶರಾಫುದ್ದೀನ್, ಸಹಾಯಕ ಸ್ಟೋರ್ ಹೆಡ್ ಮೊಹಮ್ಮದ್ ಅಂಶಜ್ ಹಾಗೂ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಮೈನಾಬಾಯಿ ಬಾಗ್‌ಮಾರ್‌ಗೆ ಸನ್ಮಾನ...



ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ ನಡೆದ ಕೆಂಪೇಗೌಡರ 516ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ಸಿ.ಸೋಹನ್‌ಲಾಲ್ ಬಾಗ್‌ಮಾರ್ ಅವರು ದಶಕಗಳಿಂದ ಮೈಸೂರು ಪಿಂಜಾಪೋಲ್ ಸೊಸೈಟಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರ ಪರವಾಗಿ ಅವರ ಪತ್ನಿ ಶ್ರೀಮತಿ ಮೈನಾಬಾಯಿ ಬಾಗ್‌ಮಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಆಚರಣಾ ಸಮಿತಿ ಅಧ್ಯಕ್ಷ ಪ್ರಶಾಂತ್‌ಗೌಡ, ಬುದ್‌ಮಲ್ ಬಾಗ್‌ಮಾರ್, ರಾಜನ್ ಬಾಗ್‌ಮಾರ್, ಚಂಚಲ್ ದೇವಿ ಬಾಗ್‌ಮಾರ್, ಬಿಂದು ಬಾಗ್‌ಮಾಗ್ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಲ್ಲಿ ಮಾವಿನ ಸಂತೆ

ಮೈಸೂರು, ಜು.2(ಜಿಎ)–ತಮ್ಮ ಬನವಾಸಿ ಹೆಸರಿನ ತೋಟದಲ್ಲಿ ಬೆಳೆದಿರುವ ಮಾವಿನ ಹಣ್ಣುಗಳ ಸಂತೆಯನ್ನು ಜು.3 ಮತ್ತು 4ರಂದು ಕುವೆಂಪುನಗರದ ರಾಘವೇಂದ್ರ ಸ್ವಾಮಿ ಮಠದ ಹತ್ತಿರದ ಅರಳಿ ಕಟ್ಟೆಯಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತೋಟದ ಮಾಲೀಕ ಟಿ.ಜಿ.ಎಸ್.ಅವಿನಾಶ್ ತಿಳಿಸಿದರು.



ಕಳೆದ 32 ವರ್ಷಗಳಿಂದ ಯಾವುದೇ ರಾಸಾಯನಿಕ ಬಳಸದೇ ತೆಂಗು, ಅಡಿಕೆ, ಬಾಳೆ, ಪಪ್ಪಾಯ, ಮೂಸಂಬಿ, ಕಿತ್ತಳೆ, ಸಪೋಟ ಹಾಗೂ ತರಕಾರಿಗಳನ್ನು ಬೆಳಕಿನ ಬೇಸಾಯ ಪದ್ಧತಿಯಲ್ಲಿ ಬೆಳೆಯಲಾಗುತ್ತಿದೆ. ಹಾಗೆಯೇ ಬೆಳೆದ ಮಲ್ಲಿಕಾ ಮಾವಿನ ಹಣ್ಣುಗಳ ಸಂತೆ ಎರಡೂ ದಿನ ಬೆಳಗ್ಗೆ 10.30ರಿಂದ ಸಂಜೆ 7ರವರೆಗೆ ನಡೆಯಲಿದೆ. ಗೋಷ್ಠಿಯಲ್ಲಿ ಸಿದ್ದರಾಜು ಇದ್ದರು.

ನಿಧನ

ಕೆ.ಎಂ.ಬಸಪ್ಪ



ಮೈಸೂರು, ಜು.2–ಮೈಸೂರಿನ ಟಿ.ಕೆ.ಬಡಾವಣೆ ನಿವಾಸಿ ಹಾಗೂ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಕೆ.ಎಂ.ಬಸಪ್ಪ (91) ಮಂಗಳವಾರ ನಿಧನರಾದರು. ಮೃತರು ಪತ್ನಿ ಸಿ.ಎ.ಲೀಲಾವತಿ, ಮೂವರು ಪುತ್ರಿಯರು, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರ ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಬ್ದುಲ್ ಗೌಸ್



ಮೈಸೂರಿನ ಹನುಮಂತನಗರ ನಿವಾಸಿ ಅಬ್ದುಲ್ ಗೌಸ್ (42) ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ತಂದೆ, ಸಹೋದರರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಮುಸ್ಲಿಮ್ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಲಲಿತಾ ಕೃಷ್ಣ ಶಾಸ್ತ್ರಿ



ಮೈಸೂರಿನ ಉತ್ತರಾದಿ ಮಠದ ಬಳಿಯ ಎಸ್.ಎನ್.ಪಂಡಿತ್ ರಸ್ತೆಯಲ್ಲಿ ವಾಸಿಸುತ್ತಿದ್ದ ನಿವೃತ್ತ ಶಿಕ್ಷಕಿ ಶ್ರೀಮತಿ ಲಲಿತಾ ಕೃಷ್ಣ ಶಾಸ್ತ್ರಿ (82) ಬುಧವಾರ ನಿಧನರಾದರು. ಮೃತರು ಓರ್ವ ಪುತ್ರಿ, ಪುತ್ರ ಹಾಗೂ ಮೊಮ್ಮಕ್ಕಳು ಮತ್ತು ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿನ್ನಮ್ಮ



ಹಿನಕಲ್‌ನ ನಿವಾಸಿ, ದಿವಂಗತ ಹೆಚ್.ಬಿ.ನನ್ನಯ್ಯನವರ ಪತ್ನಿ ಚಿನ್ನಮ್ಮ (83) ಬುಧವಾರ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಾಳೆ (ಜು.3ರ ಗುರುವಾರ) ಬೆಳಗ್ಗೆ 12 ಗಂಟೆಗೆ ವಿಜಯನಗರದ ಮುಕ್ತಿಧಾಮ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವಕ್ಕೆ ಭಾರತದ ರಂಗಭೂಮಿ ಮಾದರಿಯಾದರೆ, ಭಾರತಕ್ಕೆ ಕರ್ನಾಟಕದ ರಂಗಭೂಮಿ ಮಾದರಿ

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಮತ

ಮೈಸೂರು, ಜು.2(ಬಿಎಲ್‌ಯು)– ವಿಶ್ವಕ್ಕೆ ಭಾರತದ ರಂಗಭೂಮಿ ಮಾದರಿಯಾದರೆ ಭಾರತಕ್ಕೆ ಕರ್ನಾಟಕದ ರಂಗಭೂಮಿ ಮಾದರಿಯಾಗಿದ್ದು, ರಂಗಭೂಮಿ ಕ್ಷೇತ್ರದಲ್ಲಿ ಕರುನಾಡಿಗೆ ಐತಿಹಾಸಿಕ ಮಹತ್ವವಿದೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಲಕ್ಷ್ಮಿಪುರಂನ ವಿಶ್ವವಿದ್ಯಾನಿಲಯದ ಕೆಎಸ್‌ಜಿಎಚ್ ಸಭಾಂಗಣದಲ್ಲಿ ಇಂದು 15 ದಿನಗಳ ರಂಗ ಸಂಗೀತ ಮತ್ತು ಅಭಿನಯ ರಂಗಗೀತೆಗಳ ಕಲಿಕಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸಿನಿಮಾ ಕ್ಷೇತ್ರಕ್ಕೆ ರಂಗಭೂಮಿಯೇ ಬೇರಾಗಿದ್ದು, ರಂಗಭೂಮಿ ಪ್ರಭಾವದಿಂದ ಸಿನಿಮಾ ರಂಗ ಹಲವು ಸ್ವರೂಪ ಪಡೆದಿದೆ ಎಂದರು.

ಮೈಸೂರು ಮಹಾರಾಜರು ವಿದೇಶಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿನ ರಂಗಭೂಮಿಯ ಬಗ್ಗೆ ಅಧ್ಯಯನ ಮಾಡಿ ಮೈಸೂರು ರಾಜ್ಯದಲ್ಲಿ ಅದೇ ಮಾದರಿಯ ರಂಗಭೂಮಿ ಚಟುವಟಿಕೆ ನಡೆಸಲು ಉತ್ತೇಜನ ನೀಡಿದರು. ವೃತ್ತಿ ರಂಗಭೂಮಿಯ ಬೇರುಗಳು ಗಟ್ಟಿಗೊಳ್ಳಲು ಕಾರಣೀಭೂತರಾದರು ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ತಿಳಿಸಿದರು.

ರಾಮಾಯಣ ಮತ್ತು ಮಹಾಭಾರತದ ಕಥಾ ವಸ್ತುಗಳು ಪೌರಾಣಿಕ ನಾಟಕಗಳಾಗಿ ಪ್ರದರ್ಶನಗೊಳ್ಳುತ್ತಿದ್ದು, ರಂಗಭೂಮಿ ಶ್ರೀಮಂತವಾಗಿತ್ತು. ಆದರೆ ಕಾಲಕ್ರಮೇಣ ಸಿನಿಮಾ ಸೇರಿದಂತೆ ಹಲವು ರೀತಿಯ ಆಧುನಿಕ ಮನೋ ರಂಜನೆ ಪ್ರಭಾವದಿಂದ ರಂಗಭೂಮಿ ಸ್ವಲ್ಪ ಮಟ್ಟಿಗೆ ಕಳೆಗುಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಹಳಷ್ಟು ವೃತ್ತಿ ನಾಟಕ ಕಂಪನಿಗಳು ನಾಟಕಗಳಿಗೆ ಐಷಾರಾಮಿ ಸ್ವರೂಪ ನೀಡಲು ದುಂದುವೆಚ್ಚ ಮಾಡಿದವು. ಆದರೆ ವೆಚ್ಚ ಸರಿದೂಗಿಸುವಷ್ಟು ಆದಾಯ ಬರಲಿಲ್ಲ. ಇದರಿಂದ ನಾಟಕ ಕಂಪನಿಗಳು ನಷ್ಟದ ಹಾದಿಯಲ್ಲಿ ಸಾಗಿದವು. ಅಲ್ಲದೆ ಆ ವೇಳೆಗೆ ಆಧುನಿಕ ಮನೋರಂಜನೆಗಳು ರಂಗಭೂಮಿ ಮೇಲೆ ಪರಿಣಾಮ ಬೀರಿತು. ಇಷ್ಟೆಲ್ಲಾ ಗಾಢ ಪ್ರಭಾವ ಬೀರಿದರೂ ರಂಗಭೂಮಿ ಚಟುವಟಿಕೆಗಳು ಮರೆಯಾಗಿಲ್ಲ ಎಂದು ಸಮಾಧಾನ ವ್ಯಕ್ತಪಡಿಸಿದರು.

ಯಾವುದೇ ರೀತಿಯ ಪ್ರಭಾವ ಇದ್ದರೂ ರಂಗಭೂಮಿ ತನ್ನ ಸಿರಿವಂತಿಕೆ ಕಳೆದುಕೊಂಡಿಲ್ಲ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ರಂಗಭೂಮಿ ಇನ್ನು ಜೀವಂತವಾಗಿದೆ. ಬಹಳಷ್ಟು ನಾಟಕಗಳು ಇಂದಿಗೂ ಪ್ರದರ್ಶನಗೊಳ್ಳುತ್ತಿವೆ. ಸಿನಿಮಾ, ಟಿವಿ ಸೇರಿದಂತೆ ಆಧುನಿಕ ಮನೋರಂಜನೆ ಪ್ರಭಾವ ಬೀರುತ್ತಿದ್ದರೂ ಅಲ್ಲಿನ ಜನರು ಇಂದಿಗೂ ನಾಟಕ ನೋಡುತ್ತಿದ್ದು, ರಂಗಭೂಮಿ ಅವರನ್ನು ಆಕರ್ಷಿಸುತ್ತಿದೆ ಎಂದು ಪ್ರೊ.ನಾಗೇಶ್ ಬೆಟ್ಟಕೋಟೆ ಹೇಳಿದರು.



ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯ ಕೆಎಸ್‌ಜಿಎಚ್ ಸಭಾಂಗಣದಲ್ಲಿ ಬುಧವಾರ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರು ಹಾರ್ಮೋನಿಯಂ ನುಡಿಸುವ ಮೂಲಕ 15 ದಿನಗಳ ರಂಗ ಸಂಗೀತ ಮತ್ತು ಅಭಿನಯ ರಂಗಗೀತೆಗಳ ಕಲಿಕಾ ಕಾರ್ಯಾಗಾರ ಉದ್ಘಾಟಿಸಿದರು.

ವರ್ಷಕ್ಕೆ 15 ಸಾವಿರ ನಾಟಕ ಪ್ರದರ್ಶನ; 75 ಕೋಟಿ ಸಂಗ್ರಹ

ಆಧುನಿಕತೆಯ ಪ್ರಭಾವ ಬಹಳಷ್ಟು ಇದ್ದರೂ ವರ್ಷಕ್ಕೆ 15 ಸಾವಿರಕ್ಕೂ ಹೆಚ್ಚು ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದು, 75 ಕೋಟಿ ಹಣ ನಾಟಕ ಪ್ರದರ್ಶನದಿಂದ ಸಂಗ್ರಹವಾಗುತ್ತಿದೆ ಎಂದು ದಾವಣಗೆರೆಯ ವೃತ್ತಿ ರಂಗಭೂಮಿಯ ನಿರ್ದೇಶಕ ಮಲ್ಲಿಕಾರ್ಜುನ ಕಡಕೊಳ ಹೇಳಿದರು.

ರಂಗಭೂಮಿಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಲು ವೃತ್ತಿ ರಂಗಭೂಮಿಯನ್ನು ಪುನರುಜ್ಜೀವನಗೊಳಿಸಬೇಕು. ಮೈಸೂರಿನ ರಂಗಾಯಣದಲ್ಲಿ ಕಾರಂತ ರಂಗಭೂಮಿ ಮತ್ತು ಆಧುನಿಕ ರಂಗಭೂಮಿಯನ್ನು ಅನುಸರಿಸುತ್ತಿದ್ದರೆ, ದಾವಣಗೆರೆಯ ವೃತ್ತಿರಂಗಭೂಮಿ ಬೇರೆ ರೀತಿಯ ವಿಶಿಷ್ಟ ಸ್ವರೂಪವನ್ನು ಕಂಡುಕೊಂಡಿದೆ. ಕೆಲವು ರಾಜ್ಯಗಳಲ್ಲಿ ರಂಗಭೂಮಿಯನ್ನು ವಿಭಜಿಸಲಾಗಿದೆ. ಆದರೆ ಮಹಾರಾಷ್ಟ್ರದಲ್ಲಿ ವಿಭಜನೆ ಮಾಡದೆ ಸಮಗ್ರವಾಗಿ ರಂಗಭೂಮಿ ಹಿಡಿದಿಟ್ಟುಕೊಂಡು ಉಳಿಸಿ, ಬೆಳೆಸಲಾಗುತ್ತಿದೆ ಎಂದು ಹೇಳಿದರು.

ಇಂದಿಗೂ ದಕ್ಷಿಣ ಕರ್ನಾಟಕದಲ್ಲಿ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ಸಂವೇದನಾಶೀಲತೆ ಇರುವ ಕಾರಣ ರಂಗಭೂಮಿ ಇನ್ನೂ ಜೀವಂತವಾಗಿದೆ. ಆದರೆ ಮೊದಲಿಗಿಂತ ಈಗ ಬೇರೆ ಸ್ವರೂಪ ಪಡೆದುಕೊಂಡಿದೆ. ಈಗಿನ ಆಲೋಚನೆಗೆ ತಕ್ಕ ಹಾಗೆ ವಿಶಿಷ್ಟ ರೀತಿಯಲ್ಲಿ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ ಎಂದು ಮಲ್ಲಿಕಾರ್ಜುನ ತಿಳಿಸಿದರು.

ತಾವರೆಕಟ್ಟೆ ಗ್ರಾಮದಲ್ಲಿ ದಾರಿ ಬಂದ್ ಮಾಡಿ ಕೆಎಸ್‌ಆರ್‌ಟಿಸಿ ನಿವೃತ್ತ ಚಾಲಕನಿಂದ ಕಿರುಕುಳ

ಮೈಸೂರು,ಜು.2(ಜಿಎ)–ಚಾಮುಂಡಿ ಬೆಟ್ಟದ ತಾವರೆಕಟ್ಟೆ ಗ್ರಾಮದಲ್ಲಿ ವಾಸವಾಗಿರುವ ತಮಗೆ ಮೂಲತಃ ಆಂಧ್ರದಿಂದ ಬಂದು ಕೆಎಸ್‌ಆರ್‌ಟಿಸಿ ನಿವೃತ್ತ ಚಾಲಕ ಶ್ರೀನಿವಾಸ್ ಅವರು ತಮ್ಮ ಮನೆ ದಾರಿ ಬಂದ್ ಮಾಡುವ ಮೂಲಕ ಕಿರುಕುಳ ನೀಡುತ್ತಿದ್ದಾರೆ. ಈ ಕುರಿತು ಡಿಸಿ, ಜಿಪಂ ಸಿಇಒ, ಸ್ಥಳೀಯ ಗ್ರಾಮ ಪೊಲೀಸರಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ನಿವಾಸಿ ಮಹದೇವು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ ಆಪಾದಿಸಿದರು.

ಶ್ರೀನಿವಾಸ್ ತಮ್ಮ ಮನೆ ದಾರಿ ಬಂದ್ ಮಾಡಿರುವುದಲ್ಲದೆ, ಜಲ ಜೀವನ್ ಯೋಜನೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಬಂದ ಗುತ್ತಿಗೆದಾರರಿಗೆ ಅಡ್ಡಿಯುಂಟು ಮಾಡಿದ್ದಾರೆ. ತಿರುಗಾಡಲು ರಸ್ತೆ ಬಿಡುವುದಿಲ್ಲ, ಕುಡಿಯುವ ನೀರೂ ಬಾರದಂತೆ ನೋಡಿಕೊಳ್ಳುತ್ತೇನೆ. ಮನೆ ಖಾಲಿ ಮಾಡಿ ಹೋಗಿ ಎಂದು ಧಮ್ಕಿ ಹಾಕುತ್ತಿದ್ದಾರೆ. ಈ ಕುರಿತು ಡಿಸಿ, ಜಿಪಂ ಸಿಇಒ, ಚಾಮುಂಡಿಬೆಟ್ಟ ಗ್ರಾಪಂಗೆ ದೂರು ಸಲ್ಲಿಸಿದರೂ ಪ್ರಭಾವ ಬೀರುವ ಮೂಲಕ ಯಾವುದೇ ಕ್ರಮವಾಗದಂತೆ ನೋಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಕೆ.ಆರ್.ಠಾಣೆಗೆ ದೂರು ನೀಡಿದರೂ ಸಿವಿಲ್ ವಿಷಯವಾದ ಕಾರಣ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎನ್ನುತ್ತಾರೆ. ಶ್ರೀನಿವಾಸ್ ಧಮ್ಕಿ ಹಾಕುವುದು, ಜೀವನ ನಡೆಸುವುದಕ್ಕೆ ತೊಂದರೆ ಕೊಡುವುದನ್ನು ತಿಳಿಸಿದರೂ ಪ್ರಯೋಜನವಾಗುತ್ತಿಲ್ಲ. ಹೀಗಾಗಿ ಪೊಲೀಸ್ ಆಯುಕ್ತರು ಈ ಬಗ್ಗೆ ಗಮನಹರಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಸೋಮಶೇಖರ್, ರಂಗಸ್ವಾಮಿ, ತಾವರೆಕಟ್ಟೆ ಪುಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎ.ಬಿ.ವಿಜಯ ಕುಮಾರ್ ಅವರ ಮಾರ್ಗದರ್ಶನದಲ್ಲಿ ಪಿ.ಇ. ಇಂದಿರಾ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಬೀಳ್ಕೊಡುಗೆ...

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ 34 ವರ್ಷ ಸೇವೆ ಸಲ್ಲಿಸಿ ಸಹಾಯಕ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಶ್ರೀಮತಿ ಗಾಯಿತ್ರಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿಯ ಎಂ ರಾಮಕೃಷ್ಣ, ಸಿ.ಚಂದ್ರಶೇಖರ್, ರಾಜೇಶ್ವರಿ, ಜಿ.ನಿರಂಜನ್ ಉಪಸ್ಥಿತರಿದ್ದರು.

ಜು.6ರಂದು ಸಂಗೀತ ರಸ ಸಂಜೆ

ಮೈಸೂರು, ಜು.2(ಜಿಎ)– ಮೈಸೂರು ಮೋಹನ್ ಅವರ ಸಾರಥ್ಯದ ಸ್ವರಾಂಜಲಿ ಸಂಸ್ಥೆ ವತಿಯಿಂದ ಮೈಸೂರಿನ ಜೆ.ಕೆ. ಗ್ರೌಂಡ್‌ನಲ್ಲಿರುವ ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಜು.6ರಂದು ಸಂಗೀತ ರಸ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ಹೆಚ್.ಅಶ್ವಥ್ ನಾರಾಯಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ನಾಗರಾಜ್ ವಿ.ಭೈರಿ, ಲಯನ್ಸ್ ಸಂಸ್ಥೆಯ ಮಾಜಿ ಜಿಲ್ಲಾ ರಾಜ್ಯಪಾಲರಾದ ಲಯನ್ ದೇವಿಪ್ರಸಾದ್, ಹಿರಿಯ ಸಮಾಜಸೇವಕ ಡಾ.ಕೆ.ರಘುರಾಂ ವಾಜಪೇಯಿ, ವಕೀಲ ಚಂದ್ರಶೇಖರ್, ಸಾಫ್ಟ್‌ವೇರ್ ಎಂಜಿನಿಯರ್ ವಿನಯ್, ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಮಲ್ಲಣ್ಣ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಹಿಂದಿ ಸಿನಿಮಾಗಳ 30 ಹಾಡುಗಳನ್ನು, ಗಾಯಕರಾದ ಡಾ.ಎಂ.ಎಸ್.ನಟಶೇಖರ್, ಚಂದ್ರಶೇಖರ್, ವಿ.ಎನ್.ಪ್ರಸಾದ್, ಟಿ.ಕುಮಾರ್, ಪೃಥ್ವಿ ನಾಡಿಗ್, ರಂಜಿತಾ ಶ್ರೀನಾಥ್, ಡಾ.ಸೀತಾಲಕ್ಷ್ಮಿ ಮತ್ತಿತರರು ಪ್ರಸ್ತುತಪಡಿಸಲಿದ್ದಾರೆ. ಕೀಬೋರ್ಡ್‌ನಲ್ಲಿ ಬಸು ರಾಣೆಬೆನ್ನೂರು, ತಬಲಾದಲ್ಲಿ ಗೌತಮ್, ರಿದಂ ಪ್ಯಾಡ್‌ನಲ್ಲಿ ವಿನ್ಸೆಂಟ್, ಲೀಡ್ ಗಿಟಾರ್‌ನಲ್ಲಿ ವಿನಯ್, ಕಾಂಗೋದಲ್ಲಿ ಪ್ರದೀಪ್ ಸಾಥ್ ನೀಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಡಾ.ಎಂ.ಎಸ್.ನಟಶೇಖರ್, ಚಂದ್ರಶೇಖರ್, ಡಾ.ಸೋಮನಾಥ್, ಪ್ರದೀಪ್, ತಬಲ ವಾದಕ ರವಿಕಿರಣ್ ಉಪಸ್ಥಿತರಿದ್ದರು.

ಜು.6, ಡಾ.ಬಾಬು ಜಗಜೀವನ್ ರಾಂ ಪುಣ್ಯಸ್ಮರಣೆ



ಮೈಸೂರು, ಜು.2– ಜುಲೈ 6ರಂದು ಬೆಳಗ್ಗೆ 9.30 ಗಂಟೆಗೆ ಜಿಲ್ಲಾಡಳಿತ ವತಿಯಿಂದ ಡಾ. ಬಾಬು ಜಗಜೀವನರಾಂ ಅವರ 39ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮೈಸೂರು ರೈಲ್ವೆ ನಿಲ್ದಾಣದ ಮುಂಭಾಗದ ವೃತ್ತದಲ್ಲಿರುವ ಡಾ.ಬಾಬು ಜಗ ಜೀವನರಾಂ ಅವರ ಪುತ್ಥಳಿಗೆ ಮಾಲಾರ್ಪಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.07.2025 ಗುರುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 9 ಗಂಟೆಯಿಂದ ರುದ್ರ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾ ವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶತ್ರುಸ್ತಂಭನಕಾರಿಣಿ ಶ್ರೀ ಬಗಳಾಮುಖೀ ಹೋಮ, ಶ್ರೀ ದಶವಾರಾಹಿ ಅವರಣಾಂಗ ಹೋಮ, ಶ್ರೀ ಲಘುವಾರಾಹಿ, ಶ್ರೀ ತಿರಸ್ಕರಣೀವಾರಾಹಿ, ಶ್ರೀಸ್ವಪ್ನವಾರಾಹಿ, ಶ್ರೀ ಧೂಮ್ರವಾರಾಹಿ, ಶ್ರೀ ಕಿರಾತವಾರಾಹಿ, ಶ್ರೀ ಅಶ್ವಾರೂಢವಾರಾಹಿ, ಶ್ರೀವಾರಾಹಿಪರಮೇಶ್ವರಿ, ಶ್ರೀ ಶತ್ರುಸಂಹಾರವಾರಾಹಿ, ಶ್ರೀ ವನದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಬಲಿಹರಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 11ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 11 ಗಂಟೆಗೆ ಅಮ್ಮನವರ ದೇವಿಯ ವಿಗ್ರಹವನ್ನು ಶ್ರೀರಂಗಪಟ್ಟಣದಲ್ಲಿರುವ ನಿಮಿಷಾಂಬ ದೇವಸ್ಥಾನದ ಬಳಿಯ ಕಾವೇರಿ ನದಿಯಲ್ಲಿ ವಿಸರ್ಜನೆ, ಸ್ಥಳ: ಸಮಿತಿ ಆವರಣ, ಕುವೆಂಪುನಗರ.

■ **ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು, ಶೇಷಾದ್ರಿಪುರಂ ಪದವಿ ಕಾಲೇಜು, ಕನ್ನಡ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ :** ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಜನ್ಮ ದಿನಾಚರಣೆ, ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರೊ. ನೀಲಗಿರಿ ಎಂ.ತಳವಾರ ಅವರಿಂದ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಬದುಕು ಮತ್ತು ಸಾಧನೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಆಶಯ ನುಡಿ: ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಪ್ರೊ.ಎಸ್.ಶಿವರಾಜಪ್ಪ, ಡಾ.ಕೆ.ಸೌಮ್ಯ ಈರಪ್ಪ, ಡಾ.ಸಿ.ಪಿ.ಲಾವಣ್ಯ, ಶರಣ ದೇವರಾಜ ಪಿ.ಚಿಕ್ಕಳ್ಳಿ, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಬೆಳಗ್ಗೆ 11.15ಕ್ಕೆ.

■ **ರವಿವರ್ಮ ಚಿತ್ರಕಲಾ ಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ಉಪನ್ಯಾಸ ಕಾರ್ಯಕ್ರಮ, ಸಿನಿಮೊಟೋಗ್ರಫಿ ಮತ್ತು ಫೋಟೋಗ್ರಫಿ, ಉದ್ಘಾಟನೆ : ಖ್ಯಾತ ಚಲನಚಿತ್ರ ನಟ ಬಿ. ಸುರೇಶ್, ಉಪಸ್ಥಿತರು : ರಂಗಭೂಮಿ ಮತ್ತು ನೃತ್ಯ ಕಲಾವಿದೆ ಆರ್. ರಶ್ಮಿ, ಹಿರಿಯ ಛಾಯಾಚಿತ್ರ ಕಲಾವಿದ ಎಂ.ಆರ್. ಮಂಜುನಾಥ್, ರವಿವರ್ಮ ಚಿತ್ರಕಲಾ ಶಾಲೆ ಪ್ರಾಚಾರ್ಯ ಶಿವಕುಮಾರ ಕೆಸರಮಡು, ಸ್ಥಳ: ರವಿವರ್ಮ ಚಿತ್ರಕಲಾ ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ಸಮರ್ಥನಂ ಅಂಗವಿಕಲರ ಸಂಸ್ಥೆ :** ಬುದ್ಧಿ ವಿಕಲಚೇತನ ಮಕ್ಕಳಿಗಾಗಿ ಫಿಸಿಯೋಥೆರಪಿ ಕೇಂದ್ರ ಹಾಗೂ ವೃತ್ತಿಪರ ತರಬೇತಿ ಕೇಂದ್ರಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಕೆ.ಹರೀಶ್ ಗೌಡ, ಅತಿಥಿಗಳು : ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಶಂಕರಗೌಡ ಪಾಟೀಲ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮೈಸೂರು ಗ್ರಾಮಾಂತರ ತಿಬ್ಬಯ್ಯ, ಕರ್ನಾಟಕ ರಾಜ್ಯ ಅಂಗವಿಕಲರ ಒಕ್ಕೂಟದ ಅಧ್ಯಕ್ಷ ಶ್ರೀಧರ್ ದೀಕ್ಷಿತ್, ಸಮರ್ಥನಂ ಅಂಗವಿಕಲರ ಸಂಸ್ಥೆ ಟ್ರಸ್ಟಿ ಬುಸೇಗೌಡ, ಸಮರ್ಥನಂ ಅಂಗವಿಕಲರ ಸಂಸ್ಥೆ ಪ್ರಾಂಶುಪಾಲರಾದ ಡಾ.ಕೆ.ಗೀತಾ, ಸಮರ್ಥನಂ ಅಂಗವಿಕಲರ ಸಂಸ್ಥೆ ಫೆಸಿಲಿಟಿ ಮ್ಯಾನೇಜರ್ ಹೆಚ್.ವಿ.ಪ್ರಸನ್ನಕುಮಾರ್, ಸ್ಥಳ: ಸಮರ್ಥನಂ ಶಾಲೆ: ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಿ. ಪುಷ್ಪಲತಾ ಹಾಗೂ ಜಯಂತಿ ವಿ.ಭಟ್, ವ್ಯಾಖ್ಯಾನ: ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು–ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು, ವಿಷಯ–ಸುರಕ್ಷಿತ ಆಹಾರ, ಅಹಾರ ಉದ್ಯಮಗಳ ನಿರ್ವಹಣೆ ಹಾಗೂ F.S.S.A.I. ಕಾರ್ಯನಿರ್ವಹಣೆ, ಭಾಗವಹಿಸುತ್ತಾರೆ–ಮೈಸೂರಿನ ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆಯ ಅಂಕಿತ ಅಧಿಕಾರಿ ಡಾ.ಎಸ್.ಎಲ್.ರವೀಂದ್ರ, ಪ್ರಸ್ತುತಿ–ಎನ್.ಕೇಶವಮೂರ್ತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕರುಣಾಕರ್, ಪ್ರಸ್ತುತಿ: ಶಾಂತಕುಮಾರ್ .ಜಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ–ಮೈಸೂರು ಜಿ.ಗುರುರಾಜ್ ಮತ್ತು ಸಂಗಡಿಗರಿಂದ ಧರೆಗೆ ದೊಡ್ಡವರ ಕಥೆ, 4.30 ಸಂಧ್ಯರಾಗ, 6.50 ಕೃಷಿರಂಗ–ಕಿಸಾನ್‌ವಾಣಿ –ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ ಕಾರ್ಯ ಚಟುವಟಿಕೆ ಕುರಿತು ಸಂವಾದ, ಭಾಗವಹಿಸುತ್ತಾರೆ–K.E.P.P.E.C. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಮತ್ತು ಜಂಟಿ ಕೃಷಿ ನಿರ್ದೇಶಕ ಶಿವಕುಮಾರ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕನ್ನಡ ಭಾರತಿ, 10.00 ರಾಷ್ಟ್ರೀಯ ಲಘುಸಂಗೀತ ಕಾರ್ಯಕ್ರಮ, ಗೋಪಾಲ್‌ಸಿಂಗ್ ಅವರಿಂದ ರಾಜಸ್ಥಾನಿ ಜನಪದ ಸಂಗೀತ, ವಂದನ ಕುಮಾರಿ ಅವರಿಂದ ಭೋಜ್ ಪುರಿ ಜನಪದ ಸಂಗೀತ, 10.30 ಸವಿನೆನಪು.



ನಗರ ಪಾಲಿಕೆಯಲ್ಲಿ ಇ-ಖಾತಾ ದಂಧೆ

ಕಚೇರಿ ಬಳಿ ಹೋದರೆ ಸಾಕು; ಎಷ್ಟು ಕೊಡ್ತಿರಾ... ಐದಾಗುತ್ತೆ! ಹತ್ತಾಗುತ್ತೆ!! ಇಪ್ಪತ್ತೈದಾಗುತ್ತೆ!!!

● ಪಾಲಿಕೆ ಅಧಿಕಾರಿಗಳು ಮಧ್ಯವರ್ತಿಗಳ ನಂಬಬೇಡಿ ಅಂತಾರೆ... ● ಆದರೆ ಅವರು ಪಾಲಿಕೆಯ ಸಿಬ್ಬಂದಿಯೋ ಮಧ್ಯವರ್ತಿಗಳೋ ಜನರಿಗೇನು ಗೊತ್ತು ● ಆಸ್ತಿ ಮಾರಾಟಕ್ಕೆ ತುರ್ತು ಇ-ಖಾತಾ ಬೇಕಾಗಿರುವುದರಿಂದ ಕೇಳಿದಷ್ಟು ಹಣ ಕೊಟ್ಟು ದಾಖಲೆ ಪಡೆದವರೇ ಹೆಚ್ಚು!

ಮೈಸೂರು, ಜು.2(ಎಂಕೆ)- ಇ-ಖಾತಾ ಹೆಸರಿನಲ್ಲಿ ಹಗಲು ದರೋಡೆ ವ್ಯಾಪಕವಾಗಿ ನಡೆಯುತ್ತಿದ್ದು, ಮಧ್ಯವರ್ತಿಗಳು ಆಸ್ತಿ ಮಾಲೀಕರಿಂದ ಮನಸೋ ಇಚ್ಛೆ ಹಣ ವಸೂಲಿ ಮಾಡುತ್ತಿದ್ದಾರೆ..!

ಆಸ್ತಿಗಳ ಮಾರಾಟ, ಖರೀದಿ ಮತ್ತು ಕಟ್ಟಡ ನಕ್ಷೆ ಮಂಜೂರಾತಿಗೆ ಇ-ಖಾತಾ ಕಡ್ಡಾಯವಾಗಿದ್ದು, ಸರ್ವರ್ ಸಮಸ್ಯೆ ಹಾಗೂ ದಾಖಲೆಗಳ ಕೊರತೆಯಿಂದ ಸಾರ್ವಜನಿಕರು ಪರದಾಡುತ್ತಿರುವುದನ್ನು ಬಂಡವಾಳ ಮಾಡಿಕೊಂಡಿರುವ ಮಧ್ಯವರ್ತಿಗಳು ಇ-ಖಾತಾ ಮಾಡಿಸಿಕೊಡುವುದಾಗಿ ನಂಬಿಸಿ, ಹಣ ಪೀಕುವುದು ಅಡೆ-ತಡೆ ಇಲ್ಲದೆ ಮುಕ್ತವಾಗಿ ನಡೆಯುತ್ತಿದೆ.

ರಾಜ್ಯಾದ್ಯಂತ ಇ-ಖಾತಾ ಅಭಿಯಾನ ನಡೆಯುತ್ತಿದೆ. ಎ-ಖಾತಾ(ಅಧಿಕೃತ ಆಸ್ತಿ) ಮತ್ತು ಬಿ-ಖಾತೆ(ಅನಧಿಕೃತ ಆಸ್ತಿ)ಯ ಡಿಜಿಟಲ್ ಆವೃತ್ತಿಯನ್ನು ಇ-ಖಾತಾ ಎನ್ನಲಾಗುತ್ತದೆ. ಆಸ್ತಿ ಮಾಲೀಕರಿಂದ ಫೋಟೋ ಸಹಿತ ಪೂರಕ ದಾಖಲೆಗಳನ್ನು ಪಡೆದು, ಅವುಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಇ-ಆಸ್ತಿ ವೆಬ್‌ಸೈಟ್ ಮೂಲಕ ದೃಢೀಕರಿಸಿ, ಆಸ್ತಿಯ ಮಾಲೀಕತ್ವದ ನಿಖರ ಮಾಹಿತಿ ನೀಡುವ ಕಂಪ್ಯೂಟರ್ ಆಧಾರಿತ ಪ್ರಮಾಣ ಪತ್ರವಾಗಿದೆ.

ಇ-ಖಾತೆ ಮಾಡಿಸಲು ನಗರಪಾಲಿಕೆಗಳು, ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ಮಾಲೀಕರು ದುಂಬಾಲು ಬೀಳುತ್ತಿದ್ದಾರೆ. ಇದೇ ಸುವರ್ಣಾವಕಾಶ ಎಂಬುದನ್ನರಿತು ಹಾಸಿ ಭವಾನಿ ಬಲೆ ಬೀಸುತ್ತಿರುವ ಮಧ್ಯವರ್ತಿಗಳು, ಆಸ್ತಿ ಮಾಲೀಕರಿಂದ ವಸೂಲಿ ದಂಧೆಗೆ ಇಳಿದಿದ್ದಾರೆ. ಇದರ ನಡುವೆ ಕಳೆದ ಎರಡು ವಾರಗಳಿಂದ ಸರ್ವರ್ ಸಮಸ್ಯೆ ಎದುರಾಗಿರುವುದು ಮಧ್ಯವರ್ತಿಗಳ ಉಪಟಳವನ್ನು ಇನ್ನಷ್ಟು ಹೆಚ್ಚಿಸಿದೆ.

ಇತ್ತ ಆಸ್ತಿ ದಾಖಲೆಗಳು ಸರಿಯಿದ್ದರೆ, ಅತ್ತ ಸರ್ವರ್ ಇರುವುದಿಲ್ಲ ಅರ್ಜಿ ಸಲ್ಲಿಸಲು ಗಂಟೆಗಟ್ಟಲೆ ಕಾಯಬೇಕು. ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗದೆ ಪರದಾಡುವಂತಾಗಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡರೆ, ಕೆಲವೊಂದು ದೋಷಗಳಿಂದಾಗಿ ದೃಢೀಕರಣ ಸಾಧ್ಯವಾಗುತ್ತಿಲ್ಲ. ಇ-ಖಾತಾದಲ್ಲಿ ತಪ್ಪುಗಳಿದ್ದರೆ, ತಿದ್ದುಪಡಿ ಸಾಧ್ಯವಾಗುತ್ತಿಲ್ಲ ಇಂಥಹ ಸಂದಿಗ್ಧ ಪರಿಸ್ಥಿತಿ ಸಿಲುಕಿರುವ ಜನರು, ಹಣವನ್ನೂ ಕಳೆದುಕೊಳ್ಳುವಂತಾಗಿದೆ.

ಇ-ಖಾತಾ ಕೋರಿ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ ಬಳಿಕ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡಬೇಕು. ಮಾಹಿತಿ ಲಭ್ಯವಿಲ್ಲದಿದ್ದಾಗ ಅಥವಾ ಪಾಲಿಕೆ ದಾಖಲೆಗಳೊಂದಿಗೆ ಹೊಂದಿಕೆಯಾಗದಿದ್ದರೆ ಮಾತ್ರ ಪ್ರಕರಣವನ್ನು ಸಹಾಯಕ ಕಂದಾಯ ಅಧಿಕಾರಿಗೆ ವರ್ಗಾಯಿಸಲಾಗುತ್ತದೆ.

ಮಧ್ಯವರ್ತಿಗಳನ್ನು ಸಂಪರ್ಕಿಸಬೇಡಿ...

"ಮೈಸೂರು ನಗರದಲ್ಲಿ ಸುಮಾರು 2.23 ಲಕ್ಷ ಅಧಿಕೃತ ಆಸ್ತಿಗಳಿದ್ದು, 1.85 ಲಕ್ಷ ಅನಧಿಕೃತ ಆಸ್ತಿಗಳಿವೆ. ಸುಮಾರು 30-35 ಸಾವಿರ ಇ-ಖಾತೆ ಮಾಡಿಕೊಡಲಾಗಿದೆ. ಆಸ್ತಿ ಮಾಲೀಕರು ನೇರವಾಗಿ ವಲಯ ಕಚೇರಿಗಳಿಗೆ ಭೇಟಿ ನೀಡಿ ಇ-ಖಾತೆ ಮಾಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳನ್ನು ಸಂಪರ್ಕಿಸಬೇಡಿ. ಅಕಸ್ಮಾತ್ ಮಧ್ಯವರ್ತಿಗಳೇ ತಮ್ಮನ್ನು ಸಂಪರ್ಕಿಸಿ ಹಣ ಕೇಳಿದರೆ ಕೂಡಲೇ ಮಾಹಿತಿ ನೀಡಿ.



- ಸೋಮಶೇಖರ್, ಉಪ ಆಯುಕ್ತರು(ಕಂದಾಯ), ಮೈಸೂರು ನಗರಪಾಲಿಕೆ

ಆದರೆ, ಸಹಾಯಕ ಕಂದಾಯ ಅಧಿಕಾರಿಗಳಿಗೆ ತಿದ್ದುಪಡಿ ಅಧಿಕಾರ ನೀಡಿಲ್ಲ. ಕೇಸ್ ವರ್ಕರ್‌ಗಳು ವರ್ಗಾಯಿಸುವ ಅರ್ಜಿಗಳನ್ನು ತಿರಸ್ಕರಿಸಬೇಕು ಅಥವಾ ಅನುಮೋದಿಸಬೇಕಿದೆ. ಇದರಿಂದಲೂ ಸಾಕಷ್ಟು ಸಮಸ್ಯೆಯಾಗುತ್ತಿದೆ.

ಇದೆಲ್ಲದರ ನಡುವೆ ಅಲ್ಲೊಂದು ಇಲ್ಲೊಂದು ಅರ್ಜಿಗಳು ಮಾತ್ರವೇ ಸಲ್ಲಿಕೆಯಾಗುತ್ತಿದ್ದು, ಮಧ್ಯವರ್ತಿಗಳು ಇ-ಖಾತೆ ಮಾಡಿಸಿಕೊಡುತ್ತೇವೆ ಎಂದು ನಂಬಿಸುತ್ತಾ ಆಸ್ತಿ ಮಾಲೀಕರಿಂದ ಹಣ ಪಡೆಯುವುದು ಹಾಡ-ಹಗಲೇ ನಡೆಯುತ್ತಿದೆ. ಬೇರೆ ದಾರಿ ಇಲ್ಲದೆ ಆಸ್ತಿ ಮಾಲೀಕರು ಸಹ ಹಣ ನೀಡುವ ಅಸಹಾಯಕ ಸ್ಥಿತಿ ತಲುಪಿದ್ದು, ಇದಕ್ಕೆಲ್ಲಾ ಸರ್ಕಾರವೇ ನೇರ ಹೊಣೆ ಎಂದು ಹಣ ಕಳೆದುಕೊಂಡ ಹಲವರು ದೂರಿದ್ದಾರೆ.

ಮೈಸೂರು ನಗರದಲ್ಲಿ ಸುಮಾರು 2.23 ಲಕ್ಷ ಆಸ್ತಿಗಳಿದ್ದು, 1.85 ಲಕ್ಷ ಅಧಿಕೃತ ಆಸ್ತಿ ಇದೆ. ಅನಧಿಕೃತ ಆಸ್ತಿಗಳಲ್ಲಿ ಪೂರಕ ದಾಖಲೆಗಳೊಂದಿಗೆ ಅವಕಾಶ ಇದ್ದವರಿಗೆ ಇ-ಖಾತೆ ಮಾಡಿಕೊಡಲಾಗಿದೆ. ಇ-ಖಾತೆ ಮಾಡಿಕೊಡಲು ಹಣ ಕೇಳುತ್ತಿದ್ದಾರೆ ಎಂದು ಜನರು ಹೇಳುತ್ತಿದ್ದಾರೆ. ಮುಖ್ಯವಾಗಿ ರೆವಿನ್ಯೂ ಸೈಟ್‌ಗೆ ನೀಡುವ ಬಿ-ಖಾತೆಯಿಂದ ಯಾವುದೇ ಪ್ರಯೋಜನವಿಲ್ಲ.

ಇದರ ನಡುವೆ ಅಮಾಯಕ ಜನರಿಂದ ಹಣ ವಸೂಲಿ ಮಾಡುತ್ತಿರುವುದು ಖಂಡನೀಯ. ಈ ಕುರಿತು ಪಾಲಿಕೆ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಆಕ್ಷೇಪಿಸಿದ್ದಾರೆ.

ಹಾಡಹಗಲೇ ದರೋಡೆ: 44ನೇ ವಾರ್ಡ್ ವ್ಯಾಪ್ತಿಯ ಜನತಾನಗರದಲ್ಲಿ ಸುಮಾರು 4000 ಅನಧಿಕೃತ ಮನೆಗಳಿದ್ದು, ಅವುಗಳಲ್ಲಿ ಶೇ.25 ರಷ್ಟು ಜನ ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಉಳಿದವರು ಜಿಪಿಎ, ನೋಟರಿ ಛಾಪಾ ಕಾಗದ ಮುಖಾಂತರ ಕ್ರಯ ಮಾಡಿಕೊಂಡು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇವರೆಲ್ಲರಿಗೂ ಬಿ-ಖಾತೆ ನೀಡುವ ಮುಖಾಂತರ ಅವರಿಗೆ ಅನುಕೂಲ ಮಾಡಿಕೊಡಬೇಕು. ಆದರೆ, ಮಧ್ಯವರ್ತಿಗಳು ಒಬ್ಬೊಬ್ಬರಿಗೆ ಸುಮಾರು 25,000, 30,000 ಹಣ ವಸೂಲಿ ಮಾಡುತ್ತಿದ್ದು, ಹಗಲು ದರೋಡೆ ನಡೆಸುತ್ತಿದ್ದಾರೆ. ಅಲ್ಲದೆ ಸರ್ವರ್ ಸಮಸ್ಯೆಯೂ ಹೆಚ್ಚಾಗಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ಕಿಡಿಕಾರಿದ್ದಾರೆ.

ಇ-ಖಾತೆಗೆ ಸಂಬಂಧಿಸಿದಂತೆ ಆಗಿರುವ ಸರ್ವರ್ ಡೌನ್ ಸಮಸ್ಯೆ ಇನ್ನೊಂದು ವಾರದಲ್ಲಿ ಬಗೆಹರಿಯಲಿದೆ. ಇ-ಆಸ್ತಿ ತಂತ್ರಾಂಶವನ್ನು ಅಪ್‌ಡೇಟ್ ಮಾಡಲಾಗಿದ್ದು, ನಾಳೆಯಿಂದಲೇ ಟ್ರಯಲ್ ಆಗಿ ಬಳಕೆ ಮಾಡಲಾಗುವುದು. ಯಾವುದೇ ಸಮಸ್ಯೆಗಳು ಉಂಟಾಗದಿದ್ದರೆ, ಮುಂದಿನ ವಾರದಿಂದಲೇ ಇ-ಖಾತೆ ನೀಡುವ ಪ್ರಕ್ರಿಯೆ ಚುರುಕಾಗಲಿದೆ. ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶದಿಂದಲೇ ಆನ್‌ಲೈನ್ ಮಾಡಲಾಗಿದ್ದು, ಆಸ್ತಿ ಮಾಲೀಕರು ಮಧ್ಯವರ್ತಿಗಳಿಂದ ಮೋಸ ಹೋಗಬಾರದು ಎಂದು ಮೈಸೂರು ನಗರಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು...!

"ರಾಜ್ಯದಲ್ಲಿಯೇ ಮೈಸೂರು ಜಿಲ್ಲೆಯಲ್ಲಿ ಅತೀ ಹೆಚ್ಚು ಇ-ಖಾತಾ ವಿತರಣೆ ಮಾಡಲಾಗಿದ್ದು, ಕಳೆದ ಎರಡು ವಾರದಿಂದ ಇ-ಖಾತಾ ಸಂಬಂಧ ತಾಂತ್ರಿಕ ಸಮಸ್ಯೆ ಇದೆ. ಸರ್ವರ್ ಡೌನ್ ಇದ್ದು, ಸದ್ಯದಲ್ಲಿಯೇ ಸರ್ವರ್ ಸಮಸ್ಯೆ ಬಗೆಹರಿಯಲಿದೆ. ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಮಧ್ಯವರ್ತಿಗಳ ಬಗ್ಗೆ ಮಾಹಿತಿ ನೀಡಿದಲ್ಲಿ ಖಂಡಿತವಾಗಿಯೂ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.



- ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾಧಿಕಾರಿ

ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಮೂಲಕ ಬರುವ ಭಕ್ತರಿಗೆ ಬೆಳಗ್ಗೆ 5 ರಿಂದ ಸಂಜೆ 6 ಗಂಟೆಯವರೆಗೆ ಅವಕಾಶ



ಮೈಸೂರು, ಜು.2(ಎಂಕೆ)- ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಮೂಲಕ ಹತ್ತಿ ಬರುವ ಭಕ್ತರಿಗೆ ಬೆಳಗ್ಗೆ 5 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಅವಕಾಶ ನೀಡಲಾಗಿದೆ.

ಮೊದಲ ಆಷಾಡ ಶುಕ್ರವಾರ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಮೆಟ್ಟಿಲುಗಳ ಮೂಲಕ ನಿರೀಕ್ಷೆಗೂ ಮೀರಿ ಹೆಚ್ಚು ಭಕ್ತರು ಬಂದಿದ್ದು, ಜನಸಂದಣಿಯಿಂದಾಗಿ ದೇವರ ದರ್ಶನ ಮೆಟ್ಟಿಲು ಹತ್ತಿ ಬಂದ ಭಕ್ತರಿಗೆ ತಡವಾಗಿದೆ.

ಈ ಹಿನ್ನೆಲೆಯಲ್ಲಿ ಮೆಟ್ಟಿಲು ಹತ್ತಿ ಬರುವ ಭಕ್ತರಿಗೆ ಆಗಬಹುದಾದ ಅನಾನುಕೂಲವನ್ನು ತಪ್ಪಿಸಲು ಜಿಲ್ಲಾಡಳಿತ ಚಾಮುಂಡಿಬೆಟ್ಟದಲ್ಲಿ ಸಾಕಷ್ಟು ಸುಧಾರಿತ ಕ್ರಮಗಳನ್ನು ತೆಗೆದು ಕೊಂಡಿದ್ದು, ಎರಡನೇ ಮತ್ತು ಉಳಿದ ಆಷಾಢ ಮಾಸದ ಶುಕ್ರವಾರಗಳಲ್ಲಿ ಮೆಟ್ಟಿಲು ಹತ್ತಿ ಬರುವ ಭಕ್ತರು ಧರ್ಮ ದರ್ಶನದ ಸರತಿ ಸಾಲಿನಲ್ಲಿ ನಿಂತು ದರ್ಶನ ಮಾಡಬಹುದಾಗಿದೆ ಅಲ್ಲದೆ ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಬರುವ ಭಕ್ತರು ನಿಗದಿತ ಸಮಯದೊಳಗೆ ಆಗಮಿಸಬೇಕು. ಹಾಗೆಯೇ ಲಲಿತ ಮಹಲ್ ಪ್ಯಾಲೇಸ್ ಆವರಣದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದ್ದು, ಭಕ್ತಾಧಿಗಳು ಉಚಿತ ಬಸ್ ಸೇವೆ ಪಡೆದು ಕಡಿಮೆ ಸಮಯದಲ್ಲಿ ಸುಗಮವಾಗಿ ದೇವರ ದರ್ಶನ ಪಡೆಯುವಂತೆ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಮೊದಲ ಆಷಾಢ ಶುಕ್ರವಾರ, ಶನಿವಾರ, ಭಾನುವಾರ 1.50 ಲಕ್ಷ ಭಕ್ತರಿಂದ ತಾಯಿ ಚಾಮುಂಡೇಶ್ವರಿ ದರ್ಶನ

ಕೆಎಸ್‌ಆರ್‌ಟಿಸಿಗೆ 25 ಲಕ್ಷ ರೂ. ಆದಾಯ

ಮೈಸೂರು, ಜು.2(ಎಸ್‌ಪಿಎನ್)- ಮೊದಲ ಆಷಾಢ ಶುಕ್ರವಾರ, ಶನಿವಾರ ಹಾಗೂ ಭಾನುವಾರ ಸೇರಿದಂತೆ ಒಟ್ಟು ಮೂರು ದಿನಗಳಲ್ಲಿ 1336 ಟ್ರಿಪ್‌ನಲ್ಲಿ ಒಟ್ಟು ಒಂದೂವರೆ ಲಕ್ಷ ಭಕ್ತರು ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದೇವಿ ದರ್ಶನ ಪಡೆದಿದ್ದಾರೆ. ಇದರಿಂದ ಕೆಎಸ್‌ಆರ್‌ಟಿಸಿಗೆ 25 ಲಕ್ಷ ರೂ. ಸಂಗ್ರಹವಾಗಿದ್ದು, ಶುಕ್ರವಾರ ಎಲ್ಲರಿಗೂ ಸಾಮಾನ್ಯ ಬಸ್‌ಗಳ (ಉಚಿತ ಪ್ರಯಾಣ) 310 ಟ್ರಿಪ್, 2 ಸಾವಿರ ಟಿಕೆಟ್ ಪಡೆದವರು ಪ್ರಯಾಣಿಸಿದ ವೋಲ್ವೊ ಬಸ್‌ನ 63 ಟ್ರಿಪ್, ಸಿಟಿ ಬಸ್ ನಿಲ್ದಾಣದಿಂದ 207 ಸೇರಿದಂತೆ 580 ಟ್ರಿಪ್ ಆಗಿದೆ ಎಂದು ಕೆಎಸ್‌ಆರ್‌ಟಿಸಿ ನಗರ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ತಿಳಿಸಿದ್ದಾರೆ. (ಹೊಸ ಟೂರ್ ಪ್ಯಾಕೇಜ್)

228 ಟ್ರಿಪ್: ಶನಿವಾರ, ಭಾನುವಾರದಂದು 228 ಟ್ರಿಪ್‌ನಲ್ಲಿ ಜನರು ಲಲಿತಮಹಲ್ ಹೆಲಿಪ್ಯಾಡ್ ಬಳಿಯಿಂದ ಟಿಕೆಟ್ ಪಡೆದು ಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದರು. ಅಲ್ಲದೇ 300 ರೂ. ಟಿಕೆಟ್‌ನ 191 ಟ್ರಿಪ್ ಆಗಿದೆ. 2000 ರೂ. ಟಿಕೆಟ್ ಪಡೆದವರು ವೋಲ್ವೊ ಬಸ್‌ನಲ್ಲಿ 23 ಟ್ರಿಪ್ ಬಳಕೆ ಮಾಡಿಕೊಂಡಿದ್ದಾರೆ. ನಗರ ಬಸ್ ನಿಲ್ದಾಣದಿಂದ ಒಟ್ಟು 334 ಟ್ರಿಪ್‌ನಲ್ಲಿ ಬೆಟ್ಟಕ್ಕೆ ತೆರಳಿದ್ದಾರೆ. 14 ವೋಲ್ವೊ ಸೇರಿದಂತೆ ಒಟ್ಟು 194 ಬಸ್ ಬಳಕೆಯಾಗಿದೆ. ಒಟ್ಟು ಮೂರು ದಿನಗಳಲ್ಲಿ ಅಂದಾಜು ಒಂದೂವರೆ ಲಕ್ಷ ಮಂದಿ ಚಾಮುಂಡೇಶ್ವರಿ ಬೆಟ್ಟದ ಆಷಾಢ ಮಾಸಾಚರಣೆಗೆ ತೆರಳಲು ಕೆಎಸ್‌ಆರ್‌ಟಿಸಿ ಬಸ್ ಬಳಕೆ ಮಾಡಿಕೊಂಡಿದ್ದಾರೆ.

ನಡುರಸ್ತೆಯಲ್ಲೇ ವೈದ್ಯಕೀಯ ವಿದ್ಯಾರ್ಥಿ ಮೇಲೆ ರಾಡ್‌ನಿಂದ ಹಲ್ಲೆ

ಮೈಸೂರು,ಜು.2(ಪಿಎಂ)- ವೈದ್ಯಕೀಯ ವಿದ್ಯಾರ್ಥಿಯೊಬ್ಬನನ್ನು ಕಾರಿನಲ್ಲಿ ಹಿಂಬಾಲಿಸಿ ಬಂದು ನಡುರಸ್ತೆಯಲ್ಲಿ ಅಡ್ಡಗಟ್ಟಿ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿರುವ ಸಂಬಂಧ ನಗರದ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡೆಂಟಲ್ ಕಾಲೇಜು ಒಂದರ ವಿದ್ಯಾರ್ಥಿ ಜೆ.ಧ್ರುವನಾರಾಯಣ್ ಹಲ್ಲೆಗೊಳಗಾದವರು. ಈ ಸಂಬಂಧ ಜೆ.ಧ್ರುವನಾರಾಯಣ್ ಅವರ ಹಿರಿಯ ಸಹೋದರ ಜೆ.ಸೂರಜ್ ಅವರು ನೀಡಿದ ದೂರಿನನ್ವಯ ಪವನ್, ರಕ್ಷಿತ್ ಎಂಬುವರು ಸೇರಿದಂತೆ ಮತ್ತೊಬ್ಬನ ವಿರುದ್ಧ ಪ್ರಕರಣ ದಾಖಲಾಗಿದೆ.

ಜೂ.27ರಂದು ರಾತ್ರಿ ನನ್ನ ತಮ್ಮ ನನಗೆ ಕರೆ ಮಾಡಿದ್ದು, ಅವನು ತಿಳಿಸಿದಂತೆ ಕಾಳಿದಾಸ ರಸ್ತೆಗೆ ಹೋಗಿ ನೋಡಿದಾಗ, ನಾಲ್ಕೈದು ಜನ ಹುಡುಗರು ಅಡ್ಡ ಹಾಕಿ ಕಬ್ಬಿಣದ ರಾಡ್‌ನಿಂದ ನನ್ನ ತಮ್ಮನ ಮೇಲೆ ಹಲ್ಲೆ ಮಾಡಿರುವುದು ಗೊತ್ತಾಯಿತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ತಮ್ಮನನ್ನು ನನ್ನ ಸ್ನೇಹಿತನ ಗಾಡಿಯಲ್ಲಿ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿದೆ.

ಹಲ್ಲೆ ನಡೆಸಿದವರಲ್ಲಿ ಪವನ್ ಮತ್ತು ರಕ್ಷಿತ್ ಎಂಬ ಹೆಸರುಗಳು ತಿಳಿದು ಬಂದಿವೆ. ಉಳಿದವರ ಹೆಸರು ತಿಳಿದು ಬಂದಿಲ್ಲ. ಈ ಸಂಬಂಧ ಒಬ್ಬಳು ಹುಡುಗಿಯೂ ಸಹ ಇದ್ದಾಳೆ ಎಂದು ನನ್ನ ತಮ್ಮನಿಂದ ಗೊತ್ತಾಗಿದೆ. ವಿನಾಕಾರಣ ನನ್ನ ತಮ್ಮನ ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜೆ.ಸೂರಜ್ ದೂರು ನೀಡಿದ್ದಾರೆ.

ಮೈಸೂರು-ಹುಣಸೂರು ರಸ್ತೆಯ ವಿಜಯನಗರದಲ್ಲಿ ವಾಹನ ದಟ್ಟಣೆಯಿದ್ದ ಕಾರಣ ಧ್ರುವನಾರಾಯಣ್ ಬೈಕ್ ನಿಲ್ಲಿಸಿದ್ದರು. ಯುವತಿ ಜೊತೆ ಕಾರಿನಲ್ಲಿ ಬಂದ ಪವನ್ ಹಾಗೂ ರಕ್ಷಿತ್ ದಾರಿ ಬಿಡುವಂತೆ ಧಮ್ಕಿ ಹಾಕಿದ್ದಾರೆ. ವಾಹನಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಧ್ರುವನಾರಾಯಣ್‌ಗೆ ದಾರಿ ಬಿಡಲು ಸಾಧ್ಯವಾಗಿಲ್ಲ. ಸ್ವಲ್ಪ ಕಾಯುವಂತೆ ಹೇಳಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ್ದಾರೆ. ಈ ವೇಳೆ ಧ್ರುನಾರಾಯಣ್ ತಪ್ಪಿಸಿಕೊಂಡು ಬೈಕ್‌ನಲ್ಲಿ ಮುಂದೆ ಸಾಗಿದ್ದಾರೆ. ನಂತರ ಕಾಳಿದಾಸ ರಸ್ತೆಯಲ್ಲಿ ಬೈಕ್ ಅಡ್ಡಗಟ್ಟಿ ಕಾರಿನಲ್ಲಿದ್ದ ರಾಡ್‌ನಿಂದ ತಲೆಗೆ ಹೊಡೆದು ಗಾಯಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ಕಶ ಶಬ್ದ; ವಿವಿ ಪುರಂ ಸಂಚಾರ ಪೊಲೀಸರಿಂದ ಬೈಕ್‌ಗಳು ವಶಕ್ಕೆ

ಮೈಸೂರು,ಜು.2(ಪಿಎಂ)- ಬೈಕ್‌ನ ಸೈಲೆನ್ಸರ್ ಪೈಪ್ ನವೀಕರಿಸಿ ಕರ್ಕಶ ಶಬ್ದ ಮಾಡಿಕೊಂಡು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದ ಸಂಬಂಧ ಐದು ಬೈಕ್‌ಗಳನ್ನು ವಿವಿ ಪುರಂ ಸಂಚಾರ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನಗರದ ವಿವಿಧ ರಸ್ತೆಗಳಲ್ಲಿ ಬೈಕ್‌ಗಳು ಕರ್ಕಶ ಶಬ್ದ ಮಾಡುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ದೂರುಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಬುಧವಾರ ವಿವಿ ಪುರಂ ಸಂಚಾರ ಠಾಣಾ ಪೊಲೀಸರು ಕಾರ್ಯಾಚರಣೆ ನಡೆಸಿದರು. ಕಾಳಿದಾಸ ರಸ್ತೆಯಲ್ಲಿ ಕರ್ಕಶವಾಗಿ ಶಬ್ದ ಮಾಡುತ್ತಿದ್ದ ಹಲವು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಎಲ್‌ಐ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ

ಮೈಸೂರು,ಜು.2(ಪಿಎಂ)- ಎಲ್ಲಾ ವಲಯಗಳಲ್ಲಿ ಹಾಗೂ ವಿಶೇಷವಾಗಿ ಉತ್ಪಾದನಾ ವಲಯದಲ್ಲಿ ಉದ್ಯೋಗ ಸೃಷ್ಟಿ, ಉದ್ಯೋಗಾವಕಾಶ ಮತ್ತು ಸಾಮಾಜಿಕ ಭದ್ರತೆ ಹೆಚ್ಚಿಸಲು ಕೇಂದ್ರ ಸಚಿವ ಸಂಪುಟವು ಉದ್ಯೋಗ ಆಧಾರಿತ ಪ್ರೋತ್ಸಾಹಧನ ಯೋಜನೆಗೆ (ಇಎಲ್‌ಐ ಯೋಜನೆ) ಅನುಮೋದನೆ ನೀಡಿದೆ ಎಂದು ಮೈಸೂರು ಪ್ರಾದೇಶಿಕ ಕಚೇರಿಯ ಪಿಎಫ್ ಪ್ರಾದೇಶಿಕ ಆಯುಕ್ತ ವಿನಿತ್‌ಕುಮಾರ್ ತಿಳಿಸಿದ್ದಾರೆ.

ಈ ಯೋಜನೆಯಡಿಯಲ್ಲಿ ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರಿಗೆ ಒಂದು ತಿಂಗಳ ವೇತನ (15 ಸಾವಿರ ರೂ.ವರೆಗೆ) ದೊರೆಯಲಿದೆ. ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಉದ್ಯೋಗದಾತರಿಗೆ ಎರಡು ವರ್ಷಗಳವರೆಗೆ ಪ್ರೋತ್ಸಾಹ ಧನ ಲಭಿಸಲಿದೆ. ಜೊತೆಗೆ ಉತ್ಪಾದನಾ ವಲಯಕ್ಕೆ ಇನ್ನೂ ಎರಡು ವರ್ಷಗಳವರೆಗೆ ವಿಸ್ತೃತ ಪ್ರಯೋಜನಗಳನ್ನು ನೀಡಲಾಗುವುದು.

ಈ ಯೋಜನೆಯ ಪ್ರಯೋಜನಗಳು 2025ರ ಆಗಸ್ಟ್ 1ರಿಂದ 2027ರ ಜು.31ರ ಅವಧಿಯಲ್ಲಿ ಸೃಷ್ಟಿಯಾದ ಉದ್ಯೋಗಗಳಿಗೆ ಅನ್ವಯಿಸಲಿದೆ. ಯೋಜನೆಯಡಿ ಮೊದಲ ಬಾರಿಯ ಉದ್ಯೋಗಿಗಳಿಗೆ ಎಲ್ಲಾ ಪಾವತಿಗಳನ್ನು ಆಧಾರ್ ಬ್ರಿಡ್ಜ್ ಪಾವತಿ ವ್ಯವಸ್ಥೆ (ಎಬಿಪಿಎಸ್) ಬಳಸಿಕೊಂಡು ಡಿಬಿಟಿ (ನೇರ ಪ್ರಯೋಜನ ವರ್ಗಾವಣೆ) ವಿಧಾನದ ಮೂಲಕ ಮಾಡಲಾಗುತ್ತದೆ. ಯೋಜನೆಯ ಉದ್ಯೋಗದಾತರಿಗೆ ಪಾವತಿಗಳನ್ನು ನೇರವಾಗಿ ಅವರ ಪ್ಯಾನ್ ಲಿಂಕ್ಡ್ ಖಾತೆಗಳಿಗೆ ಮಾಡಲಾಗುತ್ತದೆ.

ಸದರಿ ಇಎಲ್‌ಐ ಯೋಜನೆಯ ಮೂಲಕ ಸರ್ಕಾರವು ಎಲ್ಲಾ ವಲಯಗಳಲ್ಲಿ, ವಿಶೇಷವಾಗಿ ಉತ್ಪಾದನಾ ವಲಯದಲ್ಲಿ ಉದ್ಯೋಗ ಸೃಷ್ಟಿಯನ್ನು ವೇಗಗೊಳಿಸಲು ಉದ್ದೇಶಿಸಿದೆ. ಜೊತೆಗೆ ಮೊದಲ ಬಾರಿಗೆ ಉದ್ಯೋಗಗಳಿಗೆ ಸೇರುವ ಯುವ ಜನರನ್ನು ಪ್ರೋತ್ಸಾಹಿಸುತ್ತದೆ.

ಹೆಚ್ಚಿನ ವಿವರಗಳನ್ನು ಇಪಿಎಫ್‌ಓ ಮೈಸೂರು ಪ್ರಾದೇಶಿಕ ಕಚೇರಿಯಿಂದ ಪಡೆದುಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈಬ್ರೆಂಟ್ ವಿದ್ಯಾರ್ಥಿನಿ ಸಮೀಕ್ಷಾಗೆ ದೆಹಲಿ ಐಐಟಿಯಲ್ಲಿ ಪ್ರವೇಶ

ಮೈಸೂರು, ಜು. 2- ರಾಷ್ಟ್ರ ಮಟ್ಟದಲ್ಲಿ ನಡೆದ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ 6,368ನೇ ರ್‍ಯಾಂಕ್ ಪಡೆದು ಎಲ್ಲರ ಗಮನ ಸೆಳೆದಿದ್ದ ವೈಬ್ರೆಂಟ್ ಸಿಎನ್‌ಎಂ ಪಿಯು ಕಾಲೇಜಿನ ನಗರದ ವಿದ್ಯಾರ್ಥಿನಿ ಸಮೀಕ್ಷಾ ಡೆಲ್ಲಿ ಐಐಟಿಗೆ ಪ್ರವೇಶ ಪಡೆಯುವುದರ ಮೂಲಕ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿ ಸಮೀಕ್ಷಾ ಅವರು ಈ ಹಿಂದೆ ಸಿಇಟಿ ಪರೀಕ್ಷೆಯಲ್ಲೂ ರಾಜ್ಯಕ್ಕೆ 752ನೇ ರ್‍ಯಾಂಕ್ ಪಡೆದಿದ್ದರು.



ನಿಷೇಧಿತ ಪ್ಲಾಸ್ಟಿಕ್ ವಶ, ದಂಡ



ಮೈಸೂರು, ಜು. 2- ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಂಡಿಪಾಳ್ಯ ಗ್ರಾಮದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯಿತಿ ಜಂಟಿಯಾಗಿ ನಿಷೇಧಿತ ಪ್ಲಾಸ್ಟಿಕ್ ರೈಡ್ ಹಮ್ಮಿಕೊಳ್ಳಲಾಯಿತು.

ಈ ಸಂಬಂಧ 1337 ಕೆ.ಜಿ ನಿಷೇಧಿತ ಪ್ಲಾಸ್ಟಿಕ್‌ಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಾಯಕ ಪರಿಸರ ಅಧಿಕಾರಿ ಅರ್ಪಿತಾ, ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಪವನ್, ರಾಜಶೇಖರ್, ಅಕ್ಷತಾ, ಸುನಿಲ್, ಆನಂದ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಐಪಿಎಸ್ ಅಧಿಕಾರಿ ಸಿದ್ಧಾರ್ಥ್ ಕೌಶಲ್ ರಾಜೀನಾಮೆ



ಅಮರಾವತಿ: ಮಹತ್ವದ ಬೆಳವಣಿಗೆಯಲ್ಲಿ ಆಂಧ್ರಪ್ರದೇಶದ ಹಿರಿಯ ಐಪಿಎಸ್ ಅಧಿಕಾರಿ ಸಿದ್ಧಾರ್ಥ್ ಕೌಶಲ್ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದ್ದು, ವೈಯಕ್ತಿಕ ಕಾರಣಗಳಿಂದ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರು ಹೇಳಿದ್ದಾರೆ. ಅವರು ತಮ್ಮ ರಾಜೀನಾಮೆ ಪತ್ರವನ್ನು ಡಿಜಿಪಿಗೆ ಕಳುಹಿಸಿದ್ದು, ಈ ನಿರ್ಧಾರವನ್ನು ತಾವೇ ತೆಗೆದುಕೊಂಡಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ಐಪಿಎಸ್ ಅಧಿಕಾರಿ ಸಿದ್ಧಾರ್ಥ್ ಕೌಶಲ್ ಈ ಹಿಂದೆ ಕಡಪ, ಕೃಷ್ಣ ಮತ್ತು ಪ್ರಕಾಶಂ ಜಿಲ್ಲೆಗಳ ಎಸ್ಪಿಯಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಡಿಜಿಪಿ ಕಚೇರಿಯಲ್ಲಿ ಎಸ್ಪಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಇದೇ ವೇಳೆ ರಾಜಕೀಯ ಒತ್ತಡದಿಂದಾಗಿ ರಾಜೀನಾಮೆ ನೀಡುತ್ತಿರುವ ಸುದ್ದಿಯನ್ನು ಅವರು ನಿರಾಕರಿಸಿದ್ದಾರೆ. ವೈಯಕ್ತಿಕ ಕಾರಣಗಳಿಂದಾಗಿ ಐಪಿಎಸ್ ಕೆಲಸಕ್ಕೆ ರಾಜೀನಾಮೆ ನೀಡಿದ್ದೇನೆ. ಅಂತೆಯೇ ಇಷ್ಟು ವರ್ಷಗಳ ಕಾಲ ಆಂಧ್ರಪ್ರದೇಶ ರಾಜ್ಯದಲ್ಲಿ ಕೆಲಸ ಮಾಡಿದ್ದಕ್ಕೆ ನಾನು ಅದೃಷ್ಟಶಾಲಿ. ಆಂಧ್ರಪ್ರದೇಶ ಸರ್ಕಾರಕ್ಕೆ ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸರ್ಕಾರ, ಅಧಿಕಾರಿಗಳು, ಸಹೋದ್ಯೋಗಿಗಳು ಮತ್ತು ಇಷ್ಟು ದಿನ ತಮಗೆ ಸಹಕರಿಸಿದ ಎಲ್ಲ ಜನರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಸಿದ್ಧಾರ್ಥ್ ಕೌಶಲ್ ಹೇಳಿದರು. ಅಂದಹಾಗೆ ಸಿದ್ಧಾರ್ಥ್ ಕೌಶಲ್ ಈ ಹಿಂದೆಯೇ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದರು.

ಮೈಸೂರು-ಚಾಮರಾಜನಗರ ರೈಲು ಮಾರ್ಗ ವಿದ್ಯುದ್ದೀಕರಣ

● ಕಡೆಗೂ ಎನ್‌ಓಸಿ ನೀಡಿದ ಏರ್‌ಪೋರ್ಟ್ ಅಥಾರಿಟಿ ● ಮೈಸೂರು ಏರ್‌ಪೋರ್ಟ್ ಬಳಿಯಲ್ಲಿ ಹಾದು ಹೋಗಿರುವ ರೈಲು ಮಾರ್ಗ



ಮೈಸೂರು, ಜು.2(ಆರ್‌ಕೆ)- ಮೈಸೂರು-ಚಾಮರಾಜನಗರ ನಡುವಿನ ರೈಲು ಮಾರ್ಗ ವಿದ್ಯುದ್ದೀಕರಣ ಯೋಜನೆ ಅನುಷ್ಠಾನಕ್ಕೆ ಇದ್ದ ಅಡೆ-ತಡೆ ಹಲವು ವರ್ಷಗಳ ಬಳಿಕ ಇದೀಗ ನಿವಾರಣೆಯಾಗಿದೆ.

ಬಲು ನಿರೀಕ್ಷಿತ ಈ ಮಾರ್ಗದ ವಿದ್ಯುದ್ದೀಕರಣ (Electrification) ಕಾಮಗಾರಿ ನಡೆಸಲು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ)ವು ನಿರಾಕ್ಷೇಪಣಾ ಪತ್ರ (ಎನ್‌ಓಸಿ) ನೀಡಿದೆ. ಮೈಸೂರು-ಚಾಮರಾಜನಗರ ನಡುವೆ ರೈಲು ಮಾರ್ಗ ವಿದ್ಯುದ್ದೀಕರಣಗೊಳಿಸಲು ನೈರುತ್ಯ ರೈಲ್ವೆ ಮುಂದಾಗಿತ್ತಾದರೂ, ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಕಾಮಗಾರಿಗೆ ತಾಂತ್ರಿಕ ಸಮಸ್ಯೆ ಉಂಟಾಗಲಿದೆ ಎಂಬ ಕಾರಣ ಮುಂದಿಟ್ಟು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಅಡ್ಡಿಪಡಿಸಿದ್ದರಿಂದ ಆ ಜಾಗದಲ್ಲಿ ಕೆಲಸ ಬಾಕಿ ಉಳಿದಿತ್ತು.

ಏರ್‌ಪೋರ್ಟ್ ರನ್‌ವೇ ಸುರಕ್ಷತೆ ಮತ್ತು ನೇವಿಗೇಷನ್‌ಗೆ ಅಡ್ಡಿಯಾಗುತ್ತದೆ ಎಂಬ ಕಾರಣವೊಡ್ಡಿ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ವಿದ್ಯುದ್ದೀಕರಣಕ್ಕೆ ಅವಕಾಶ ನೀಡದ ಕಾರಣ ಈ ಮಾರ್ಗದ ಉನ್ನತೀಕರಣ ಯೋಜನೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಆ ಭಾಗದ 1.4 ಕಿ.ಮೀ. ಹೊರತುಪಡಿಸಿ ಉಳಿದೆಡೆ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿತ್ತು.

ಅದರ ಪರಿಣಾಮ ಮೈಸೂರಿನಿಂದ ಅಶೋಕಪುರಂ ರೈಲು ನಿಲ್ದಾಣದವರೆಗೆ ಮಾತ್ರ ಎಲೆಕ್ಟ್ರಿಕ್ ಮಾರ್ಗದಲ್ಲಿ ಸಂಚರಿಸುತ್ತಿದ್ದ ಮೈಸೂರು-ಚಾಮರಾಜನಗರ ಎಕ್ಸ್‌ಪ್ರೆಸ್ ರೈಲು, ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಮುಂದೆ ಚಾಮರಾಜನಗರದವರೆಗೆ ಕಳೆದ 3 ವರ್ಷಗಳಿಂದ ಡೀಸೆಲ್ ಇಂಜಿನ್‌ಗಳ ಮೂಲಕ ರೈಲುಗಳು ಸಂಚರಿಸುತ್ತಿದ್ದವು. 2025ರ ಜೂನ್ 1 ರಂದು ರೈಲ್ವೆ ಮಂಡಳಿ ಅಧಿಕಾರಿಗಳು ಮತ್ತು ನಾಗರಿಕ ವಿಮಾನಯಾನ ಸಚಿವಾಲಯದ ಅಧಿಕಾರಿಗಳ ನಡುವೆ ಚರ್ಚೆ ನಡೆದಿತ್ತು. ಸಭೆಯಲ್ಲಿ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧಿಕಾರಿಗಳು, ವಿದ್ಯುದ್ದೀಕರಣಕ್ಕಾಗಿ ಉದ್ದೇಶಿತ 28 ಓವರ್‌ಹೆಡ್ ಎಲೆಕ್ಟ್ರಿಕ್ ಕಂಬಗಳನ್ನು ನಿಗದಿತ ಎತ್ತರಕ್ಕಿಂತ ಹೆಚ್ಚು ಎತ್ತರಕ್ಕೆ ಅಳವಡಿಸುವುದರಿಂದ ವಿಮಾನಗಳ ಹಾರಾಟ ಮತ್ತು ಲ್ಯಾಂಡಿಂಗ್‌ಗೆ ಹೇಗೆ ತೊಂದರೆಯಾಗುತ್ತದೆ ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಪ್ರಸ್ತುತಪಡಿಸಿದ್ದರು. ಅದನ್ನು ಒಪ್ಪಿಕೊಂಡ ರೈಲ್ವೆ ಅಧಿಕಾರಿಗಳು, ನಿಗದಿತ ಎತ್ತರಕ್ಕಿಂತ ಅಧಿಕ ಮಟ್ಟಕ್ಕೆ ವಿದ್ಯುತ್ ಕಂಬಗಳನ್ನು ಅಳವಡಿಸುವುದಿಲ್ಲ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧಿಕಾರಿಗಳು ಎನ್‌ಓಸಿ ನೀಡುವುದಾಗಿ ಭರವಸೆ ನೀಡಿದರು.

ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಹಾಗೂ ರೈಲ್ವೆ ಮಾರ್ಗಗಳ ಸ್ಥಳಾಂತರ ಮಾಡಬೇಕಾದ ಸಂಭವ ಉದ್ಭವಿಸಬಹುದು. ಅಂತಹ ಸಂದರ್ಭದಲ್ಲಿ ಪ್ರಾಧಿಕಾರದೊಂದಿಗೆ ಸಹಕರಿಸಬೇಕೆಂದೂ ಎಎಐ ಅಧಿಕಾರಿಗಳು ಅದೇ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ.

ನಿರಾಕ್ಷೇಪಣಾ ಪತ್ರ ನೀಡಿರುವುದರಿಂದ ಅತೀ ಶೀಘ್ರ ರೈಲು ಮಾರ್ಗದ ವಿದ್ಯುದ್ದೀಕರಣ ಕಾಮಗಾರಿಯನ್ನು ಆರಂಭಿಸಿ ಎರಡು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ರೈಲ್ವೆ ಇಲಾಖೆ ತಾಂತ್ರಿಕ ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಮೈಸೂರು-ಚಾಮರಾಜನಗರ ರೈಲು ಮಾರ್ಗದಲ್ಲಿ ರೈಲುಗಳು ವಿದ್ಯುತ್‌ನಿಂದ ಚಾಲನೆಯಾಗಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇತ್ತೀಚೆಗಷ್ಟೇ ಮೈಸೂರಿಗೆ ಭೇಟಿ ನೀಡಿದ್ದ ರೈಲ್ವೆ ಸಚಿವ ವಿ. ಸೋಮಣ್ಣ ಅವರು, ವಿದ್ಯುತ್ ರೈಲು ಮಾರ್ಗಕ್ಕೆ ತೊಡಕಾಗಿದ್ದ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿಯ ಅಡೆತಡೆ ನಿವಾರಿಸಿ ಯೋಜನೆಗೆ ಅನುವು ಮಾಡುವುದಾಗಿ ಭರವಸೆ ನೀಡಿದ್ದರು.

ಸರ್ಕಾರಿ ಶಾಲೆ ಗುಣಮಟ್ಟದ ಶಿಕ್ಷಣ, ಫಲಿತಾಂಶ ಹೆಚ್ಚಳಕ್ಕೆ ಶಿಕ್ಷಣ ಇಲಾಖೆಯಿಂದ 5 ಅಂಶಗಳ ಸೂತ್ರ

ಮೈಸೂರು, ಜು.2(ಎಸ್‌ಪಿಎನ್)- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಫಲಿತಾಂಶ ಹೆಚ್ಚಿಸಲು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರು, ಐದು ಅಂಶಗಳ ಮಾರ್ಗಸೂಚಿಯ ಸುತ್ತೋಲೆ ಹೊರಡಿಸಿದ್ದಾರೆ.

ಶಿಕ್ಷಕರು, ಮುಖ್ಯಶಿಕ್ಷಕರನ್ನು ಶಾಲಾ ದಿನ, ಶಾಲಾ ಸಮಯದಲ್ಲಿ ಯಾವುದೇ ಸಭೆ, ಸಮಾರಂಭ, ಕಾರ್ಯಾಗಾರಗಳಿಗೆ ನಿಯೋಜನೆ, ಓಓಡಿ, ಮೌಖಿಕ ಅಥವಾ ಲಿಖಿತ ಆದೇಶಗಳ ಮೂಲಕ ಕಳುಹಿಸಬಾರದು. ಜಿಲ್ಲೆಯ ಡಿಸಿ, ಜಿಪಂ ಸಿಇಓ ಅಧಿಕಾರಿಗಳು ಸಹ ಇಂತಹ ನಿರ್ದೇಶನ ನೀಡಬಾರದು.

ಶಾಲಾ ಸಮಯದಲ್ಲಿ ಸಹಶಿಕ್ಷಕರು, ಮುಖ್ಯಶಿಕ್ಷಕರೊಂದಿಗೆ ಸಭೆ, ವಿಡಿಯೋ ಕಾನ್ಫರನ್ಸ್ ನಡೆಸಬಾರದು. ಶಾಲೆಗಳಿಗೆ ಭೇಟಿ ನೀಡುವ ಯಾವುದೇ ಅಧಿಕಾರಿಗಳು ತರಗತಿಗಳಿಗೆ ತೊಂದರೆಯಾಗದಂತೆ ನಡೆದುಕೊಳ್ಳತಕ್ಕದ್ದು. ಶಿಕ್ಷಕರು, ಮುಖ್ಯಶಿಕ್ಷಕರು ಶಾಲಾ ಅವಧಿಯಲ್ಲಿ ಪೂರ್ಣ ಬೋಧನೆಯಲ್ಲಿ ತೊಡಗಿಸಿಕೊಂಡು ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ತೊಡಗಿಸಿಕೊಳ್ಳಬೇಕು.

ಯಾವುದೇ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಅವರ ಶಾಲೆಯ ಹೊರಗಡೆ ವಿವಿಧ ಕಾರ್ಯಕ್ರಮಗಳ ಪ್ರೇಕ್ಷಕರಾಗಿ ಭಾಗವಹಿಸಲು ಅಥವಾ ಕರೆದುಕೊಂಡು ಹೋಗಲು ಶಿಕ್ಷಕರಿಗೆ ನಿರ್ದೇಶಿಸಬಾರದು. ಕೆಪಿಎಸ್‌ಸಿ ಪರೀಕ್ಷೆ ಸೇರಿ ಯಾವುದೇ ಬಾಹ್ಯ ಸಂಸ್ಥೆಗಳ ಪರೀಕ್ಷೆಗಳನ್ನು ಕೂಡ ಶಾಲಾ ಸಮಯದಲ್ಲಿ ಶಾಲಾ ಆವರಣದಲ್ಲಿ ನಡೆಸಬಾರದು. ಪರೀಕ್ಷೆ ನಡೆಸುವ ಅವಕಾಶವನ್ನು ಸಾರ್ವಜನಿಕ ರಜೆ ಅಥವಾ ಬೇಸಿಗೆ ರಜೆಯಲ್ಲಿ ಮಾತ್ರ ನಿಯಮಗಳಂತೆ ನೀಡಬೇಕು.

ಈ ನಿಬಂಧನೆಯನ್ನು ಉಲ್ಲಂಘಿಸಿದ ಜಿಲ್ಲಾ ಉಪನಿರ್ದೇಶಕರು, ಬಿಇಓ ಡಯಟ್ ಪ್ರಾಂಶುಪಾಲರು, ಶಾಲಾ ಮುಖ್ಯಶಿಕ್ಷಕರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

ಜಿಲ್ಲಾ ಡಿಡಿಪಿಐ, ಬಿಇಓ, ಬಿಆರ್‌ಸಿ, ಡಯಟ್ ಪ್ರಾಂಶುಪಾಲರು, ಶಾಲಾ ಮುಖ್ಯಶಿಕ್ಷಕರು ಸೇರಿದಂತೆ ಇಲಾಖೆಯ ಯಾವುದೇ ಮಟ್ಟದ ಅಧಿಕಾರಿಗಳು ಖಾಸಗಿ ಸಂಸ್ಥೆಗಳ ಅಥವಾ ಜ್ಞಾನ ಪಾಲುದಾರರ ಸಾಫ್ಟ್‌ವೇರ್‌ಗಳಲ್ಲಿ ಡೇಟಾ ಎಂಟ್ರಿ ಮಾಡುವಂತೆ ಶಿಕ್ಷಕರು ಅಥವಾ ಶಾಲಾ ಮುಖ್ಯಶಿಕ್ಷಕರಿಗೆ ಮೌಖಿಕ ಅಥವಾ ಲಿಖಿತ ಆದೇಶ ನೀಡಬಾರದು ಇಂತಹ ಆದೇಶ ನೀಡುವ ಯಾವುದೇ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸುತ್ತೋಲೆ ಹೊರಡಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಕಪ್ಪೆಯೊಂದು ಜ್ಯೋತಿಷಿಯೊಬ್ಬರ ಬಳಿ ನೆಗೆಯುತ್ತ ಹೋಯಿತು.

ಕಪ್ಪೆ : ನನ್ನ ಭವಿಷ್ಯ ಹೇಗಿದೆ ಸ್ವಲ್ಪ ನೋಡಿ ಹೇಳ್ತೀರಾ?

ಜ್ಯೋತಿಷಿ : ಕೆಲವೇ ದಿನಗಳಲ್ಲಿ ಸುಂದರ ಯುವತಿಯೊಬ್ಬಳು ನಿನ್ನ ದೇಹವನ್ನು ಸ್ಪರ್ಶಿಸುತ್ತಾಳೆ.

ಕಪ್ಪೆ : ಆಹಾ ಅದ್ಭುತ! ಆಮೇಲೆ ನಾನು ರಾಜಕುಮಾರನಾಗಿ ಬಿಡ್ತೀನಿ ಅನ್ಸುತ್ತೆ ಅದು ಸರಿ ಕರೆಕ್ಟಾಗಿ ಯಾವಾಗ, ಎಲ್ಲಿ ನಡೆಯುತ್ತೆ ಈ ಘಟನೆ!

ಜ್ಯೋತಿಷಿ : ಮುಂದಿನ ವಾರ, ಎದುರುಗಡೆ ಇರುವ ಕಾಲೇಜಿನ ಬಯೋಲಾಜಿ ಲ್ಯಾಬರೋಟರಿಯಲ್ಲಿ

ಮೈಸೂರು ಮಿತ್ರ

ಗುರುವಾರ, 3 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಳ್ಳೆಯ ಸಂಬಂಧಗಳನ್ನು ಪ್ರೀತಿ ಕೊಟ್ಟು ಉಳಿಸಿಕೊಳ್ಳಿ. ಕೆಟ್ಟ ಸಂಬಂಧಗಳನ್ನು ಮೌನವಾಗಿದ್ದು ಕಳೆದುಕೊಳ್ಳಿ.– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಯಿ ನಮ್ಮನ್ನು ಕಚ್ಚಿದರೆ ನಾಯಿಯನ್ನು ಕಚ್ಚಲು ನಮ್ಮಿಂದ ಆಗುವುದೇ?

ನಿಮ್ಮ ಪತ್ರಗಳು

ಎಲ್ಲಿದೆ ಮೌಲ್ಯಾಧಾರಿತ ರಾಜಕಾರಣ, ಎಲ್ಲಿದೆ ನೈತಿಕತೆ!

ಮಾನ್ಯರೆ,

ಲಂಚ ತೆಗೆದುಕೊಂಡು ಮನೆ ಮಂಜೂರು ಮಾಡಲಾಗುತ್ತಿದೆ. ಶಾಸಕರ ಶಿಫಾರಸ್ಸುಗಳಿಗೂ ಕಿಮ್ಮತ್ತಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷನಿಗೆ ಇರುವ ಬೆಲೆ ಚುನಾಯಿತ ಶಾಸಕನಿಗೆ ಇಲ್ಲ ಎಂದ ಶಾಸಕ ಬಿ.ಆರ್. ಪಾಟೀಲ್ ಅವರ ಆಡಿಯೋ ಒಂದು ಸಂಚಲನ ಮೂಡಿಸಿತ್ತು. ಇದು ವಸತಿ ಇಲಾಖೆಯ ಲಂಚಾವತಾರದ ಒಂದು ಉದಾಹರಣೆಯಷ್ಟೆ. ಇದೀಗ ವಾಲ್ಮೀಕಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿದೆ. ಬೋವಿ ನಿಗಮದಲ್ಲೂ ಭ್ರಷ್ಟಾಚಾರ ನಡೆದಿರುವ ಬಗ್ಗೆ ವರದಿಯಾಗಿದೆ. ಮುಡಾ ಹಗರಣದ ತನಿಖೆಯನ್ನು ಕರ್ನಾಟಕ ಲೋಕಾಯುಕ್ತ ನಡೆಸುತ್ತಿದೆ. ಹೈ ಕೋರ್ಟ್‌ನ ಪೀಠವೊಂದು ಸದರಿ ಹಗರಣದಲ್ಲಿ ಮೇಲ್ನೋಟಕ್ಕೆ ಸತ್ಯವಿದೆ ಎಂದು ತನಿಖೆ ಆರಂಭಿಸಿತು. ಮೇಲ್ನೋಟಕ್ಕೆ ಸ್ವತಂತ್ರ ಸಂಸ್ಥೆ ಎಂದು ಕಂಡು ಬಂದರೂ ಸರ್ಕಾರದ ನೆರಳು ಇರುವ ಲೋಕಾಯುಕ್ತ ಯಾವುದೇ ಸಾಕ್ಷಿಗಳು ಇಲ್ಲ ಎಂದು ಪ್ರಾಥಮಿಕ ವರದಿಯಲ್ಲಿ ತಿಳಿಸಿದೆ. ಅದು ಅಂತಿಮ ವರದಿಯ ಫಲಿತಾಂಶ ಕೂಡ ಹೌದು. ಉಚ್ಚ ನ್ಯಾಯಾಲಯದ ತನಿಖೆ ಇದನ್ನೇ ಅವಲಂಬಿಸಿದೆ. 2 ದಿನ, ಒಂದು ವಾರ ಎಂದು ಮುಂದೂಡಲ್ಪಡುತ್ತಿದ್ದುದು ಈಗ ತಿಂಗಳು, ಎರಡು ತಿಂಗಳ ಅಂತರದಲ್ಲಿ ವಿಚಾರಣೆ ನಡೆಯುತ್ತಿದೆ. ಅಧಿಕಾರಸ್ಥರು, ರಾಜಕಾರಣಿಗಳು ಈಗ ಮೌಲ್ಯಾಧಾರಿತ ರಾಜಕಾರಣ, ನೈತಿಕತೆಯಿಂದ ಬಹಳ ದೂರ ಸರಿದಿದ್ದಾರೆ.

1983ರಲ್ಲಿ ಅಧಿಕಾರಕ್ಕೆ ಬಂದ ಜನತಾ ರಂಗ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಮೌಲ್ಯಾಧಾರಿತ ರಾಜಕಾರಣ ಮಾಡುವುದಾಗಿ ಹೇಳಿದ್ದರು. 1984ರಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯಾದಾಗ 1985ರಲ್ಲಿ ಲೋಕಸಭಾ ಚುನಾವಣೆ ನಡೆಯಿತು. ಆಗ ಬೆಂಗಳೂರಿಗೆ ಚುನಾವಣಾ ಪ್ರಚಾರಕ್ಕೆ ಬಂದಿದ್ದ ಪ್ರಧಾನಿ ರಾಜೀವ್ ಗಾಂಧಿಯವರು ಲೋಕಸಭಾ ಚುನಾವಣೆಯ ನಂತರ ಹೆಗಡೆಯವರು ಅಪ್ರಸ್ತುತರಾಗುತ್ತಾರೆ ಎಂದು ಹೇಳಿದ್ದರು. ಅದರಂತೆ ಫಲಿತಾಂಶದಲ್ಲಿ ಜನತಾ ಪಕ್ಷಕ್ಕೆ ಹೇಳಿಕೊಳ್ಳುವಂತ ಸ್ಥಾನಗಳು ಲಭಿಸಲಿಲ್ಲ. ಇದರಿಂದ ಮುಜುಗರಕ್ಕೀಡಾದ ಹೆಗಡೆಯವರು ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಮುಂದಾದರು. ಚುನಾವಣೆಯಲ್ಲಿ ಅಭೂತ ಪೂರ್ವ ಯಶಸ್ಸು ಲಭಿಸಿ ಸ್ವಂತ ಬಲದಿಂದ ಸರ್ಕಾರ ರಚಿಸಿದ ಹೆಗಡೆಯವರು ಕರ್ನಾಟಕವಷ್ಟೇ ಅಲ್ಲದೆ ದೇಶದಲ್ಲೇ ಜನಪ್ರಿಯ ಮುಖ್ಯಮಂತ್ರಿ ಎಂಬ ಕೀರ್ತಿಗೆ ಪಾತ್ರರಾದರು. ರಾಜ್ಯದಲ್ಲಿ ಬಹುತೇಕ ಭ್ರಷ್ಟಾಚಾರ ರಹಿತ ಆಡಳಿತ ನಡೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಧಿಕಾರಿ, ಇಲಾಖೆಗಳು ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿದವು. ಆದರೆ ಇದೇ ವೇಳೆ ಹೆಗಡೆಯವರ ಮೇಲೆ ಬಾಟ್ಲಿಂಗ್ ಹಗರಣ ಸುತ್ತಿಕೊಂಡಿತು. ಇದರಿಂದ ಹಿನ್ನಡೆ ಅನುಭವಿಸಿದ ಹೆಗಡೆಯವರು ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇದೊಂದು ಐತಿಹಾಸಿಕ ಘಟನೆ ಎಂದು ಹೇಳಬಹುದು. ಏಕೆಂದರೆ ಆ ನಂತರ ಇಲ್ಲಿಯವರೆಗೂ ಅಧಿಕಾರ ನಡೆಸಿದ ಯಾವ ಮುಖ್ಯಮಂತ್ರಿಯಾಗಲಿ, ಮಂತ್ರಿಗಳಲ್ಲಾಗಲಿ ಮೌಲ್ಯಾಧಾರಿತ ರಾಜಕಾರಣವಾಗಲಿ, ನೈತಿಕತೆಯಾಗಲಿ ಇಲ್ಲವೇ ಇಲ್ಲ. ಇಂದು ಇದು ಕರ್ನಾಟಕ ಮಾತ್ರವಲ್ಲ ಇಡೀ ದೇಶದ ಸ್ಥಿತಿಯೇ ಹಾಗಿದೆ. ಈಗ ಪರಿಸ್ಥಿತಿ ಹೇಗಿದೆ ಎಂದರೆ ಭ್ರಷ್ಟಾಚಾರ ಹೆಚ್ಚುತ್ತಾ ಹೋಗುತ್ತಿದೆ. ಈಗಿನ ಸರ್ಕಾರಕ್ಕಿಂತ, ಹಿಂದಿನ ಸರ್ಕಾರವೇ ಉತ್ತಮವಾಗಿತ್ತು ಎಂದು ಜನರು ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕು ಎನ್ನುವಂತೆ ಆಗಿದೆ. ನಿಜಕ್ಕೂ ಇದು ಕಳವಳ ಪಡುವ ಸಂಗತಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ ಮೈಸೂರು.

ಪೊಲೀಸರೋ – ಭಯೋತ್ಪಾದಕರೋ?

ಮಾನ್ಯರೆ,

ಪೊಲೀಸರ ಪ್ರಕಾರ ಕೊಲೆಯಾಗಿದ್ದಾಳೆ ಎನ್ನಲಾದ ಮಹಿಳೆ ತಾನೇ ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಮುಂದೆ ಹಾಜರಾದರು. ಈ ಪ್ರಕರಣದಲ್ಲಿ, ಆಕೆಯನ್ನು ಗಂಡನೇ ಕೊಲೆ ಮಾಡಿದನೆಂದು ಅವನ ವಿರುದ್ಧ ಸುಳ್ಳು ಕೇಸ್, ಸುಳ್ಳು ಚಾರ್ಜ್ ಶೀಟ್ ಹಾಕಿ ಒಬ್ಬ ನಿರಪರಾಧಿ ಎರಡು ವರ್ಷ ಜೈಲುವಾಸ ಅನುಭವಿಸುವಂತೆ ಮಾಡಿದ ಮೂವರು ಪೊಲೀಸರು ಅಮಾನತು ಆಗಿರುವುದು ಸರಿಯೇ ಇದೆ. ಇದರಿಂದ ಪೊಲೀಸರ ಇಂಟೆಲಿಜೆನ್ಸ್ ಮಟ್ಟದ ಅನಾವರಣ ಆಗಿದೆ. ಇದು ಒಂದು ರೀತಿಯ ಭಯೋತ್ಪಾದಕ ಕೃತ್ಯ ಅಲ್ಲವೇ? ಒಬ್ಬ ಅಮಾಯಕ ಎರಡು ವರ್ಷ ಯಮಯಾತನೆ ಅನುಭವಿಸಿದ್ದಾನಲ್ಲ ಅದಕ್ಕೆ ಯಾರು ಹೊಣೆ? ಅದಕ್ಕೆ ಪರಿಹಾರವೇನು?

ಇನ್ನು ಕೊಪ್ಪಳದ ಪೊಲೀಸರು (2022 ಮಾ. 3ರಂದು) ಕುರಿ, ಆಡುಗಳ ಚರ್ಮ ಸಾಗಿಸುತ್ತಿದ್ದ ಟಾಟಾ ಏಸ್ ತಡೆದು ಜಾನುವಾರು ಹತ್ಯೆ ಸಂರಕ್ಷಣಾ ಪ್ರತಿಬಂಧಕ ಕಾಯದೆ ಅಡಿ ಪ್ರಕರಣ ದಾಖಲಿಸಿ ಜನಸಾಮಾನ್ಯರಲ್ಲಿ ಭಯ ಹುಟ್ಟಿಸಿದ್ದಾರೆ. ಕುರಿ–ಆಡು ಮತ್ತು ಹಸು– ಎಮ್ಮೆಗಳ ಬಗ್ಗೆ ವ್ಯತ್ಯಾಸ ತಿಳಿಯದೆ ಕೇಸು ದಾಖಲಿಸಿ ನ್ಯಾಯಾಧೀಶರಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ ಕೊಪ್ಪಳದ ಬುದ್ಧಿವಂತ ಪೊಲೀಸರು. ಇದು ಒಂದು ರೀತಿಯ ಭಯೋತ್ಪಾದಕ ಕೃತ್ಯ ಅಲ್ಲವೇ?

ಸಾಮಾನ್ಯವಾಗಿ ಸಾಮಾನ್ಯ ಜನರಿಗೆ ಎಲ್ಲಾ ಕಾನೂನಿನ ಅರಿವು ಇರುವುದಿಲ್ಲ. ಆದರೆ ಕಾನೂನು ರಕ್ಷಕರಾದ ಪೊಲೀಸರೆ ಈ ರೀತಿ ಭಯೋತ್ಪಾದಕರಂತೆ ನಡೆದುಕೊಳ್ಳುವ ನೂರಾರು ಘಟನೆಗಳು ಬೆಳಕಿಗೆ ಬರದೇ ನಡೆಯುತ್ತಲೇ ಇರುವುದು ಸತ್ಯವಲ್ಲವೇ?

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ

CGHS ಕಾರ್ಡ್‌ದಾರರಿಗೆ ನಗದು ರಹಿತ ಚಿಕಿತ್ಸೆ ನೀಡಲು ಮುಂದಾಗಲಿ

ಮಾನ್ಯರೇ

ಒಂದು ಸಂದರ್ಭದಲ್ಲಿ ವೈದ್ಯರ ಕಾಳಜಿ ಮತ್ತು ಸೇವಾ ತತ್ಪರತೆಯನ್ನು ತೀರಾ ಹತ್ತಿರದಲ್ಲಿ ಕಂಡು ಅವರ ಬಗ್ಗೆ ಗೌರವ ಉಂಟಾಗಿದೆ. ಇಂದು ಪ್ರಕಟವಾದ ಮೈಸೂರಿನ ಅನೇಕ ಆಸ್ಪತ್ರೆಗಳ ಜಾಹೀರಾತು ನೋಡಿದೆ. ಎಲ್ಲರೂ ಯಶಸ್ವಿನಿ ಬಿಪ್ಲ್, ವಿಮೆ ಮುಂತಾದ ಕಾರ್ಡ್‌ದಾರರಿಗೆ ಸಿಗುವ ಸೌಲಭ್ಯದ ಬಗ್ಗೆ ಹೇಳಿದ್ದಾರೆ. ಆದರೆ ಯಾರೂ ಕೇಂದ್ರ ಸರ್ಕಾರದ ವತಿಯಿಂದ ಜಾರಿಯಾಗಿರುವ CGHS ಕಾರ್ಡ್‌ದಾರರಿಗೆ ನಗದು ರಹಿತ ವೈದ್ಯಕೀಯ ಸೌಲಭ್ಯ ಕೊಡುತ್ತೇವೆಂದು ಹೇಳಿಲ್ಲದಿರುವುದು ಖೇದವಾಯಿತು. ಕೇಂದ್ರ ಸರ್ಕಾರದವರು ತಮ್ಮ ನೌಕರರು ಪಿಂಚಣಿದಾರರಿಗೆ, ಕುಟುಂಬದವರಿಗೆ ವೈದ್ಯಕೀಯ ಸೇವೆಗೆ ಕ್ರಮ ತೆಗೆದುಕೊಂಡು ಉಪಕಾರ ಮಾಡಿದ್ದಾರೆ. ಮೈಸೂರಿನಲ್ಲಿಯೂ ಈ ಸೇವೆ ಲಭ್ಯವಿದೆ. ಅದೃಷ್ಟವಶಾತ್ ಜೆಎಸ್‌ಎಸ್ ಆಸ್ಪತ್ರೆ ಮಾತ್ರ ಈ ಸೇವೆ ನೀಡುತ್ತಿದೆ. ಬೇರೆಯವರು ಮುಂದೆ ಬಂದಿಲ್ಲ. ಈ ವರ್ಷದ ವೈದ್ಯರ ದಿನಾಚರಣೆ ದಿನದಿಂದಲಾದರೂ ಬಹುತೇಕ ವೃದ್ಧರೆ ಸದಸ್ಯರಾಗಿರುವ CGHS ಕಾರ್ಡ್‌ದಾರರಿಗೆ ನಗದು ರಹಿತ ಚಿಕಿತ್ಸೆ ನೀಡಲು ಮುಂದಾಗಲಿ ಎಂದು ಆಶಿಸುತ್ತೇನೆ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಮಂಥನ




ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ವನಮಹೋತ್ಸವ ಒಣಮಹೋತ್ಸವವಾಗದಿರಲಿ



ಸಾಲು ಮರದ ತಿಮ್ಮಕ್ಕ



ಜಾದವ್ ಪಾಯೆಂಗ್



ಡಾ.ಅನಿಲ್‌ಕುಮಾರ್ ಮಲ್ಹೋತ್ರ–ಪಾಮೆಲಾ ಗೇಲ್



ಒಣಗಿ ನಿಂತಿರುವ ಮರ

ನಾವು ಪಿಯುಸಿಯಲ್ಲಿ ಓದುತ್ತಿರುವಾಗ, ಜೀವಶಾಸ್ತ್ರದ ಪ್ರಯೋಗಾಲಯದಲ್ಲಿ ಒಮ್ಮೆ ಪ್ರಯೋಗಾತ್ಮಕ ತರಗತಿ ನಿಗದಿಯಾಗಿತ್ತು. ಕಪ್ಪೆಗಳ ಛೇದನ ಮಾಡಿದ್ದನ್ನು ಅದಕ್ಕೂ ಮುಂಚೆ ಬೇರೆ ಬೇರೆ ವಿಜ್ಞಾನ ಪ್ರದರ್ಶನಗಳಲ್ಲಿ ನೋಡಿದ್ದೆ. ಅದನ್ನು ನಾನೇ ಮಾಡಬಹುದೆಂಬ ಉತ್ಸುಕತೆಯಿತ್ತು. ಆದರೆ ಪ್ರಯೋಗಾಲಯಕ್ಕೆ ಪ್ರಯೋಗ ಪಶುವನ್ನು ನಾವೇ ಒಯ್ಯಬೇಕಿತ್ತು. ಕಪ್ಪೆಯನ್ನು ಎಲ್ಲಿಂದ ಹಿಡಿದು ತರುವುದು? ಒಂದು ವಾರ ಹಾಗೆಯೇ ಕಳೆಯಿತು. ಯಾರಿಗೂ ಕಪ್ಪೆಗಳನ್ನು ಹಿಡಿದು ತರಲಾಗಲಿಲ್ಲ. ನಂತರ ಪ್ರತಿಯೊಬ್ಬರಿಗೂ 5–5 ಜಿರಲೆಗಳನ್ನು ಹಿಡಿದು ತರಲು ಹೇಳಿದರು. ಅಂತೂ ಇಂತೂ ಹರಸಾಹಸ ಮಾಡಿ ಹಿಡಿದುಕೊಂಡು ಹೋದೆವು. ಎಲ್ಲ ಜಿರಲೆಗಳನ್ನು ಒಂದು ಟ್ರೇ ಯಲ್ಲಿ ಹಾಕಿಸಿದರು. ಬ್ಯಾಚಿನಲ್ಲಿದ್ದ 15 ಜನರ ಎರಡು ಗುಂಪು ಮಾಡಿ ಮೊದಲನೆಯ ಗುಂಪು ಮೊದಲಿಗೆ ಛೇದನ ಮಾಡಬೇಕಿತ್ತು. ಎಲ್ಲರಿಗೂ ಹೊಸತು, ಒಂದು ಜಿರಲೆ ತೆಗೆದುಕೊಂಡು ಛೇದನ ಮಾಡಿ ಸರಿ ಬರಲಿಲ್ಲವೆಂದು ಮತ್ತೊಂದು. ಹೀಗೆ ಮೊದಲ ಬ್ಯಾಚಿನವರೇ ಒಬ್ಬೊಬ್ಬರು 2–3 ಜಿರಳೆಗಳನ್ನು ಬಳಸಿಬಿಟ್ಟೆವು. ಕೆಲವರಂತೂ 5–6! ಹೀಗೆ ಆಗಿ, ಎರಡನೆಯ ಬ್ಯಾಚಿನ ಸರದಿ ಬರುವ ಹೊತ್ತಿಗೆ ಆ ಬ್ಯಾಚಿನವರಿಗೆ ಛೇದನ ಪ್ರಕ್ರಿಯೆ ಮಾಡಲು ಪೂರ್ಣ ದೇಹದ ಜಿರಳೆಗಳೇ ಉಳಿದಿರಲಿಲ್ಲ. ಪಾಪ ಅವರೆಲ್ಲರೂ ಮೊದಲ ಬ್ಯಾಚಿನವರು ಬಳಸಿ ಬಿಟ್ಟ ಛಿದ್ರ ದೇಹಿಗಳನ್ನೇ ಹೇಗೋ ಅಭ್ಯಸಿಸಿದರು.

ನಾವು ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುತ್ತಿರುವ ರೀತಿ ಹೀಗೆಯೇ ಇದೆ. ಹೌದು ನಮ್ಮ ಪೂರ್ವಜರು ಕಷ್ಟಪಟ್ಟು ಜತನದಿಂದ ಪರಿಸರವನ್ನು ಕಾಪಾಡಿಕೊಂಡು ಬಂದಿದ್ದರು. ನಮ್ಮ ತಲೆಮಾರಿನವರು, ಮೊದಲನೇ ಬ್ಯಾಚಿನ ವಿದ್ಯಾರ್ಥಿಗಳ ಹಾಗೆ, ಚೂರೂ ವಿವೇಚನೆ ಇಲ್ಲದೆ ಬೇಕಾಬಿಟ್ಟಿ ಅದನ್ನು ಬಳಸಿ ಬಿಸಾಡಿದೆವು. ಪರಿಣಾಮ ನಮ್ಮ ಮಕ್ಕಳನ್ನು ಎರಡನೆಯ ಬ್ಯಾಚಿನ ವಿದ್ಯಾರ್ಥಿಗಳ ಸ್ಥಾನದಲ್ಲಿ ಕಲ್ಪಿಸಿಕೊಳ್ಳಿ. ಪಾಪ ಅವಕ್ಕೆ ಅಳಿದುಳಿದದ್ದಾದರೂ ಸಿಕ್ಕುತ್ತಿದೆ. ನಂತರ ಬರುವ ತಲೆಮಾರಿನ ಕಥೆ ಏನು ಜಿರಲೆಗಳನ್ನು ಇಲ್ಲಿ ಪ್ರಾಕೃತಿಕ ಸಂಪತ್ತಿಗೆ ಹೋಲಿಸಿಕೊಳ್ಳಿ ಮತ್ತು ವಿದ್ಯಾರ್ಥಿಗಳ ಸ್ಥಾನದಲ್ಲಿ ವಿವಿಧ ತಲೆಮಾರಿನ ಮನುಷ್ಯರು.

ನಾವು ಪ್ರಕೃತಿಯ ಮೇಲೆ ಗೈದಿರುವ ಅತ್ಯಾಚಾರಕ್ಕೆ ಆಕೆ ನಲುಗಿ ಹೋಗಿದ್ದಾಳೆ. ಪಂಚಭೂತಗಳನ್ನೂ ನಾವು ಕಲುಷಿತಗೊಳಿಸಿಬಿಟ್ಟಿದ್ದೇವೆ. ಯಾವುದನ್ನೂ ಶುದ್ಧವಾಗಿರಲು ಬಿಡದೆ ಮಲೀನಗೊಳಿಸಿಬಿಟ್ಟಿದ್ದೇವೆ. ದುರಾಸೆ ಎನ್ನುವುದು ಒಂದು ಕಾರಣವಾದರೆ, ಅತಿಯಾದ ಸ್ವಾರ್ಥ ಮತ್ತೊಂದು ಕಾರಣ. ನಾಗರಿಕ ಪ್ರಜ್ಞೆಯ ಕೊರತೆ ಈ ಸಮಸ್ಯೆ ವೇಗವಾಗಿ ಉಲ್ಬಣವಾಗಲು ಮತ್ತೊಂದು ಪ್ರಮುಖ ಕಾರಣವಾಗಿದೆ.

ಪ್ರಕೃತಿಯನ್ನು ಮತ್ತೆ ಸರಿಪಡಿಸಲಾಗದಂತೆ ಹಾಳುಗೆಡುವುತ್ತಿರುವ ನಾವು, ನಮ್ಮ ಮುಂದಿನ ತಲೆಮಾರನ್ನು ಹಲವು ಸುಖ–ಸಂತೋಷ, ನೆಮ್ಮದಿ ಆನಂದಗಳಿಂದ ವಂಚಿತರಾಗಿಸುತ್ತಿದ್ದೇವೆ.

ನಿಮಗೆ ಗೊತ್ತೇ, ನಮ್ಮ ತಲೆಮಾರೇ ಮಿಂಚುಹುಳ ನೋಡಿದ ಕೊನೆಯ ತಲೆಮಾರಾಗಿಬಿಡುತ್ತದೆ. ಹೌದು, ಈಗಾಗಲೇ 60% ವನ್ಯ ಜೀವಿಗಳು ನಶಿಸಿ ಹೋಗಿದ್ದಾವೆ. ಕೀಟ, ಪ್ರಾಣಿ, ಮೀನುಗಳ 20000ಕ್ಕೂ ಹೆಚ್ಚು ಪ್ರಭೇದಗಳು ಈಗಾಗಲೇ ನಶಿಸಿಹೋಗಿದ್ದಾವೆ. 1000 ಪಟ್ಟು ವೇಗದಲ್ಲಿ ಕಾಡು ನಶಿಸುತ್ತಿದೆ. ಕಳೆದ 40 ವರ್ಷಗಳಲ್ಲಿ 33% ಕಾಡನ್ನು ಕಡಿದಿದ್ದೇವೆ. ಬೀಜ ಪ್ರಸರಣದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಪಕ್ಷಿಗಳು ಅತಿಯಾದ ಮಾಲಿನ್ಯವಷ್ಟೇ ಅಲ್ಲ, ಹಲವು ರೀತಿಯ ಮಾನವ ನಿರ್ಮಿತ ತರಂಗಗಳಿಂದ ಪ್ರಾಣ ಕಳೆದುಕೊಳ್ಳುತ್ತಿವೆ. ಮಣ್ಣು ತನ್ನ ಫಲವತ್ತತೆಯನ್ನು ಉತ್ಪಾದಕತೆಯನ್ನು ಕಳೆದುಕೊಳ್ಳುತ್ತಿದೆ.

ಮಾಲಿನ್ಯ ಹೆಚ್ಚಿ, ಮನುಷ್ಯ ವಿಷಗಾಳಿಯನ್ನು ಉಸಿರಾಡುವಂತಾಗಿದೆ. ಮನುಷ್ಯನ ಪ್ರತಿ ಅಂಗವೂ ರೋಗಕ್ಕೆ ತುತ್ತಾಗುತ್ತಿದೆ. ತಿನ್ನುತ್ತಿರುವ ಹಣ್ಣು ತರಕಾರಿಗಳು ವಿಷಕಾರಿಯಾಗಿವೆ. ಜೀವಜಲ ಹಾನಿಕರವೆನಿಸುವಂತಾಗಿದೆ. ಇದೆಲ್ಲಕ್ಕೂ ಕಾರಣ ಕಾಡು ನಾಶವಾಗುತ್ತಿರುವುದು. ಕಾಡು ಎನ್ನುವುದು ಮರಗಳಿರುವ ತಾಣವಷ್ಟೇ ಎಂಬ ಉಡಾಫೆಯಿಂದ ಮನುಷ್ಯ ಕಾಡನ್ನು ತರಿದುಹಾಕುತ್ತಿದ್ದಾನೆ. ಪ್ರಕೃತಿಯಲ್ಲಿ ಸಮತೋಲನ ಉಂಟಾಗುವುದೇ ಕಾಡುಗಳಿಂದ ಎಂಬ ಸಹಜ ಅರಿವಿನ ಕೊರತೆ ಆಶ್ಚರ್ಯ ಹುಟ್ಟಿಸುತ್ತದೆ. ಮಣ್ಣಿಂದ ಸಸಿ, ಸಸಿಯಿಂದ ಮರ, ಮರದ ಬೇರುಗಳಿಂದ ಮಣ್ಣು ಮತ್ತು ನೀರಿನ ರಕ್ಷಣೆ, ಮರ–ಗಿಡಗಳು ನಡೆಸುವ ದ್ಯುತಿಸಂಶ್ಲೇಷಣೆಯಿಂದ ಆಮ್ಲಜನಕ, ಮರ ಗಿಡಗಳು ವಾತಾವರಣದಲ್ಲಿ ತಂಪನ್ನುಂಟು ಮಾಡುತ್ತದೆ. ಕಾಡಿನಲ್ಲಿ ಮರಗಳು ಹಿಡಿದಿಡುವ ನೀರೇ ನಮಗೆ ನೀರಿನ ಮುಖ್ಯ ಸ್ರೋತ ಎಲ್ಲವೂ ಒಂದಕ್ಕೊಂದು ಸಂಬಂಧಿತ.

ಇವೆಲ್ಲವೂ ನಮ್ಮೆಲ್ಲರಿಗೆ ತಿಳಿದ ವಿಷಯವೇ. ಆದರೂ ನಾವು ಒಂದೋ ಅಸಹಾಯಕರಾಗಿದ್ದೇವೆ, ಇಲ್ಲವಾದಲ್ಲಿ ಈ ಹಾನಿಗೆ ಕೊಡುಗೆ ನೀಡುತ್ತಿದ್ದೇವೆ ಅಥವಾ ಮೌನಪ್ರೇಕ್ಷಕರಾಗಿ ನೊಂದುಕೊಳ್ಳುತ್ತಿದ್ದೇವೆ. ಆದರೆ ತಮಗೆ ಅರಿವಿದ್ದೋ ಇಲ್ಲದೆಯೋ ಪ್ರಕೃತಿಗೆ ಸಹಾಯಕವಾಗುವಂತಹ ಕೆಲಸಗಳನ್ನು ಮಾಡುವ ಕೆಲವು ವಿಶೇಷ ವ್ಯಕ್ತಿಗಳಿಂದ ಇನ್ನೂ ಪ್ರಕೃತಿ ಉಸಿರಾಡುತ್ತಿದೆ ಎಂದರೆ ತಪ್ಪಾಗಲಾರದು.

> ಕಾಡು ಎನ್ನುವುದು ಮರಗಳಿರುವ ತಾಣವಷ್ಟೇ ಎಂಬ ಉಡಾಫೆಯಿಂದ ಮನುಷ್ಯ ಕಾಡನ್ನು ತರಿದು ಹಾಕುತ್ತಿದ್ದಾನೆ. ಪ್ರಕೃತಿಯಲ್ಲಿ ಸಮತೋಲನ ಉಂಟಾಗುವುದೇ ಕಾಡುಗಳಿಂದ ಎಂಬ ಸಹಜ ಅರಿವಿನ ಕೊರತೆ ಆಶ್ಚರ್ಯ ಹುಟ್ಟಿಸುತ್ತದೆ. ಮಣ್ಣಿಂದ ಸಸಿ, ಸಸಿಯಿಂದ ಮರ, ಮರದ ಬೇರುಗಳಿಂದ ಮಣ್ಣು ಮತ್ತು ನೀರಿನ ರಕ್ಷಣೆ, ಮರ-ಗಿಡಗಳು ನಡೆಸುವ ದ್ಯುತಿ ಸಂಶ್ಲೇಷಣೆಯಿಂದ ಆಮ್ಲಜನಕ, ಮರ ಗಿಡಗಳು ವಾತಾವರಣದಲ್ಲಿ ತಂಪನ್ನುಂಟು ಮಾಡುತ್ತದೆ. ಕಾಡಿನಲ್ಲಿ ಮರಗಳು ಹಿಡಿದಿಡುವ ನೀರೇ ನಮಗೆ ನೀರಿನ ಮುಖ್ಯ ಸ್ರೋತ ಎಲ್ಲವೂ ಒಂದಕ್ಕೊಂದು ಸಂಬಂಧಿತ.

ಬಹುಶಃ ನಿಮಗೂ ಇದೇ ಹೆಸರು ನೆನಪಾಗಿರಬೇಕು! ಹೌದು ಈ ಪ್ರಪಂಚದಲ್ಲಿ ವೃಕ್ಷಮಾತೆ **ಸಾಲುಮರದ ತಿಮ್ಮಕ್ಕ**ನಂತಹವರು ಇದ್ದೇ ಇರುತ್ತಾರೆ. ಜೂನ್ 30 ಅವರು ಹುಟ್ಟಿದ ದಿನ ಕೂಡ. 114 ವಸಂತಗಳ ಇವರ ಮನ ಈಗಲೂ ಮರ ಗಿಡಗಳೆಂದರೆ ಮಿಡಿಯುತ್ತದೆ. ಸಾವಿರಾರು ಗಿಡಗಳನ್ನು ನೆಟ್ಟು ಹೆಮ್ಮರವಾಗಿಸಿದ ತಿಮ್ಮಕ್ಕನವರ ನಿಸ್ವಾರ್ಥ ಸೇವೆ ಅನುಪಮ.

ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾ ಎಂದು ಕರೆಯಲ್ಪಡುವ **ಜಾದವ್ ಪಾಯೆಂಗ್** ಅಸ್ಸಾಮಿನವರು. ಅಸ್ಸಾಮಿನ ಮಾಜುಲಿ ಎಂಬ ಕುಗ್ರಾಮದವರಾದ ಇವರು 1360 ಎಕರೆ ಅರಣ್ಯವನ್ನು ಬೆಳೆಸಿ ಪೋಷಿಸುತ್ತಿದ್ದಾರೆ ಎಂದರೆ ನಂಬಲು ಕಷ್ಟವೇ. ಆದರೆ ಇದನ್ನು ಅವರು ಮಾಡುತ್ತಿರುವುದು ಅಷ್ಟೇ ನಿಜ, ಅವರು ಏಕಾಂಗಿ ಯಾಗಿ ಇದನ್ನೆಲ್ಲಾ ಮಾಡಿದರು ಎಂಬುದು! ಬ್ರಹ್ಮಪುತ್ರ ನದಿಯ ಮಡಿಲಲ್ಲಿ ಕಂಗೊಳಿಸುತ್ತಿದ್ದ ಕಾಡು ನೆರೆಹಾವಳಿಯಿಂದ ಸಂಪೂರ್ಣ ವಾಗಿ ಬುಡಮೇಲಾದಾಗ ಪಾಯೆಂಗ್ ಗೆ ಬಹಳ ದುಃಖವಾಯಿತು. ದ್ವೀಪವಾಗಿದ್ದ ಆ ಭೂಪ್ರದೇಶಕ್ಕೆ ದಿನವೂ ದೋಣಿಯಲ್ಲಿ ಹೋಗಿ ಸಸಿಯನ್ನು ನೆಟ್ಟು ನೀರುಣಿಸುತ್ತಿದ್ದ ಪಾಯೆಂಗ್ ಗೆ ಅದೇ ಕಾಯಕ ವಾಯಿತು. ಹೀಗೆ ಏಕಾಂಗಿಯಾಗಿ ಅವರು ತಮಗರಿವಿಲ್ಲದೇ ಬೆಳೆಸಿದ್ದು 1360ಎಕರೆಯ ಕಾಡು! ಅಲ್ಲಿ ಮರಗಿಡಗಳು ಮಾತ್ರವಲ್ಲ ನಿಧಾನವಾಗಿ ಹಕ್ಕಿಗಳು, ಕೀಟಗಳು ಪಕ್ಷಿಗಳು ಮಾತ್ರವಲ್ಲದೆ, ಬಂಗಾಳದ ಹುಲಿ, ಘೇಂಡಾಮೃಗ, ಜಿಂಕೆ, ಮೊಲಗಳು ಮನೆ ಮಾಡಿಕೊಂಡಿವೆ. ಆನೆಗಳು ದಿನವೂ ಇಲ್ಲಿ ವಿಹಾರಕ್ಕೆ ಬರುತ್ತವೆ! ವಿಶೇಷವೇನೆಂದರೆ ಪಾಯೆಂಗ್ ಇವ್ಯಾವನ್ನೂ ತಡೆಯುವುದಿಲ್ಲ. ಅವುಗಳು ತಿಂದು ಬಿಟ್ಟದ್ದು ತನ್ನ ಪಾಲು ಎಂದು ಬದುಕುತ್ತಿದ್ದಾರೆ. ಕಾಡಿನ ಅವಶ್ಯಕತೆ ಮತ್ತು ಉಪ ಯೋಗಗಳ ಬಗ್ಗೆ ಶಾಲೆಗಳಿಗೆ ಹೋಗಿ ಅರಿವು ಮೂಡಿಸಿ ಬರುತ್ತಾರೆ.

ಪಾಯೆಂಗ್ ಪ್ರಕಾರ, ಮಗು ಶಾಲೆಗೆ ಸೇರಿದ ದಿನದಂದೇ ಅದರ ಹೆಸರಲ್ಲಿ ಒಂದು ಗಿಡ ನೆಡಬೇಕು. ಮಗುವಿಗೇ ಆರೈಕೆ ಮಾಡುವುದನ್ನು ಕಲಿಸಬೇಕು. ಆಗ ಮಗುವಿನೊಂದಿಗೆ ಗಿಡವೂ ಬೆಳೆದು ಹೆಮ್ಮರವಾಗಿ ಶಾಶ್ವತ ಕೊಡುಗೆಯಾಗುತ್ತದೆ. ನಿಜ ಅಲ್ಲವೇ? ಮುಂದುವರಿದು ಅವರು ಹೇಳುತ್ತಾರೆ, ಮಕ್ಕಳು ಮಾತ್ರವಲ್ಲ ದೊಡ್ಡವರೂ ತಮ್ಮ ತಮ್ಮ ಕಣ್ಣಿಗೆ ಕಾಣುವ ಮರ ಗಿಡ ವನಸ್ಪತಿಗಳ ಹೆಸರು ಮತ್ತು ಉಪಯೋಗಗಳನ್ನು ತಿಳಿದುಕೊಂಡಿರಲೇಬೇಕು. ಆಗ ಮಾತ್ರ ಅವುಗಳ ಬಗ್ಗೆ ಮಮಕಾರ ಬೆಳೆಯಲು ಸಾಧ್ಯ ಎನ್ನುತ್ತಾರೆ. ಹೌದು, ನಮ್ಮನ್ನು ನಾವೇ ಈ ಪ್ರಶ್ನೆ ಕೇಳಿಕೊಂಡರೆ, ನಮಗೆಷ್ಟು ಜನಕ್ಕೆ ನಮ್ಮ ಮನೆಯ ಸುತ್ತಮುತ್ತ ಶಾಲೆ–ಕಾಲೇಜು, ಕಚೇರಿಗಳ ಆವರಣ, ರಸ್ತೆಬದಿ ಬೆಳೆದು ನಿಂತು ನೆರಳನ್ನು ನೀಡುವ ಮರಗಳ ಹೆಸರು ಗೊತ್ತು?

ಕುಕ್ಕರಹಳ್ಳಿಕೆರೆಯ ಆವರಣದಲ್ಲಿ, ಮೈಸೂರು ಆಕಾಶವಾಣಿಯ ಆವರಣಗಳಲ್ಲಿ 250–300ಕ್ಕೂ ಹೆಚ್ಚು ವಿವಿಧ ಜಾತಿಯ ಮರಗಿಡಗಳಿದ್ದಾವೆ! ಹಾಗೆಯೇ ಮುಂದುವರಿದರೆ?

ಕೊಡಗಿನ ಬಳಿ **ಡಾ.ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಪಾಮೆಲಾ ಗೇಲ್** ಜೋಡಿ ಒಂದು ಬರಡುಪ್ರದೇಶವನ್ನು ಕಾಡಾಗಿಸಿದ್ದಾರೆ. ಇನ್ನು ಭಾರತದಾದ್ಯಂತ 'ದೇವರ ಕಾಡು'ಗಳಿವೆ. ಕಾಡನ್ನು ಪೂಜ್ಯವೆಂದು ಪೂಜಿಸುವುದರ ಮೂಲಕ ಅದರ ರಕ್ಷಣೆ ನಡೆಯುತ್ತಿದೆ. ಇಂತಹ ಸುಗುಣಿಗಳಿಗೇನೂ ಕಡಿಮೆಯಿಲ್ಲ. ಆದರೆ ಕುಬುದ್ಧಿಯವರ ಜನಸಂಖ್ಯೆಯೇ ಹೆಚ್ಚಾಗಿರುವುದು ಅಪಾಯಕಾರಿ. ಇತ್ತೀಚೆಗೆ ಮಳೆ ಬಿರುಗಾಳಿ ಬಂದು ಕುಕ್ಕರಹಳ್ಳಿ ಕೆರೆಯ ಏರಿಯ ಮೇಲಿದ್ದ ಆಕಾಶ ಮಲ್ಲಿಗೆ ವೃಕ್ಷ ಧರಾಶಾಹಿಯಾದಾಗ, ಪ್ರಕೃತಿ ಪ್ರೇಮಿಗಳು ಅಥವಾ ನಾಗರಿಕ ಪ್ರಜ್ಞೆ ಇರುವ ವಾಯುವಿಹಾರಿಗಳು, ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಮತ್ತೆ ಆ ಮರ ಚಿಗುರುವಂತೆ ಮಾಡಿದ್ದಾರೆ! ಮೈಸೂರಿನ ಇನ್ನೊಂದು ದಿಕ್ಕಿನಲ್ಲಿ ಮರಗಳ ನಿರ್ದಾಕ್ಷಿಣ್ಯ ಹನನ ಆದದ್ದೂ ಇದೆ!

ನಾವುಗಳೇ ನಮ್ಮ ಮನೆಯ ಮುಂದೆ ಸರ್ಕಾರ ನೆಟ್ಟ ಗಿಡಗಳು ಬೆಳೆದು ಮರವಾಗುವ ದಾರಿಯಲ್ಲಿ ಇದ್ದಾಗ ಹಲವು ಕಾರಣಗಳಿಗೆ ಅವನ್ನು ಶಪಿಸಿಸುತ್ತಾ ಕಡಿಯಲು ಯೋಜನೆ ಹಾಕುತ್ತೇವೆ. ನಮ್ಮ ಕಾರು ಬೈಕುಗಳ ಪಾರ್ಕಿಂಗ್‌ಗೆ ತೊಂದರೆ ಎಂದೋ, ಎಲೆಗಳು ಬಿದ್ದು ಮನೆಯ ಮುಂದೆ ಕಸವಾಗುತ್ತದೆ ಎಂದೋ, ಪಕ್ಷಿಗಳು ಹಾವುಗಳು ಇತರ ಕೀಟಗಳು ಮನೆಯ ಒಳಗೆ ಬರುತ್ತವೆ ಎಂದೋ, ಬೇರೆಯವರು ಅದರ ನೆರಳಿಗೆ ಗಾಡಿ ನಿಲ್ಲಿಸುತ್ತಾರೆಂದೋ! ಹೌದು, ಒಮ್ಮೆ ಅವಲೋಕಿಸಿಕೊಂಡರೆ ನಾವೂ ಯಾವಾಗಲಾದರೂ ಹೀಗೆ ಯೋಚನೆ ಮಾಡಿಯೇ ಇರುತ್ತೇವೆ. ಅಲ್ಲವೇ?

ಇನ್ನು ರಸ್ತೆ ಅಗಲೀಕರಣಕ್ಕಾಗಿ ಬಲಿಯಾಗುವ ಮರಗಳ ಸಂಖ್ಯೆ ನೋಡಿದರೆ ದಿಗ್ಭ್ರಮೆಯಾಗುತ್ತದೆ. ಆ ಮರಗಳನ್ನು ಉಳಿಸಿಕೊಂಡೇ ರಸ್ತೆ ಅಗಲ ಮಾಡುವ ಕೌಶಲ, ಸಹೃದಯ ಜವಾಬ್ದಾರಿ ಕಾಳಜಿ ನಮ್ಮನ್ನು ಆಳುವವರಿಗೆ, ಯೋಜನೆ ರೂಪಿಸುವ ಎಂಜಿನಿಯರ್‌ಗಳಿಗೆ ಇದ್ದರೆ ಎಷ್ಟು ಚೆನ್ನ ಅಲ್ಲವೇ? ಪಾಶ್ಚಿಮಾತ್ಯ ದೇಶಗಳಲ್ಲಿ ಈ ಪ್ರಯೋಗ ನಡೆದು ಯಶಸ್ವಿಯಾಗಿದೆ. ಪ್ರಕೃತಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಲು ಸ್ವಲ್ಪ ಅಂಕು ಡೊಂಕಾದ ರಸ್ತೆಯಲ್ಲಿ ಚಲಿಸಬಹುದಲ್ಲವೇ? ಗುಂಡಿಗಳಿರುವ ರಸ್ತೆಗಳಿಗಿಂತಾ ಅದು ಎಷ್ಟೋ ಮೇಲು!

ಇನ್ನು ವಿದ್ಯುತ್ ತಂತಿಗಳಿಗೆ, ಮೆರವಣಿಗೆಗಳಿಗೆ, ಅಂಬಾರಿ ಬಸ್‌ಗೆ, ದಸರಾ ದೀಪಾಲಂಕಾರಕ್ಕೆ ತೊಂದರೆಯಾಗುತ್ತದೆ ಎಂದು ಮರಗಳನ್ನು 'ಟ್ರಿಮ್' ಮಾಡುವ ಪರಿಪಾಠ ಈಗ ಸಾಮನ್ಯವೆನಿಸಿಬಿಟ್ಟಿದೆ. ಅವುಗಳ ರೆಂಬೆ ಕೊಂಬೆಗಳನ್ನು ಇಷ್ಟಬಂದಂತೆ ಕಡಿದು ಹಾಕುತ್ತಾರೆ. ಇದರಿಂದ ಮರಗಳ ಸಹಜವಾದ ಸಮತೋಲನಕ್ಕೆ ಹಾನಿಯಾಗುತ್ತದೆ. ಹಾಗಾಗಿಯೇ ಸಣ್ಣ ಮಳೆ ಗಾಳಿಗಳಿಗೂ ಇಂದು ಮರಗಳು ಉರುಳಿ ಬೀಳುವುದು.

ಇನ್ನು ನಗರವನ್ನು ಅಂದಗೊಳಿಸುವುದಕ್ಕಾಗಿ ಫುಟ್‌ಪಾತ್ ನಿರ್ಮಾಣ ಮಾಡುತ್ತಾ, ಮರಗಳ ಬುಡಕ್ಕೂ ಕಾಂಕ್ರೀಟು ಹಾಕಿಬಿಡುತ್ತಾರೆ. ಇದೂ ಮರಗಳನ್ನು ಮರಣದತ್ತ ದೂಡುತ್ತದೆ. ಕೆಲವು ಅಂಗಡಿಗಳ ಮಾಲೀಕರು ಅಂಗಡಿಯ ಮುಂದಿನ ಮರದಿಂದ ಗ್ರಾಹಕರಿಗೆ ಅಂಗಡಿ ಕಾಣುವುದಿಲ್ಲವೆಂದು, ಅವು ನಿಧಾನವಾಗಿ ತಾವೇ ಸಾಯುವಂತೆ ಉಪಾಯ ಮಾಡುತ್ತಾರೆ. ಈ ಸಂಚು ಯಾರಿಗೂ ತಿಳಿಯದ್ದೇನಲ್ಲ, ಆದರೂ ಜಾಣಮೌನ, ವಿವಿಧ ಕಾರಣಗಳಿಗಾಗಿ!

ಪಟ್ಟಿ ಮಾಡುತ್ತಾ ಹೋದರೆ ನಮ್ಮ ಕೊಲೆಗಾರ ಬುದ್ಧಿಯ ಅನಾವರಣವಾಗುತ್ತಲೇ ಹೋಗುತ್ತದೆ. ಜುಲೈ 1ರಿಂದ 'ವನ ಮಹೋತ್ಸವ ಸಪ್ತಾಹ' ಪ್ರಾರಂಭವಾಗಿದೆ. ಹಾಗಾಗಿಯೇ ಇವೆಲ್ಲಾ ಮನಸಿಗೆ ಬಂದು ಖೇದವೆನಿಸಿತು. ಆಚರಣೆಗಳಲ್ಲಿ ಎತ್ತಿ ಕೈ ನಮ್ಮದು! ಪ್ರತಿ ವನಮಹೋತ್ಸವದ ಸಮಯದಲ್ಲಿ ನೂರಾರಲ್ಲ, ಕೋಟ್ಯಾಂತರ ಸಸಿಗಳನ್ನು ನೆಡುತ್ತೇವೆ. ನಮಗೆ ನಿಜವಾದ ಕಳಕಳಿ ಇದ್ದಿದ್ದೇ ನಿಜವಾಗಿದ್ದರೆ, ಇಂದು ಅಮೆಜಾನ್ ಕಾಡಿಗಿಂತಾ ದೊಡ್ಡದಾದ ಕಾಡು ಭಾರತದಲ್ಲಿ ಇರಬೇಕಿತ್ತು! ಅಷ್ಟು ಸಸಿಗಳನ್ನು ನೆಟ್ಟಿದ್ದೇವೆ 1950ರಲ್ಲಿ ಈ ಆಚರಣೆ ಶುರುವಾದಂದಿನಿಂದ! ಸದ್ಯ ಅವು ವನಮಹೋತ್ಸವ ಸಪ್ತಾಹ ಮುಗಿಯುವವರೆಗೂ ಬದುಕಿದ್ದರೆ ಅದೇ ಅವುಗಳ ಪುಣ್ಯ! ವನಮಹೋತ್ಸವವನ್ನು, ಒಣಮಹೋತ್ಸವ ಎಂದು ಆಡಿಕೊಂಡದ್ದು ನೆನಪಾಯಿತೇ?

1947ರಲ್ಲಿಯೇ, ಅಂದು ಕೃಷಿ ಮತ್ತು ಆಹಾರ ಸಚಿವರಾಗಿದ್ದ ಕೆ ಎಂ ಮುನ್ಶಿ ಅವರ ಕಲ್ಪನೆಯಂತೆ ವನಮಹೋತ್ಸವದ ಆಚರಣೆ ಪ್ರಾರಂಭವಾಯಿತು. 1950ರಲ್ಲಿ ಅಧಿಕೃತವಾಗಿ ವನಮಹೋತ್ಸವ ಸಪ್ತಾಹ ರಾಷ್ಟ್ರೀಯ ಮಟ್ಟದ ಆಚರಣೆಯಾಗಿ ಘೋಷಣೆಯಾಯಿತು. ಈಗ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪರಿಸರ ದಿನಾಚರಣೆಯ ಸಂದರ್ಭದಲ್ಲಿ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದ ಎರಡನೆಯ ಚರಣಕ್ಕೆ ಮುನ್ನುಡಿ ಹಾಡಿದ್ದಾರೆ. ವನಮಹೋತ್ಸವದ ಸಂದರ್ಭದಲ್ಲಿ ಅದನ್ನೇ ಮುಂದುವರೆಸಿದರೂ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ ಜೊತೆಗೆ, ನಮ್ಮ ಪ್ರೀತಿ ಪಾತ್ರರನ್ನೂ ಆ ಮೂಲಕ ಅಮರರನ್ನಾಗಿಸಬಹುದು.

ಈ ಬಾರಿಯಾದರೂ, ನಾವು ಹೊಸ ಗಿಡ ನೆಡದಿದ್ದರೂ ಪರವಾಗಿಲ್ಲ, ಯಾರೋ ನೆಟ್ಟ ಗಿಡ, ಬೆಳೆಸಿ ಮರ ಸಾಯುತ್ತಿದ್ದರೆ ನೀರೆರೆದು ಬದುಕಿಸೋಣ, ಪೋಷಿಸೋಣ. ಆಗಲಾದರೂ ಪ್ರಕೃತಿಯ ಋಣವನ್ನು ಸೂಜಿಮೊನೆಯಷ್ಟಾದರೂ ತೀರಿಸಿದ ಸಮಾಧಾನ ನಮ್ಮದಾಗುತ್ತದೆ.

ಎಸ್‌ಎಟಿಎಸ್ ತಂತ್ರಾಂಶದಿಂದ ನಕಲಿ, ದ್ವಿ ದಾಖಲಾತಿ ವಿದ್ಯಾರ್ಥಿಗಳ ತೆಗೆದು ಹಾಕಲು ಶಿಕ್ಷಣ ಇಲಾಖೆ ಸೂಚನೆ

ಮೈಸೂರು, ಜೂ.2(ಎಸ್‌ಪಿಎನ್)– ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಯಲ್ಲಿ ನಕಲಿ ದಾಖಲಾತಿ ಹಾಗೂ ದ್ವಿ ದಾಖಲಾತಿಗಳನ್ನು ಎಸ್‌ಎಟಿಎಸ್ ತಂತ್ರಾಂಶದಿಂದ ತಪ್ಪದೇ ತೆಗೆದು ಹಾಕಬೇಕು. ಇಲ್ಲದಿದ್ದಲ್ಲಿ ಇದರಿಂದಾಗುವ ಆರ್ಥಿಕ ನಷ್ಟಕ್ಕೆ ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕ ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಟಿಎಸ್ ತಂತ್ರಾಂಶದಲ್ಲಿ ಬಾಕಿ ಉಳಿದಿರುವ 17 ಲಕ್ಷ ವಿದ್ಯಾರ್ಥಿಗಳ ಆಧಾರ್ ಮೌಲ್ಯೀಕರಣ ಕಾರ್ಯ ಪೂರ್ಣಗೊಳಿಸಬೇಕು ಹಾಗೂ ವಿದ್ಯಾರ್ಥಿಗಳ ದ್ವಿ ದಾಖಲಾತಿ ಮಾಹಿತಿಯನ್ನು ತೆಗೆದು ಹಾಕುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಎಲ್ಲಾ ಜಿಲ್ಲಾ ಮತ್ತು ತಾಲೂಕು ಹಂತದ ಶಿಕ್ಷಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಯ ಡೇಟಾ ಪ್ರಮಾಣೀಕರಿಸಬೇಕು. ಇಲ್ಲದಿದ್ದರೆ ಇಲಾಖೆಯ ವಿವಿಧ ಯೋಜನೆಗಳಾದ ವಿದ್ಯಾರ್ಥಿವೇತನ ಮತ್ತು ಇನ್ನಿತರ ಯೋಜನೆಗಳ ಅನುಷ್ಠಾನಕ್ಕೆ ತೊಂದರೆ ಉಂಟಾಗುತ್ತಿದೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಆಧಾರ್ ಮೌಲ್ಯೀಕರಣವನ್ನು ಎಸ್‌ಎಟಿಎಸ್ ತಂತ್ರಾಂಶದಲ್ಲಿ ಪೂರ್ಣಗೊಳಿಸಲು ದಿನಾಂಕ: 30.7.2025 ತನಕ ಅಂತಿಮ ಅವಕಾಶ ನೀಡಲಾಗಿದೆ. ಈ ಅವಧಿಯ ನಂತರ ಶಾಲಾ ದಾಖಲಾತಿಗಳಲ್ಲಿ ಆಧಾರ್ ಮೌಲ್ಯೀಕರಣವಾಗದ ವಿದ್ಯಾರ್ಥಿಗಳನ್ನು ನಕಲಿ ಪರಿಗಣಿಸಲಾಗುವುದು. ಸದರಿ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲಾ ಮುಖ್ಯಶಿಕ್ಷಕರು ತಮ್ಮ ಲಾಗಿನ್‌ನಲ್ಲಿ ತೆಗೆದು ಹಾಕುವುದು. ಆಧಾರ್ ಇಲ್ಲದ ವಿದ್ಯಾರ್ಥಿಗಳಿಗೆ ಆಧಾರ್ ನೋಂದಣಿ, ಬಯೋಮೆಟ್ರಿಕ್ ನವೀಕರಣ ಮತ್ತು ಆಧಾರ್ ಕಾರ್ಡ್ ತಿದ್ದುಪಡಿ ಕಾರ್ಯಕ್ಕಾಗಿ ಶಾಲೆಯಲ್ಲಿ ಆಧಾರ್ ಶಿಬಿರಗಳನ್ನು ಆಯೋಜಿಸಲು ಸೂಚಿಸಲಾಗಿದೆ. ಆದರೆ, ಅನೇಕ ಜಿಲ್ಲೆಗಳಲ್ಲಿ ಆಧಾರ್ ಮೌಲ್ಯೀಕರಣ ಕಾರ್ಯ ಪರಿಣಾಮ ಕಾರಿಯಾಗಿ ಅನುಷ್ಠಾನವಾಗಿಲ್ಲ. ಆದ್ದರಿಂದ ಆಧಾರ್ ಮೌಲ್ಯೀಕರಣ ಕಡಿಮೆ ಇರುವ ಶಾಲೆಗಳನ್ನು ಗುರುತಿಸಿ, ಶಾಲಾ ವ್ಯಾಪ್ತಿಯಲ್ಲಿ, ಕಡ್ಡಾಯವಾಗಿ ಆಧಾರ್ ಶಿಬಿರಗಳನ್ನು ಹಮ್ಮಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳತಕ್ಕದ್ದು ಎಂದು ಸಂಬಂಧಿಸಿದ ಅಧಿಕಾರಿಗೆ ಸೂಚಿಸಿದ್ದಾರೆ.

> **ಕಳೆದ 2 ವರ್ಷಗಳಿಂದ ಎಸ್‌ಎಟಿಎಸ್ ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಆಧಾರ್ ಮೌಲ್ಯೀಕರಣವನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲಿ ಒಟ್ಟಾರೆ 1.04 ಕೋಟಿ ವಿದ್ಯಾರ್ಥಿಗಳಲ್ಲಿ 87 ಲಕ್ಷ ಮಂದಿ ಆಧಾರ್ ಮೌಲ್ಯೀಕರಣವಾಗಿದೆ. ಇನ್ನು 17 ಲಕ್ಷ ಮಂದಿ ಆಧಾರ್ ಮೌಲ್ಯೀಕರಣ ಇದುವರೆಗೂ ತಂತ್ರಾಂಶದಲ್ಲಿ ಮೌಲ್ಯೀಕರಿಸಲಾಗಿಲ್ಲ.** – ಶಾಲಾ ಶಿಕ್ಷಣ ಇಲಾಖೆ

ದಾಖಲಾದ ವಿದ್ಯಾರ್ಥಿಯು ಮೃತ, ಶಾಲೆಯಿಂದ ಹೊರಗುಳಿದ ಇಲ್ಲವೇ ರಾಜ್ಯ ಮತ್ತು ವಿದೇಶಗಳಿಗೆ ತೆರಳಿ ವಿದ್ಯಾಭ್ಯಾಸ ಮಾಡುತ್ತಿರುವ ಸಂದರ್ಭಗಳಲ್ಲಿ ಸಂಬಂಧಿತ ದಾಖಲಾತಿ ಪೆಂಡೆನ್ಸಿಗಳನ್ನು ಪೂರ್ಣಗೊಳಿಸಲು ಸೂಚಿಸಿದೆ. ಅದೇ ರೀತಿ ಶಾಲಾ ಹಂತದಲ್ಲಿ ಎಸ್‌ಎಟಿಎಸ್ ತಂತ್ರಾಂಶದಲ್ಲಿ ದ್ವಿ ದಾಖಲಾತಿ ಕಂಡು ಬಂದ ಸಂದರ್ಭಗಳಲ್ಲಿ ದ್ವಿ ದಾಖಲಾತಿಯಾದ ವಿದ್ಯಾರ್ಥಿಯ ಮಾಹಿತಿಯನ್ನು ತಂತ್ರಾಂಶದಿಂದ ತೆಗೆಯುವ ಅವಕಾಶವಿದೆ. ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡು ದ್ವಿ ದಾಖಲಾತಿ ಇಲ್ಲದಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಆದ್ಯಾಗೂ ಶಾಲೆಯಲ್ಲಿ ನಕಲಿ ದಾಖಲಾತಿ ಹಾಗೂ ದ್ವಿ ದಾಖಲಾತಿ ಇರುವುದು ಕಂಡು ಬಂದಲ್ಲಿ ಇದರಿಂದ ಆಗುವ ಆರ್ಥಿಕ ನಷ್ಟಕ್ಕೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರನ್ನಾಗಿ ಮಾಡಿ, ಅಂತಹ ಮುಖ್ಯಶಿಕ್ಷಕರು, ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಆಯುಕ್ತರು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿದ್ಯುತ್ ಸುರಕ್ಷತಾ ಜಾಗೃತಿ ಕಾರ್ಯಕ್ರಮ



ವಿದ್ಯುತ್ ಸುರಕ್ಷತಾ ಜಾಗೃತಿ ಕಾರ್ಯಕ್ರಮ ನಡೆಯಿತು.

ಮೈಸೂರು, ಜು.2(ಎಂಕೆ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ ಇಂಧನ ಇಲಾಖೆಯ ವಿದ್ಯುತ್ ಪರಿವೀಕ್ಷಣಾಲಯದ ವತಿಯಿಂದ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ–2025ರ ಅಂಗವಾಗಿ ವಿದ್ಯುತ್ ಸುರಕ್ಷತಾ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು ಮಾತನಾಡಿ, ವಿದ್ಯುತ್ ಜಾಲ ಮತ್ತು ಪರಿವರ್ತಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದರಿಂದ ವಿದ್ಯುತ್ ಅಪಘಾತಗಳನ್ನು ಕಡಿಮೆಗೊಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ಚೆಸ್ಕಾಂ ಅಧಿಕಾರಿ– ಸಿಬ್ಬಂದಿಗಳು ಕ್ರಮವಹಿಸಬೇಕು ಎಂದು ಸಲಹೆ ನೀಡಿದರು.

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕ ಹೆಚ್.ಎಸ್.ವೆಂಕಟೇಶ್ ಮಾತನಾಡಿ, ವಿದ್ಯುತ್‌ನಿಂದ ಯಾವುದೇ ಮನುಷ್ಯ ಮತ್ತು ಪ್ರಾಣಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು ಅತೀ ಮುಖ್ಯವಾಗಿದೆ. ಆದ್ದರಿಂದ ಎಲ್‌ಟಿ ವಿದ್ಯುತ್ ಮಾರ್ಗಗಳನ್ನು ಕಡಿಮೆಗೊಳಿಸಿ ಹೆಚ್‌ಟಿ ವಿದ್ಯುತ್ ಮಾರ್ಗಗಳನ್ನು ಹೆಚ್ಚಿಸುವುದರಿಂದ ವಿದ್ಯುತ್ ಅಪಘಾತಗಳನ್ನು ಕಡಿಮೆಗೊಳಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಮುಖ್ಯ ವಿದ್ಯುತ್ ಪರಿವೀಕ್ಷಕರು ಟಿ.ಎನ್.ಅಪ್ಪಚ್ಚು, ಚೆಸ್ಕಾಂನ ಮುಖ್ಯ ಇಂಜಿನಿಯರ್ ಮೃತ್ಯುಂಜಯ, ಅಧೀಕ್ಷಕ ಇಂಜಿನಿಯರ್ ಸುನೀಲ್, ಕರ್ನಾಟಕ ರಾಜ್ಯ ಪರವಾನಗಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ(ಕೆಎಸ್‌ಎಲ್‌ಇಸಿಎ)ದ ಅಧ್ಯಕ್ಷ ಸಿ.ರಮೇಶ್, ಉಪ ವಿದ್ಯುತ್ ಪರಿವೀಕ್ಷಕ ರವೀಶ್, ಅಲ್ತಾಫ್ ಹುಸೇನ್ ಜಕಾರ್ತಿ, ವಿದ್ಯುತ್ ಪರಿವೀಕ್ಷಕರಾದ ಅಮಿತ್, ರಾಜು, ವೀಣಾ, ಅರ್ಚನಾ, ನೇತ್ರಾವತಿ, ಉಷಾ, ಸಿದ್ದರಾಜು, ಸಹಾಯಕ ವಿದ್ಯುತ್ ಪರಿವೀಕ್ಷಕರಾದ ಆರ್ಶಿಯ ಅಂಜು, ಹರ್ಷಿತ ಮತ್ತಿತರರಿದ್ದರು.

ದಸರಾ ಗಜಪಡೆ ಹೆಣ್ಣಾನೆಗಳಿಗೆ ಪ್ರೆಗ್ನೆನ್ಸಿ ಟೆಸ್ಟ್

▸ ಮೂತ್ರ, ರಕ್ತ ಪರೀಕ್ಷೆಗೆ ಒಳಗಾಗುವ ಹೆಣ್ಣಾನೆಗಳು ▸ ದಾಂಡೇಲಿ ಪಣಸೋಲಿ ಕ್ಯಾಂಪ್‌ನಲ್ಲಿನ ಹೆಣ್ಣಾನೆಗಳ ಪರಿಶೀಲನೆಗೆ ಕ್ರಮ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಜು.2– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಡೆ. ಆನೆಗಳ ಆಯ್ಕೆಗಾಗಿ ಅರಣ್ಯ ಇಲಾಖೆ ಕಸರತ್ತು ನಡೆಸುತ್ತಿದೆ. ಅದರಲ್ಲೂ ಹೆಣ್ಣಾನೆಗಳ ಆಯ್ಕೆ ಪ್ರಕ್ರಿಯೆ ಸೂಕ್ಷ್ಮ ವಿಚಾರವಾದ್ದರಿಂದ ಇದೇ ಮೊದಲ ಬಾರಿಗೆ ಅವುಗಳಿಗೆ ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಲು ನಿರ್ಧರಿಸಿದೆ.



ದಶಕದ ಹಿಂದೆ ವಿಜಯ ಹಾಗೂ ನಾಲ್ಕು ವರ್ಷದ ಹಿಂದೆ ಲಕ್ಷ್ಮೀ ಆನೆಯನ್ನು ದಸರಾಗಾಗಿ ಅರಮನೆಗೆ ಕರೆತರಲಾಗಿತ್ತು. ವಿಜಯ ಆನೆ ಗರ್ಭಿಣಿ ಎಂದು ಗೊತ್ತಾಗುತ್ತಿದ್ದಂತೆ ಅರಮನೆಯಿಂದ ಅದಕ್ಕೆ ಬೀಳ್ಕೊಟ್ಟು ಕ್ಯಾಂಪ್‌ಗೆ ವಾಪಸ್ ಕಳುಹಿಸಲಾಗಿತ್ತು. ಆದರೆ, ಗರ್ಭಿಣಿಯಾಗಿರುವ ಸುಳಿವೆ ಇಲ್ಲದಂತೆ ಇದ್ದ ಲಕ್ಷ್ಮೀ ಗಂಡು ಮರಿಗೆ ಜನ್ಮ ನೀಡಿತ್ತು. ಈ ಎಲ್ಲಾ ಕಾರಣದಿಂದ ಹೆಣ್ಣಾನೆಗಳ ಮೂತ್ರ ಹಾಗೂ ರಕ್ತ ಪರೀಕ್ಷೆ ಮಾಡಿಸಲು, ಅವುಗಳು ಗರ್ಭಿಣಿಯಾಗಿರುವ ಬಗ್ಗೆ ಪರಿಶೀಲಿಸಲಾಗುತ್ತಿತ್ತು. ಆದರೆ, ಈ ಬಾರಿ ಮತ್ತೊಂದು ಪರೀಕ್ಷೆ ನಡೆಸಲು ಅರಣ್ಯ ಇಲಾಖೆ ನಿರ್ಧರಿಸಿದೆ.

ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್: ಇದೇ ಮೊದಲ ಬಾರಿಗೆ ದಸರಾಗೆ ಆಯ್ಕೆಯಾಗಿರುವ ಹೆಣ್ಣಾನೆಗಳಿಗೆ ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಲು ಉದ್ದೇಶಿಸಲಾಗಿದೆ. ಗಜಪಡೆಯಲ್ಲಿ ಸ್ಥಾನ ನೀಡಲು ಗುರುತಿಸಿರುವ ಹೆಣ್ಣಾನೆಗಳ ಲದ್ದಿಯನ್ನು ಸಂಗ್ರಹಿಸಿ, ಅದನ್ನು ಒಣಗಿಸಿ ಪುಡಿ ಮಾಡಿ ಪರೀಕ್ಷೆಗೆ ಒಳಪಡಿಸಿದಾಗ ಹೆಣ್ಣಾನೆಗಳ ಗರ್ಭಾವಸ್ಥೆ ಬಗ್ಗೆ ನಿಖರ ಮಾಹಿತಿ ಲಭ್ಯವಾಗಲಿದೆ. ಈ ಪರೀಕ್ಷೆಯಲ್ಲಿ ಶೇ.1ಕ್ಕಿಂತ ಹೆಚ್ಚಿನ ಪ್ರಮಾಣದ ವರದಿ ದಾಖಲಾದರೆ ಗರ್ಭಿಣಿ ಎಂದರ್ಥ. ಶೇ.1ಕ್ಕಿಂತ ಕಡಿಮೆ ಪ್ರಮಾಣದ ವರದಿ ಬಂದರೆ ಯಾವುದೇ ತೊಂದರೆ ಇಲ್ಲದೆ ದಸರಾಗೆ ಕರೆತರಬಹುದು ಎಂದರ್ಥ. ಶೂನ್ಯ ಪ್ರಮಾಣದ ವರದಿ ದಾಖಲಾದರೆ ಅವು ಗರ್ಭಿಣಿಯಾಗಿಲ್ಲ ಎಂದರ್ಥ. ಈಗಾಗಲೇ ಪ್ರಯೋಗಾಲಯಕ್ಕೆ ಹೆಣ್ಣಾನೆಗಳ ಲದ್ದಿ ಸ್ಯಾಂಪಲ್ ಕಳುಹಿಸಲಾಗಿದೆ. ಈ ವರದಿ ಬರಲು ಎರಡು ವಾರ ಬೇಕಾಗುತ್ತದೆ. ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್ ಪರಿಪಕ್ವವಾಗಿದ್ದು, ಅರಣ್ಯ ಇಲಾಖೆ ಈ ವರದಿ ಬರುವಿಕೆಗಾಗಿ ಕಾಯುತ್ತಿದೆ.



ಆನೆಗಳ ಕ್ಯಾಂಪ್‌ಗೆ ತೆರಳಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಆನೆಗಳನ್ನು ಪರಿಶೀಲಿಸುತ್ತಿರುವುದು

ಪಣಸೋಲಿ ಕ್ಯಾಂಪ್‌ಗೆ ಭೇಟಿ: ಈ ಬಾರಿ ದಸರಾ ಮಹೋತ್ಸವಕ್ಕೆ ಕರೆತರಲು ಐದು ಹೆಣ್ಣಾನೆಗಳನ್ನು ಪರಿಶೀಲಿಸಲಾಗಿದೆ. ದುಬಾರೆಯಿಂದ ಹೇಮಾವತಿ, ಭೀಮನಕಟ್ಟೆ ಕ್ಯಾಂಪ್‌ನಿಂದ ರೂಪ, ಬಳ್ಳೆ ಕ್ಯಾಂಪ್‌ನಿಂದ ದೊಡ್ಡಹರವೆ ಲಕ್ಷ್ಮಿ, ಬಂಡೀಪುರ ಹಳೆ ಕ್ಯಾಂಪಸ್‌ನಿಂದ ಹಿರಣ್ಯ, ಲಕ್ಷ್ಮಿ ಆನೆಯ ಲದ್ದಿ ಪರೀಕ್ಷೆಗೆ ಕಳುಹಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಇದೇ ಮೊದಲ ಬಾರಿಗೆ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಪಣಸೋಲಿ ಆನೆ ಶಿಬಿರದಲ್ಲಿರುವ ಹೆಣ್ಣಾನೆಗಳನ್ನು ಪರಿಶೀಲಿಸಲು ನಿರ್ಧರಿಸಲಾಗಿದೆ. ಆ ಕ್ಯಾಂಪ್‌ನಲ್ಲಿ ಚಾಮುಂಡೇಶ್ವರಿ ಆನೆ ಸೇರಿದಂತೆ ಮತ್ತೊಂದು ಆನೆ ಪರಿಶೀಲಿಸಲು ಅರಣ್ಯಾಧಿಕಾರಿಗಳ ತಂಡ ಶೀಘ್ರವೇ ದಾಂಡೇಲಿಗೆ ತೆರಳಲಿದೆ.

ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್

ದಸರಾ ಗಜಪಡೆಯ ಹೆಣ್ಣಾನೆಗಳಿಗೆ ಪ್ರತಿವರ್ಷದಂತೆ ಈ ಬಾರಿ ಮೂತ್ರ ಹಾಗೂ ರಕ್ತ ಪರೀಕ್ಷೆ ಮಾಡಿಸಲಾಗುತ್ತದೆ. ಇದರೊಂದಿಗೆ ಇದೇ ಮೊದಲ ಬಾರಿಗೆ ಫೀಟಲ್ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಲಾಗುತ್ತಿದೆ. ಈ ಪರೀಕ್ಷೆ ನಿಖರವಾಗಿದ್ದು, ಹೆಣ್ಣಾನೆಗಳು ಗರ್ಭಿಣಿಯಾಗಿರುವ ಖಚಿತ ಮಾಹಿತಿ ಲಭ್ಯವಾಗುತ್ತದೆ. ಈಗಾಗಲೇ ಸ್ಯಾಂಪಲ್ ಕಳುಹಿಸಲಾಗಿದ್ದು, ವರದಿ ಬರಲು ಎರಡು ವಾರ ಬೇಕಾಗುತ್ತದೆ. ಆ ನಂತರ ಅಂತಿಮ ಪಟ್ಟಿ ತಯಾರಾಗುತ್ತದೆ.



-ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಸಾಲದಲ್ಲಿ ವಂಚನೆ; ಅನಿಲ್ ಅಂಬಾನಿ ಹೆಸರು ಆರ್‌ಬಿಐಗೆ ಕಳುಹಿಸಲು ಸಿದ್ಧತೆ

ನವದೆಹಲಿ: ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯು ಪಡೆದಿರುವ ಸಾಲವನ್ನು 'ವಂಚನೆ' ಎಂದು ವರ್ಗೀಕರಿಸಲು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತೀರ್ಮಾನಿಸಿದೆ. ಅಲ್ಲದೆ, ಕಂಪನಿಯ ನಿರ್ದೇಶಕರಾಗಿದ್ದ ಅನಿಲ್ ಅಂಬಾನಿ ಅವರ ಹೆಸರನ್ನು ಆರ್‌ಬಿಐಗೆ ಕಳುಹಿಸಲು ಕೂಡ ಬ್ಯಾಂಕ್ ನಿರ್ಧರಿಸಿದೆ.

ರಿಲಯನ್ಸ್ ಕಮ್ಯುನಿಕೇಷನ್ಸ್ ಲಿಮಿಟೆಡ್ ಕಂಪನಿಗೆ ಸಾಲ ನೀಡಿರುವ ಇತರ ಬ್ಯಾಂಕ್‌ಗಳೂ ಇದೇ ಹಾದಿ ತುಳಿಯುವ ಸಾಧ್ಯತೆ ಇದೆ.

ಸಾಲದ ಖಾತೆಯನ್ನು 'ವಂಚನೆ' ಎಂದು ವರ್ಗೀಕರಿಸುವುದಾಗಿ ಎಸ್‌ಬಿಐ ಮಾಹಿತಿ ನೀಡಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಆರ್‌ಬಿಐ ಮಾರ್ಗಸೂಚಿ ಪ್ರಕಾರ, ಖಾತೆಯೊಂದನ್ನು 'ವಂಚನೆ' ಎಂದು ವರ್ಗೀಕರಿಸಿದ ನಂತರ ಬ್ಯಾಂಕ್ ಅದನ್ನು ಆರ್‌ಬಿಐಗೆ 21 ದಿನಗಳಲ್ಲಿ ವರದಿ ಮಾಡಬೇಕು. ಅಲ್ಲದೆ, ಪ್ರಕರಣವನ್ನು ಸಿಬಿಐ ಅಥವಾ ಪೊಲೀಸರಿಗೆ ವರದಿ ಮಾಡಬೇಕು. ಷೇರುಪೇಟೆಗೆ ನೀಡಿರುವ ಮಾಹಿತಿ ಪ್ರಕಾರ ರಿಲಯನ್ಸ್ ಕಮ್ಯುನಿಕೇಷನ್ಸ್ ಮತ್ತು ಅದರ ಅಧೀನ ಸಂಸ್ಥೆಗಳು ಬ್ಯಾಂಕುಗಳಿಂದ ಒಟ್ಟು 31,580 ಕೋಟಿ ಸಾಲ ಪಡೆದಿವೆ.

ಸಾಲದ ಮೊತ್ತವನ್ನು ಭಿನ್ನ ಉದ್ದೇಶಗಳಿಗೆ ಬಳಕೆ ಮಾಡಿರುವುದು ಕಂಡುಬಂದಿದೆ, ಸಮೂಹದ ಬೇರೆ ಬೇರೆ ಸಂಸ್ಥೆಗಳಲ್ಲಿ ಹಣದ ಹರಿವು ಕಂಡುಬಂದಿದೆ ಎಂದು ಕಂಪನಿಗೆ ಕಳುಹಿಸಿರುವ ಪತ್ರದಲ್ಲಿ ಎಸ್‌ಬಿಐ ಹೇಳಿದೆ.

ಸಾಲವನ್ನು ಹಿಂದಿರುಗಿಸದೆ ಇರುವವರು ಹಾಗೂ ವಂಚನೆ ಎಸಗಿರುವವರು ಬ್ಯಾಂಕ್‌ಗಳಿಂದ, ಸರ್ಕಾರಿ ಸ್ವಾಮ್ಯದ ಬ್ಯಾಂಕೇತರ ಹಣಕಾಸು ಕಂಪನಿಗಳಿಂದ (ಎನ್‌ಬಿಎಫ್‌ಸಿ), ಅಭಿವೃದ್ಧಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದನ್ನು ಐದು ವರ್ಷಗಳವರೆಗೆ ನಿಷೇಧಿಸಲಾಗುತ್ತದೆ. ವಂಚನೆ ಎಸಗಿದ ಮೊತ್ತವನ್ನು ಪೂರ್ತಿಯಾಗಿ ಪಾವತಿಸಿ ಮಾಡಿದ ನಂತರ ಐದು ವರ್ಷಗಳವರೆಗೆ ಇದು ಜಾರಿಯಲ್ಲಿ ಇರುತ್ತದೆ.

ಈ ಅವಧಿ ಪೂರ್ಣಗೊಂಡ ನಂತರ, ವ್ಯಕ್ತಿಗೆ ಸಾಲ ನೀಡಬೇಕೇ ಬೇಡವೇ ಎಂಬ ಬಗ್ಗೆ ಹಣಕಾಸು ಸಂಸ್ಥೆಗಳು ತೀರ್ಮಾನ ತೆಗೆದುಕೊಳ್ಳಬಹುದು.

ವಂಚನೆ ಗುರುತಿಸುವ ಸಮಿತಿಯ ವರದಿ ಪ್ರಕಾರ ಒಟ್ಟು ಸಾಲದ ಮೊತ್ತದಲ್ಲಿ 3,667 ಕೋಟಿಯನ್ನು (ಶೇ 44ರಷ್ಟನ್ನು) ಸಾಲ ಮರುಪಾವತಿಗೆ ಹಾಗೂ ಇತರ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. 12,692 ಕೋಟಿಯನ್ನು (ಶೇ 41ರಷ್ಟು) ಸಂಬಂಧಿತ ಸಂಸ್ಥೆ/ವ್ಯಕ್ತಿಗಳಿಗೆ ಪಾವತಿ ಮಾಡಲು ಬಳಸಲಾಗಿದೆ.

6,265 ಕೋಟಿಯನ್ನು ಇತರ ಬ್ಯಾಂಕ್‌ಗಳ ಸಾಲ ತೀರಿಸಲು ಬಳಸಲಾಗಿದೆ. 5,501 ಕೋಟಿಯನ್ನು ಸಂಬಂಧಪಟ್ಟ ವ್ಯಕ್ತಿ, ಸಂಸ್ಥೆಗಳಿಗೆ ಪಾವತಿ ಮಾಡಲಾಗಿದೆ ಮತ್ತು ಈ ಪಾವತಿಗಳು ಸಾಲವನ್ನು ಪಡೆದ ಉದ್ದೇಶಕ್ಕೆ ಅನುಗುಣವಾಗಿ ಇಲ್ಲ.

ದೇನಾ ಬ್ಯಾಂಕ್‌ನಿಂದ ಪಡೆದ 250 ಕೋಟಿಯನ್ನು ನಿಗದಿತ ಉದ್ದೇಶಕ್ಕೆ ಬಳಕೆ ಮಾಡಿಲ್ಲ. ಬಂಡವಾಳ ವೆಚ್ಚಗಳಿಗಾಗಿ ಐಐಎಫ್‌ಸಿಎಲ್‌ನಿಂದ 248 ಕೋಟಿ ಸಾಲ ಪಡೆಯಲಾಯಿತು. 'ದೇನಾ ಬ್ಯಾಂಕ್ ಹಾಗೂ ಐಐಎಫ್‌ಸಿಎಲ್‌ನಿಂದ ಪಡೆದ ಸಾಲವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡಂತೆ, ವಿಶ್ವಾಸಕ್ಕೆ ಚ್ಯುತಿ ತಂದಂತೆ ಕಾಣುತ್ತಿದೆ' ಎಂದು ವರದಿಯು ಹೇಳಿದೆ.

ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯು ದಿವಾಳಿ ಸಂಹಿತೆಯ ಅಡಿಯಲ್ಲಿ ಕಾರ್ಪೊರೇಟ್ ದಿವಾಳಿ ಪರಿಹಾರ ಪ್ರಕ್ರಿಯೆ ಎದುರಿಸುತ್ತಿದೆ. 2019ರ ಜೂನ್ 28ರಿಂದ ಕಂಪನಿಯ ವ್ಯವಹಾರಗಳನ್ನು ರಾಷ್ಟ್ರೀಯ ಕಂಪನಿ ನ್ಯಾಯಮಂಡಳಿ ನೇಮಕ ಮಾಡಿರುವ ವೃತ್ತಿಪರ ನೋಡಿಕೊಳ್ಳುತ್ತಿದ್ದಾರೆ.

ಸಹಜ ನ್ಯಾಯದ ಪಾಲನೆ ಆಗಿಲ್ಲ: ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯ ಸಾಲದ ಖಾತೆಯನ್ನು 'ವಂಚನೆ' ಎಂದು ವರ್ಗೀಕರಿಸುವುದನ್ನು ವಿರೋಧಿಸಿ ಅನಿಲ್ ಅಂಬಾನಿ ಪರ ವಕೀಲರು ಎಸ್‌ಬಿಐಗೆ ಪತ್ರ ಬರೆದಿದ್ದಾರೆ. ಎಸ್‌ಬಿಐ ಕ್ರಮವು ಆರ್‌ಬಿಐ ಮಾರ್ಗಸೂಚಿಗಳಿಗೆ ಹಾಗೂ ನ್ಯಾಯಾಲಯದ ನಿರ್ದೇಶನಗಳಿಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ. ಎಸ್‌ಬಿಐ ಈ ನಿರ್ಧಾರವನ್ನು ಸಹಜ ನ್ಯಾಯದ ತತ್ವವನ್ನು ಪಾಲಿಸದೆಯೇ ಕೈಗೊಂಡಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಎಸ್‌ಬಿಐ ನೀಡಿದ್ದ ಶೋಕಾಸ್ ನೋಟಿಸ್ ಅಮಾನ್ಯ ಎಂದು ಅನಿಲ್ ಅಂಬಾನಿ ಅವರು ಹೇಳಿರುವುದಕ್ಕೆ ಬ್ಯಾಂಕಿನ ಕಡೆಯಿಂದ ಪ್ರತಿಕ್ರಿಯೆ ಬಂದಿಲ್ಲ. ಈಗಿನ ತೀರ್ಮಾನಕ್ಕೆ ಬರಲು ಆಧಾರ ಏನು ಎಂಬುದನ್ನು ತಿಳಿಸಿಲ್ಲ ಎಂದು ವಕೀಲರು ಹೇಳಿದ್ದಾರೆ.

ಕಂಪನಿಯ ಇತರ ಕಾರ್ಯನಿರ್ವಾಹಕೇತರ ನಿರ್ದೇಶಕರಿಗೆ ನೀಡಿದ್ದ ನೋಟಿಸ್‌ಗಳನ್ನು ಎಸ್‌ಬಿಐ ಹಿಂಪಡೆದಿದೆ. ಅನಿಲ್ ಅಂಬಾನಿ ಅವರೂ ಕಾರ್ಯನಿರ್ವಾಹಕೇತರ ನಿರ್ದೇಶಕ ಆಗಿದ್ದರು ಕಂಪನಿಯ ನಿತ್ಯದ ವಹಿವಾಟುಗಳಲ್ಲಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಅವರ ವಿಚಾರದಲ್ಲಿ ಈ ಬಗೆಯಲ್ಲಿ ವರ್ಗೀಕರಣ ಮಾಡಿರುವುದು ತಪ್ಪು ಎಂದು ಹೇಳಿದ್ದಾರೆ.

ನಾಡಪ್ರಭು ಕೆಂಪೇಗೌಡ ಜಯಂತಿ



ಮೈಸೂರಿನ ಸರ್ಕಾರಿ ಮುದ್ರಣಾಲಯದಲ್ಲಿ ಬುಧವಾರ ನಾಡಪ್ರಭು ಕೆಂಪೇಗೌಡರ 516 ನೇ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವೃತ್ತಿಪರ ಕೋರ್ಸ್‌ಗಳ ಕೌನ್ಸೆಲಿಂಗ್ ಆಪ್ಷನ್ ಎಂಟ್ರಿ ಶುಲ್ಕ ಹೆಚ್ಚಳಕ್ಕೆ ವಿರೋಧ

ಮೈಸೂರು, ಜು.2(ಎಸ್‌ಪಿಎನ್)– ವೃತ್ತಿಪರ ಕೋರ್ಸ್‌ಗಳ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಆಪ್ಷನ್ ಎಂಟ್ರಿ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ (ರೋಸ್ಟರ್ ಲೆಕ್ಕಿಸದೇ) 750 ರೂ.ಶುಲ್ಕ ವಿಧಿಸಿರುವುದನ್ನು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ತೀವ್ರವಾಗಿ ವಿರೋಧಿಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಇಂಜಿನಿಯರಿಂಗ್, ನರ್ಸಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಆಪ್ಷನ್ ಎಂಟ್ರಿ ಮಾಡಲು ಎಲ್ಲಾ ವಿದ್ಯಾರ್ಥಿಗಳಿಗೆ ಅವರ ವರ್ಗವನ್ನು ಲೆಕ್ಕಿಸದೆಯೇ 750 ರೂ. ಶುಲ್ಕವನ್ನು ವಿಧಿಸಿದೆ. ಇದು ಅನಿರೀಕ್ಷಿತ ಮತ್ತು ನ್ಯಾಯಸಮ್ಮತವಲ್ಲದ ನಿರ್ಧಾರವಾಗಿದೆ ಎಂದು ಆರೋಪಿಸಿದೆ.

ಪ್ರವೇಶ ಪ್ರಕ್ರಿಯೆಯ ಆರಂಭಿಕ ಹಂತಗಳಲ್ಲೇ ವಿದ್ಯಾರ್ಥಿಗಳು ಪರೀಕ್ಷಾ ಮತ್ತು ನೋಂದಣಿ ಶುಲ್ಕವನ್ನು ಪಾವತಿಸಿದ್ದಾರೆ. ಆಪ್ಷನ್ ಎಂಟ್ರಿ ಹಂತದಲ್ಲಿ ಹೆಚ್ಚುವರಿ ರೂ. 750 ವಿಧಿಸಿರುವುದು ಕೇವಲ ಹೇರಿಕೆ ಮಾತ್ರವಲ್ಲದೇ ಕೆಇಎಯ ಹಗಲು ದರೋಡೆ ಎಂದೇ ಭಾವಿಸಬಹುದಾಗಿದೆ.

4 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಅಂದಾಜು 300 ಕೋಟಿಗಿಂತ ಹೆಚ್ಚು ಆದಾಯ ಬರಲಿದೆ. ಈ ಶುಲ್ಕ ಹೇರಿಕೆಯು ನಿಜವಾದ ಆಡಳಿತಾತ್ಮಕ ಅಗತ್ಯವನ್ನು ಪೂರೈಸಲು ಉದ್ದೇಶಿಸಲಾಗಿದೆಯೋ, ಅಥವಾ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಂದ ಹಣವನ್ನು ಸುಲಿಗೆ ಮಾಡುವ ತಂತ್ರವೊ ಎಂದು ಪ್ರಶ್ನಿಸಿದೆ.

ಕೆಇಎಯು ಒಂದು ರಾಜ್ಯ ಸರ್ಕಾರಿ ಸಂಸ್ಥೆಯಾಗಿ, ಶಿಕ್ಷಣ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೇ ಹೊರತು, ಅದರಿಂದ ಲಾಭ ಗಳಿಸಬಾರದು. ಈಗಾಗಲೇ ಆರ್ಥಿಕವಾಗಿ ದುರ್ಬಲವಾಗಿರುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವ ಸಂದರ್ಭದಲ್ಲಿ ಇಂತಹ ನೀತಿಗಳು ಯುವ ಸಮೂಹ ಮೇಲಿನ ಆರ್ಥಿಕ ಒತ್ತಡವನ್ನು ಹೆಚ್ಚಿಸುತ್ತವೆ.

ಹಾಗಾಗಿ ರಾಜ್ಯ ಸರ್ಕಾರ ಆಪ್ಷನ್ ಎಂಟ್ರಿ ಶುಲ್ಕ 750 ರೂ.ಗಳನ್ನು ತಕ್ಷಣವೇ ಹಿಂಪಡೆಯಬೇಕೆಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (AIDSO), ಮೈಸೂರು ಜಿಲ್ಲಾ ಸಮಿತಿಯ ಜಿಲ್ಲಾ ಕಾರ್ಯದರ್ಶಿ ನಿತಿನ್ ಆಗ್ರಹಿಸಿದ್ದು, ಈ ಅನ್ಯಾಯದ ಹೇರಿಕೆಯ ವಿರುದ್ಧ ಎಲ್ಲಾ ವಿದ್ಯಾರ್ಥಿಗಳು, ಪೋಷಕರು ಮತ್ತು ಜನರ ಸಾಮಾನ್ಯರು ಒಗ್ಗಟ್ಟಾಗಿ ಹೋರಾಡಬೇಕೆಂದು ಮನವಿ ಮಾಡಿದ್ದಾರೆ.

ಆಯತಪ್ಪಿದರೆ ಗುಂಡಿ ಪಾಲು! ; ಇದು ಪಾಲಿಕೆ ತಂದಿಟ್ಟ ಪಜೀತಿ

ಮೈಸೂರು ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿ ದುಸ್ಥಿತಿ



ಕುವೆಂಪುನಗರ ಅನಿಕೇತನ ರಸ್ತೆಯಲ್ಲಿ ಗುಂಡಿಗಳ ನಡುವೆ ತ್ರಾಸದಿಂದ ಸಾಗುತ್ತಿರುವ ದ್ವಿಚಕ್ರ ವಾಹನ ಸವಾರರು.

ಮೈಸೂರು,ಜು.2(ಪಿಎಂ)– ಮೈಸೂರಿನ ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿ ಪೂರ್ಣಚಂದ್ರ ತೇಜಸ್ವಿ ವೃತ್ತದಿಂದ ಗಗನಚುಂಬಿ ಜೋಡಿ ರಸ್ತೆ ಜಂಕ್ಷನ್‌ವರೆಗೆ ಗುಂಡಿಗಳದ್ದೇ ಕಾರುಬಾರು. ಇವುಗಳ ನಡುವೆ ವಾಹನ ಸವಾರರು ಅತ್ಯಂತ ಜಾಗರೂಕತೆಯಿಂದ ಸಾಗಬೇಕಿದ್ದು, ಆಯತಪ್ಪಿದರೆ ಆಪತ್ತು ಇಲ್ಲಿ ತಪ್ಪಿದ್ದಲ್ಲ.

ಕುವೆಂಪುನಗರದ ಆದಿಚುಂಚನಗಿರಿ ರಸ್ತೆ ಹಾಗೂ ಅನಿಕೇತನ ರಸ್ತೆಯ ಜಂಕ್ಷನ್‌ನ ಪೂರ್ಣಚಂದ್ರ ತೇಜಸ್ವಿ ವೃತ್ತದಿಂದ ಗುಂಡಿಗಳ ಸರಣಿ ಆರಂಭಗೊಳ್ಳಲಿದೆ. ಈ ಜಂಕ್ಷನ್‌ನಿಂದ ಅನಿಕೇತನ ರಸ್ತೆಯಲ್ಲಿ ಗಗನಚುಂಬಿ ಜೋಡಿ ರಸ್ತೆಯ ಜಂಕ್ಷನ್‌ವರೆಗೆ ನಿರಂತರವಾಗಿ ಗುಂಡಿ ನಿರ್ಮಾಣಗೊಂಡಿದೆ. ಹಾಗೆ ನೋಡಿದರೆ ಈ ಹಳ್ಳಕೊಳ್ಳಗಳು ತಂತಾನೆ ನಿರ್ಮಾಣಗೊಂಡಿಲ್ಲ. ವಾಹನಗಳ ಒತ್ತಡಕ್ಕಾಗಲಿ, ಪ್ರಾಕೃತಿಕ ಹಿನ್ನೆಲೆಯಲ್ಲಿ ಆಗಲಿ ಇಂತಹ ಗುಂಡಿಗಳು ಇಲ್ಲಿ ಸೃಷ್ಟಿಯಾಗಿಲ್ಲ. ಬದಲಿಗೆ ಕೆಲ ತಿಂಗಳ ಹಿಂದೆ ಯುಜಿಡಿ ಪೈಪ್ ಲೈನ್ ಕಾಮಗಾರಿ ಮಾಡಿದ ಬಳಿಕ ಗುಂಡಿಗಳು ಇಲ್ಲಿ ನಿರ್ಮಾಣವಾಗಿವೆ ಎಂಬುದು ಗಮನಾರ್ಹ. ಕಾಮಗಾರಿ ಮುಗಿದ ಬಳಿಕ ಸಮರ್ಪಕ ರೀತಿಯಲ್ಲಿ ಮುಚ್ಚದೇ, ಅರೆಬರೆ ಮುಚ್ಚಿ ಕೈತೊಳೆದುಕೊಂಡಿದ್ದು, ಇದರ ದುಷ್ಪರಿಣಾಮ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ.



ಅಪಾಯ ಗ್ಯಾರಂಟಿ: ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಜಲ್ಲಿ ಕಲ್ಲುಗಳು, ಮಳೆ ನೀರು ತುಂಬಿರುವ ಗುಂಡಿಗಳ ನಡುವೆ ವಾಹನ ಚಾಲನೆ ಸವಾಲಾಗಿ ಪರಿಣಮಿಸಿದ್ದು, ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದಾಗಿದೆ. ಪೂರ್ಣಚಂದ್ರ ತೇಜಸ್ವಿ ವೃತ್ತದಿಂದ ಗಗನಚುಂಬಿ ಜೋಡಿ ರಸ್ತೆ ದಿಕ್ಕಿನತ್ತ ಸಾಗುವವರಂತೂ ಜಾಗರೂಕತೆ ಮರೆತರೆ ಅಪಾಯ ಗ್ಯಾರಂಟಿ. ಏಕೆಂದರೆ ಈ ದಿಕ್ಕಿನತ್ತ ಸಾಗುವ ಮಾರ್ಗದಲ್ಲೇ ಉದ್ದಕ್ಕೂ ಗುಂಡಿ ತೆಗೆದು ಯುಜಿಡಿ ಪೈಪ್‌ಲೈನ್ ಕಾಮಗಾರಿ ನಡೆಸಿದ್ದು, ನಂತರದಲ್ಲಿ ಮುಚ್ಚಿರುವ ಮಣ್ಣು ಕುಸಿದು ಹಳ್ಳ ನಿರ್ಮಾಣಗೊಂಡಿದೆ.

ಪೂರ್ಣಚಂದ್ರ ತೇಜಸ್ವಿ ವೃತ್ತದ ಸಮೀಪ ಅನಿಕೇತನ ರಸ್ತೆಯಲ್ಲಿ ಸಾಕಷ್ಟು ಅಗಲವಾಗಿ ಹಳ್ಳ ತೆಗೆದಿದ್ದು, ಇದೀಗ ಈ ಜಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಳ್ಳಕೊಳ್ಳಗಳು ನಿರ್ಮಾಣಗೊಂಡಿವೆ. ಇದೇ ವೃತ್ತದ ಆದಿಚುಂಚನಗಿರಿ ರಸ್ತೆಯಲ್ಲಿ ಮುಡಾ ಆಯುಕ್ತರ ನಿವಾಸ (ಈಗಿನ ಎಂಡಿಎ) ಸಹ ಇರುವುದು ಗಮನಾರ್ಹ.

'ಸ್ಥಳೀಯ ಆಡಳಿತದ ಅಧಿಕಾರಗಳ ನಿವಾಸದ ಸಮೀಪವೇ ಇಂತಹ ದುಸ್ಥಿತಿ ಇರುವುದು ನಿಜಕ್ಕೂ ಬೇಸರದ ಸಂಗತಿ' ಎಂದು ಇಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯುಜಿಡಿ ಕಾಮಗಾರಿಗಾಗಿ ರಸ್ತೆ ಅಗೆದು ಸುಮಾರು ತಿಂಗಳು ಕಳೆದಿವೆ. ಇಲ್ಲಿ ಸಂಚಾರ ಅತ್ಯಂತ ಸಂಕಷ್ಟದಿಂದ ಕೂಡಿದೆ. ಅರ್ಧ ರಸ್ತೆಯನ್ನೇ ಹಾಳುಗೆಡವಿದ್ದು, ಬಳಿಕ ಡಾಂಬರು ಹಾಕುವುದಿರಲಿ, ಒಂದಿಷ್ಟು ಮಣ್ಣು ಹಾಕಿ ಮಟ್ಟವನ್ನಾದರೂ ಮಾಡಿದ್ದರೆ, ಒಂದು ಹಂತಕ್ಕೆ ವಾಹನ ಸವಾರರು ಸುಗಮವಾಗಿ ಸಂಚರಿಸಬಹುದಿತ್ತು. ಆದರೆ ಮಹಾನಗರ ಪಾಲಿಕೆಯ ಆಡಳಿತ ವರ್ಗಕ್ಕೆ ಈ ಕನಿಷ್ಠ ಕೆಲಸ ಮಾಡುವ ಸೌಜನ್ಯ ಸಹ ಇಲ್ಲವಾಗಿದೆ. ಅಡ್ಡಾದಿಡ್ಡಿಯಾಗಿ ವಾಹನ ಪಾರ್ಕಿಂಗ್ ಸಮಸ್ಯೆಯೂ ಇಲ್ಲಿದೆ ಎಂದು ಇಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು ಬೇಸರ ವ್ಯಕ್ತಪಡಿಸಿದ್ದಾರೆ.

ಫುಟ್‌ಪಾತ್ ಸಹ ಅಧ್ವಾನ: ಎಚ್ಚರ ತಪ್ಪಿದರೆ ಅನಾಹುತ ಇಲ್ಲಿ ತಪ್ಪಿದ್ದಲ್ಲ. ಹೀಗಾಗಿ ಇಲ್ಲಿ ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ಅಡ್ಡಿಯಾಗಿದೆ. ಈ ನಡುವೆ ಇದೇ ಅನಿಕೇತನ ರಸ್ತೆಯ ಫುಟ್‌ಪಾತ್ ಸಹ ಸಮರ್ಪಕವಾಗಿಲ್ಲ. ಇಂಟರ್‌ಲಾಕ್ ಟೈಲ್ಸ್ ಮೂಲಕ ನಿರ್ಮಿಸಿರುವ ಇಲ್ಲಿ ಫುಟ್‌ಪಾತ್ ಅವ್ಯವಸ್ಥೆಗೆ ಒಳಗಾಗಿದ್ದು, ಇದ್ದರೂ ಪಾದಚಾರಿಗಳ ಪ್ರಯೋಜನಕ್ಕೆ ಬಾರದಾಗಿದೆ. ಬಹುತೇಕ ಭಾಗದ ಫುಟ್‌ಪಾತ್‌ನಲ್ಲಿ ಹುಲ್ಲು ಸೇರಿದಂತೆ ಗಿಡಗಂಟಿ ಬೆಳೆದು ನಿಂತಿದ್ದು, ಒಂದೆಡೆ ಪಾರ್ಥೇನಿಯಂ ಕಳೆ ಸಸ್ಯ ಸಹ ಬೆಳೆದಿದೆ. ಕೆಲ ಭಾಗದಲ್ಲಿ ಫುಟ್‌ಪಾತ್‌ನ ಟೈಲ್ಸ್‌ಗಳು ಕಿತ್ತು ಬಂದಿವೆ. ಜೊತೆಗೆ ಟೈಲ್ಸ್ ಕುಸಿದು ಹೆಜ್ಜೆ ಇಡಲಾಗದ ದುಸ್ಥಿತಿಯೂ ನಿರ್ಮಾಣವಾಗಿದೆ.

ಮುಡಾ ಆಯುಕ್ತರ ನಿವಾಸದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇರುವ ಮಳೆ ನೀರು ಚರಂಡಿಯಲ್ಲಿ ಗಿಡಗಂಟಿ ಬೆಳೆದು ನಿಂತಿದ್ದು, ಮಳೆ ನೀರು ಸರಾಗವಾಗಿ ಹರಿದು ಹೋಗಲಾದ ಸನ್ನಿವೇಶ ನಿರ್ಮಾಣವಾಗಿದೆ. ಜೊತೆಗೆ ಇದೇ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಫುಟ್‌ಪಾತ್ ಜಾಗದಲ್ಲಿ ತ್ಯಾಜ್ಯ ಸಹ ಸುರಿಯಲಾಗಿದೆ. ಅನಿಕೇತನ ರಸ್ತೆಯ ಐದನೇ ಕ್ರಾಸ್‌ನ (ನಾರ್ತ್) ಸಮೀಪವೂ ಫುಟ್‌ಪಾತ್‌ನಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸೇರಿದಂತೆ ನಾನಾ ರೀತಿಯ ಕಸ ಹಾಕಲಾಗಿದೆ.

ಆದಷ್ಟು ಶೀಘ್ರದಲ್ಲಿ ಕ್ರಮ

"ಕ್ಷೇತ್ರದ ಶಾಸಕರ ಅನುದಾನದಲ್ಲಿ ಕೆಆರ್‌ಐಡಿಎಲ್‌ನಿಂದ (ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ) ಈ ರಸ್ತೆಯಲ್ಲಿ ಯುಜಿಡಿ ಪೈಪ್‌ಲೈನ್ ಕಾಮಗಾರಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಆಗಿರುವ ಗುಂಡಿಗಳನ್ನು ಮುಚ್ಚಿ ದುರಸ್ತಿಗೊಳಿಸಲು ಈಗಾಗಲೇ ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಆದಷ್ಟು ಶೀಘ್ರದಲ್ಲಿ ಕ್ರಮ ವಹಿಸಲಾಗುವುದು.

-ಬಿ.ಎಸ್.ಸತ್ಯಮೂರ್ತಿ, ವಲಯ ಆಯುಕ್ತರು, ವಲಯ ಕಚೇರಿ 3, ಪಾಲಿಕೆ, ಮೈಸೂರು.

"ನಾನು ಸಹ ಇದೇ ರಸ್ತೆಯಲ್ಲಿ ನಿತ್ಯ ಸಂಚರಿಸುತ್ತೇನೆ. ಮಳೆ ಬಂದರಂತೂ ಸಮಸ್ಯೆ ತೀವ್ರತರದಲ್ಲಿ ತಲೆದೋರಲಿದೆ. ಮೊನ್ನೆ ಒಬ್ಬ ಮಹಿಳೆ ಬಿದ್ದರು. ಪಾಲಿಕೆ ಅಧಿಕಾರಿಗಳಿಗೂ ಇಲ್ಲಿನ ದುಸ್ಥಿತಿಯನ್ನು ವಿಡೀಯೋ ಮಾಡಿ ಕಳುಹಿಸಿದ್ದೇನೆ. ಇದಕ್ಕೆ ಅವರಿಂದ ಗಮನ ಹರಿಸುವ ಪ್ರತಿಕ್ರಿಯೆ ಸಿಕ್ಕಿದೆ. ಸ್ವಚ್ಛ ಸರ್ವೇಕ್ಷಣೆಯಲ್ಲಿ ಉತ್ತಮ ಶ್ರೇಯಾಂಕ ಪಡೆಯಲು ಸಹಕರಿಸುವಂತೆ ನಾಗರಿಕರನ್ನು ಪಾಲಿಕೆ ಕೋರಿಕೊಳ್ಳುತ್ತದೆ. ಅಂತೆಯೇ ಇಂತಹ ವಿಚಾರದಲ್ಲಿ ಕಾಳಜಿ ವಹಿಸುವುದು ಪಾಲಿಕೆಯ ಕರ್ತವ್ಯ ಅಲ್ಲವೇ? ನಿರ್ಲಕ್ಷ್ಯ ವಹಿಸಿರುವ ಪಾಲಿಕೆ ಇನ್ನಾದರೂ ಕ್ರಮ ವಹಿಸಬೇಕು.

-ರಮೇಶ್ ಕಿಕ್ಕೇರಿ, ಮೈಸೂರಿನ ನಾಗರಿಕರು.

ಜಾಹೀರಾತು ಬೋರ್ಡ್‌ಗಳಾದ ಮಾರ್ಗಸೂಚಿ ಫಲಕಗಳು





ಬಡಾವಣೆಯ ಮಾಹಿತಿ ಮಾರ್ಗಸೂಚಿ ಫಲಕಗಳು ಇಲ್ಲಿ ಗೃಹಸಾಲ, ಗರ್ಲ್ಸ್ ಪಿಜಿ, ಬಾಯ್ಸ್ ಪಿಜಿ ಎಂಬಿತ್ಯಾದಿ ಜಾಹೀರಾತು ಪ್ರದರ್ಶಿಸುವ ಬೋರ್ಡ್‌ಗಳಾಗಿ ಪರಿಣಮಿಸಿವೆ. ಮುಡಾ ಆಯುಕ್ತರ ನಿವಾಸದ ಬಳಿ ಆದಿಚುಂಚನಗಿರಿ ರಸ್ತೆಯ ಫುಟ್‌ಪಾತ್‌ನಲ್ಲಿರುವ ಕಾಂಕ್ರೀಟ್ ಸಿಮೆಂಟ್‌ನಿಂದ ನಿರ್ಮಿಸಿರುವ ಇಂತಹ ಬೃಹತ್ ಫಲಕವು ಸ್ಥಳೀಯ ಪ್ರದೇಶದ ವಿವರಗಳನ್ನು ಒದಗಿಸುವ ಬದಲು ಇಂತಹ ಜಾಹೀರಾತು ಪ್ರದರ್ಶನದ ಬೋರ್ಡ್ ಆಗಿ ಮಾರ್ಪಟ್ಟಿದೆ. ಇನ್ನು ಈ ಹಿಂದೆ ಸದರಿ ಫಲಕದಲ್ಲಿ ಒದಗಿಸಿದ್ದ ಮಾಹಿತಿ ಮಾಸಿ ಹೋಗಿ ಎಷ್ಟೋ ದಿನಗಳೇ ಆಗಿವೆ.

ಅನಿಕೇತನ ರಸ್ತೆಯ ನಾರ್ತ್ 6ನೇ ಕ್ರಾಸ್‌ನ ಫುಟ್‌ಪಾತ್‌ನಲ್ಲಿರುವ ಬೃಹತ್ ಕಾಂಕ್ರೀಟ್ ಫಲಕದ ಪರಿಸ್ಥಿತಿಯೂ ಇದೇ ರೀತಿಯಾಗಿದೆ. ಇಷ್ಟು ಸಾಲದೆಂಬಂತೆ 'ಪೂರ್ಣಚಂದ್ರ ತೇಜಸ್ವಿ ವೃತ್ತ', 'ಆದಿಚುಂಚನಗಿರಿ ರಸ್ತೆ' ಫಲಕಗಳಿಗೂ ಇದೇ ದುಸ್ಥಿತಿ ತರಲಾಗಿದೆ. ಇಲ್ಲಿನ ವಿದ್ಯುತ್ ಕಂಬಗಳು, ರಸ್ತೆಯ ಮಾರ್ಗಸೂಚಿ ಫಲಕಗಳೂ ಇಂತಹ ಸನ್ನಿವೇಶದಿಂದ ಹೊರತಾಗಿಲ್ಲ. ಇಂತಹ ಪರಿಸ್ಥಿತಿ ಇಲ್ಲಿಗೆ ಮಾತ್ರ ಸೀಮಿತವಾಗದೇ ಇಡೀ ನಗರದಾದ್ಯಂತ ಇದ್ದು, ನಗರದ ಅಂದಚಂದಕ್ಕೆ ಇದು ಮಾರಕವಾಗಿರುವುದು ಮಾತ್ರವಲ್ಲದೆ, ನಾಗರಿಕರಿಗೆ ಸ್ಥಳೀಯ ಪ್ರದೇಶ ಮಾಹಿತಿ ಸಹ ಸಮರ್ಪಕವಾಗಿ ದೊರೆಯದಾಗಿದೆ. ಇನ್ನು ಅನಿಕೇತನ ರಸ್ತೆ ಮಾತ್ರವಲ್ಲದೆ, ನಗರದ ಬಹುತೇಕ ರಸ್ತೆಗಳು ನಾನಾ ಕಾಮಗಾರಿ ಸೇರಿದಂತೆ ಇನ್ನಿತರ ಕಾರಣಗಳಿಗೆ ಹಳ್ಳಕೊಳ್ಳಗಳಿಂದ ಕೂಡಿದ್ದು, ಮೈಸೂರು ಮಹಾನಗರ ಪಾಲಿಕೆ ಬೃಹತ್ ಮಟ್ಟದಲ್ಲೇ ಈ ಎಲ್ಲವನ್ನೂ ಸರಿಪಡಿಸಬೇಕಿದೆ.

ಉತ್ತಮ ಶಿಕ್ಷಣದಿಂದ ಆರೋಗ್ಯಕರ ಸಮಾಜ ನಿರ್ಮಾಣ

ರಾಜ್ಯಸಭಾ ಸದಸ್ಯ ಹಾಗೂ ಸಾಹಿತಿ ಎಲ್.ಹನುಮಂತಯ್ಯ ಅಭಿಪ್ರಾಯ

ಮಂಡ್ಯ, ಜು.2– ಉತ್ತಮ ಶಿಕ್ಷಣದಿಂದ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದು ರಾಜ್ಯಸಭಾ ಸದಸ್ಯ ಹಾಗೂ ಸಾಹಿತಿ ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟರು.

ಕನ್ನಡಸೇನೆ ಕರ್ನಾಟಕ ಮಂಡ್ಯ ಜಿಲ್ಲಾ ಘಟಕದಿಂದ ನಗರದ ಗಾಂಧಿ ಭವನದಲ್ಲಿ ಪ್ರಸ್ತುತ ರಾಜಕೀಯದಲ್ಲಿ ಯುವಕರ ಪಾತ್ರ ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸಿ ಮಾತನಾಡಿದ ಅವರು, ಪ್ರಸ್ತುತ ರಾಜ್ಯದಲ್ಲಿ 21 ಸಾವಿರ ಸರ್ಕಾರಿ ಶಾಲೆಗಳು ಸೋರುವ ಶಾಲೆಗಳಾಗಿ ಪರಿವರ್ತನೆಯಾಗಿವೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ. ಉತ್ತಮ ಶಿಕ್ಷಣ, ಉತ್ತಮ ಆರೋಗ್ಯ ಹಾಗೂ ಸಾಮಾಜಿಕ ಸಾಮರಸ್ಯ ಸಿಕ್ಕಾಗ ಮಾತ್ರ ಉತ್ತಮ ಸಮಾಜವಾಗಲು ಸಾಧ್ಯ ಎಂದರು.

ರಾಜ್ಯದಲ್ಲಿ ಅಪೌಷ್ಟಿಕತೆ ಇದೆ. ಶೇ.35ರಷ್ಟು ಹೆಣ್ಣು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಶೇ.30ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಇದು ಆತಂಕಕಾರಿ ಬೆಳವಣಿಗೆ ಎಂದು ವಿಷಾದ ವ್ಯಕ್ತಪಡಿಸಿದರು.


ಕಾರ್ಯಕ್ರಮವನ್ನು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಉದ್ಘಾಟಿಸಿದರು.

ಯುವಕರು ಇವೆಲ್ಲಾವನ್ನು ಕೇಳುವ ಶಕ್ತಿ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಾವು ಸ್ವಷ್ಟವಾದ ರಾಜ್ಯದಲ್ಲಿ ಬದುಕುತ್ತಿದ್ದೇವೆ ಎಂದು ಭಾಸವಾಗುತ್ತದೆ. ಯುವಕರಾದ ನೀವೇ ಪ್ರಶ್ನಿಸದಿದ್ದರೇ, ಇವರನ್ನು ಕೇಳುವವರು ಯಾರು ಎಂದು ಪ್ರಶ್ನಿಸಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘಟಿತ ಹೋರಾಟಕ್ಕೆ ತನ್ನದೇ ಆದ ಶಕ್ತಿ ಇದೆ. ಈ ನಿಟ್ಟಿನಲ್ಲಿ ಯುವ ಸಮುದಾಯ ಒಗ್ಗೂಡಬೇಕು ಎಂದು ಕರೆ ನೀಡಿದರು.

ಕೆಆರ್‌ಎಸ್ ಬಳಿ ಸರ್ಕಾರ ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ಕಾವೇರಿ ಆರತಿ ಮಾಡಲು ನಿರ್ಧರಿಸಿದೆ. ಇದರಿಂದ ಡ್ಯಾಂಗೆ ಅಪಾಯವಾಗುವ ಸಂಭವವಿದೆ. ಇದನ್ನು ಖಂಡಿಸಿ ಹಲವಾರು ಪ್ರಗತಿಪರ ಸಂಘಟನೆಗಳು ಹೋರಾಟ ನಡೆಸುತ್ತಿವೆ. ಅದಕ್ಕೆ ಯುವಕರು ಧ್ವನಿಯಾಗಬೇಕು. ಅಣೆಕಟ್ಟೆ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ಈ ಯೋಜನೆಗಳನ್ನು ಧಿಕ್ಕರಿಸಬೇಕೆಂದು ತಿಳಿಸಿದರು.

ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಎಂ.ಡಿ.ಲಕ್ಷ್ಮಿನಾರಾಯಣ್, ನಗರಸಭೆ ಸದಸ್ಯೆ ಸೌಭಾಗ್ಯ, ಹಾಸ್ಯನಟ ಟೆನ್ನಿಸ್ ಕೃಷ್ಣ ಇತರರಿದ್ದರು.

> ಇತ್ತೀಚೆಗೆ ಯುವಕರಿಗೆ ಹೃದಯಾಘಾತ ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆ. ದೇಶದ ಅಭಿವೃದ್ಧಿ ಯುವ ಸಮುದಾಯದಿಂದ ಮಾತ್ರ ಸಾಧ್ಯ, ಆದರೆ ಹಾಸನ ಜಿಲ್ಲೆಯೊಂದರಲ್ಲೇ 15ಕ್ಕೂ ಹೆಚ್ಚು ಯುವಕ ಯುವತಿಯರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂಬ ಸುದ್ದಿ ಕೇಳಿ ಬೇಸರವಾಯಿತು. ಇದಕ್ಕೆ ಅತಿಯಾಗಿ ಮೊಬೈಲ್ ಬಳಕೆಯೇ ಕಾರಣ ಎನ್ನಲಾಗುತ್ತಿದೆ. ದೇಶದ ಭವಿಷ್ಯದ ಪ್ರಜೆಗಳು ಈ ರೀತಿ ಹೃದಯಾಘಾತಕ್ಕೀಡಾಗುತ್ತಿರುವುದು ಬೇಸರದ ಸಂಗತಿ.
> – ಕೆ.ಟಿ.ಶ್ರೀಕಂಠೇಗೌಡ, ವಿಧಾನಪರಿಷತ್ ಮಾಜಿ ಸದಸ್ಯ

ಸೂರ್ಯ ಮಂದಿರ ಉದ್ಘಾಟನೆ


ಸೂರ್ಯ ಮಂದಿರವನ್ನು ಸಮಾಜ ಸೇವಕ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜು.2– ಜನರಲ್ಲಿ ವೈಚಾರಿಕತೆ ಬಗ್ಗೆ ಜನಜಾಗೃತಿ ಮೂಡಿಸುವ ಉದ್ದೇಶದಿಂದ ತಾಲೂಕಿನ ವಳಗೆರೆಮೆಣಸದಲ್ಲಿ ನಿವೃತ್ತ ಅಧೀಕ್ಷಕ ಇಂಜಿನಿಯರ್ ಪುಟ್ಟಸ್ವಾಮಿ ಅವರು ನಿರ್ಮಿಸಿರುವ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ಪ್ರತಿಮೆಗಳನ್ನು ಒಳಗೊಂಡ ಸೂರ್ಯ ಮಂದಿರವನ್ನು ಸಮಾಜ ಸೇವಕ ಹಾಗೂ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮದಲ್ಲಿ ನಿವೃತ್ತ ಅಧೀಕ್ಷಕ ಇಂಜಿನಿಯರ್ ಪುಟ್ಟಸ್ವಾಮಿ ಅವರು ಸೂರ್ಯ ಮಂದಿರ ಹಾಗೂ ಗ್ರಂಥಾಲಯ ನಿರ್ಮಿಸಿರುವುದು ಶ್ಲಾಘನೀಯ. ಸೂರ್ಯ ಮಂದಿರದಲ್ಲಿ ಮನುಷ್ಯನಿಗೆ ಬೇಕಾದ ಜ್ಞಾನ, ಶಿಕ್ಷಣ, ಸತ್ಯ, ನ್ಯಾಯ, ನೀತಿ, ಧರ್ಮ, ಕಾಯಕ ಸೇರಿದಂತೆ ಸಾಮಾಜಿಕ ತತ್ವಗಳನ್ನು ಸಮಾಜಕ್ಕೆ ನೀಡಿದ ಮಹನೀಯರಾದ ಬುದ್ಧ, ಬಸವಣ್ಣ ಅಂಬೇಡ್ಕರ್ ಹಾಗೂ ಗಾಂಧೀಜಿ ಅವರ ಪುತ್ಥಳಿ ಜೊತೆಗೆ ಗ್ರಂಥಾಲಯ, ವಾಚನಾಲಯವನ್ನು ಸ್ಥಾಪಿಸಿದ್ದಾರೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಕೆ.ಬಿ.ಈಶ್ವರಪ್ರಸಾದ್, ವಿ.ಎನ್.ಮಹದೇವೇಗೌಡ, ತಾಲೂಕು ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಗಂಗಾಧರ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಗಾಯಕ ಉಮೇಶ್, ಡಿಎಸ್‌ಎಸ್ ಮುಖಂಡ ಸೋಮಸುಂದರ್, ತಾಲೂಕು ಡಿಎಸ್‌ಎಸ್ ಸಂಚಾಲಕ ವಿ.ಎನ್. ಪುಟ್ಟಸ್ವಾಮೀಗೌಡ, ವಿ.ಬಿ.ಮಂಜುನಾಥ್, ನಾಗೇಂದ್ರ, ಸಿಆರ್‌ಪಿ ಕುಮಾರ್, ನೇತ್ರಾವತಿ, ರಮಾನಂದ್ ಮತ್ತಿತರರಿದ್ದರು.

ಚಿರತೆ ದಾಳಿಗೆ ಮೇಕೆ ಬಲಿ



ಭಾರತೀನಗರ, ಜು.2– ಚಿರತೆ ದಾಳಿಗೆ ಮೇಕೆ ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಜ್ಯೋತಿ ಅವರಿಗೆ ಸೇರಿದ ಮೇಕೆ ಬಲಿಯಾಗಿರುವುದು. ಈ ಹಿಂದೆಯೂ ಕೂಡ ಇವರ ಹಿಂಡಿನಲ್ಲಿದ್ದ ಮಂಜುಳಾ ಎಂಬುವರ ಮೇಕೆಯನ್ನು ಚಿರತೆ ಕೊಂದು ಹಾಕಿತ್ತು ಅಲ್ಲದೇ ಗ್ರಾಮದ ಹೊರವಲಯದಲ್ಲಿರುವ ಬಸವೇಶ್ವರ ನಗರ ಬಳಿ ಕೂಡ 2 ಮೇಕೆಗಳನ್ನು ಕೊಂದು ಹಾಕಿತ್ತು. ಚಿರತೆ ಹಿಡಿಯಲು ಕಳೆದ 15 ದಿನಗಳ ಹಿಂದೆ ಬೋನನ್ನು ಕೂಡ ಇಡಲಾಗಿತ್ತು. ಆದರೆ ಚಿರತೆ ಇದುವರೆಗೆ ಸೆರೆಯಾಗಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಕೆಆರ್‌ಎಸ್‌ನಲ್ಲಿ ಯಾವ ಪುರುಷಾರ್ಥಕ್ಕೆ ಶಿಲಾನ್ಯಾಸ

ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಪ್ರಶ್ನೆ



ಮಂಡ್ಯ, ಜು.2– ಕೆಆರ್‌ಎಸ್ ವ್ಯಾಪ್ತಿಯ ಜಮೀನುಗಳಲ್ಲಿ ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗೆ ನೀರು ಹರಿಸಲು ವಿಫಲವಾಗಿರುವ ಸರ್ಕಾರ ಜೂನ್‌ನಲ್ಲಿ ಡ್ಯಾಂ ತುಂಬಿರುವ ಮತ್ತು ಬಾಗಿನ ಅರ್ಪಿಸಿರುವ ಸ್ಮರಣಾರ್ಥ ಶಿಲಾನ್ಯಾಸ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಕೊಟ್ಟಿದ್ದು ಯಾವ ಪುರುಷಾರ್ಥಕ್ಕೆ ಎಂದು ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೇ ತಿಂಗಳಲ್ಲಿ ಮಂಡ್ಯ ಜಿಲ್ಲೆಯ ನಾಲೆಗಳಿಗೆ ನೀರು ಹರಿಸಲಾಗಿತ್ತು. ಅದಾದ ನಂತರ ವಿಸಿ ನಾಲೆಯ ಆಧುನೀಕರಣ ಕಾಮಗಾರಿ ನೆಪವೊಡ್ಡಿ ಮುಂಗಾರು ಆರಂಭವಾದ ನಂತರ ನಾಲೆಗಳಿಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿತ್ತು. ಸಮರ್ಪಕವಾಗಿ ಮುಂಗಾರು ಆರಂಭವಾದ ಸಂದರ್ಭ ನಾಲೆಗಳಿಗೆ ನೀರು ಹರಿಸಿದ್ದರೇ, ಡ್ಯಾಂ ಜೂನ್‌ನಲ್ಲಿ ಭರ್ತಿಯಾಗುತ್ತಿರಲಿಲ್ಲ. ರೈತರಿಗೆ ಕೊಡಬೇಕಾದ ನೀರನ್ನು ಡ್ಯಾಂನಲ್ಲಿ ಶೇಖರಿಸಿಕೊಂಡು ಜೂನ್‌ನಲ್ಲಿಯೇ ಡ್ಯಾಂ ತುಂಬಿದೆ ಎಂದು ರಾಜ್ಯ ಸರ್ಕಾರ ಶಹಬಾಸ್‌ಗಿರಿ ತೆಗೆದುಕೊಳ್ಳುವುದು ಎಷ್ಟು ಸರಿ ಎಂದು ಛೇಡಿಸಿದರು.

ಅಣೆಕಟ್ಟೆಯಲ್ಲಿ ನೀರು ಶೇಖರಣೆ ಆಗಿದ್ದರೂ ಒಂದು ಕಟ್ಟು ನೀರು ಹರಿಸದೇ ಭತ್ತದ ಇಳುವರಿ ಕುಂಠಿತವಾಗಲು ಕಾರಣವಾದ ಕೃಷಿ ಸಚಿವರು ಈ ಬಗ್ಗೆ ಮೌನವಾಗಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಅಂತಿಮ ಹಂತದಲ್ಲಿ ನಾಟಿ ಮಾಡಿರುವ ಭತ್ತ, ಬೆಳೆದು ನಿಂತಿರುವ ಕಬ್ಬು, ತೆಂಗು, ಅಡಿಕೆ ಸೇರಿದಂತೆ ಹಲವು ಬೆಳೆಗಳಿಗೆ ನೀರು ನೀಡಿ ರೈತರನ್ನು ರಕ್ಷಿಸಬೇಕಾದ ಜಿಲ್ಲೆಯ ಜನಪ್ರತಿನಿಧಿಗಳು ಮೌನಕ್ಕೆ ಶರಣಾಗಿ ಇದುವರೆಗೂ ನಾಲೆಗಳಲ್ಲಿ ನೀರು ನಿಲ್ಲಿಸಿ, ಗುತ್ತಿಗೆದಾರನ ಹಿತ ಕಾಯಲು ಮುಂದಾಗಿರುವುದು ನಾಚಿಕೆಗೇಡು ಎಂದು ಹರಿಹಾಯ್ದರು.

ಕೃಷಿ ಸಚಿವರ ತವರಿನಲ್ಲೇ ರೈತ ಪರಿತಪಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಶೇ.30ರಷ್ಟು ಭತ್ತದ ಇಳುವರಿ ಕಡಿಮೆಯಾಗಿದೆ. ಕಬ್ಬು ಸೇರಿದಂತೆ ಇತರೆ ಬೆಳೆಗಳು ಒಣಗುತ್ತಿದ್ದರೂ ನೀರು ಹರಿಸದಿರುವುದು ಬೇಸರದ ಸಂಗತಿ ಎಂದು ಅಸಮಾಧಾನ ಹೊರ ಹಾಕಿದರು.

ಬೆಳೆ ರಕ್ಷಣೆಗಾಗಿ ನಾಲೆಗಳಿಗೆ ನೀರು ಹರಿಸಲು ರೈತರು ಮನವಿ ಮಾಡಿದರೆ ರೈತರಿಗೆ ಕೆಲಸವಿಲ್ಲವೇ ಎಂದು ಹೀಯಾಳಿಸುವ ಶಾಸಕ ರಮೇಶ್ ಬಾಬು ಅವರು ಯಾವ ಧೈರ್ಯದಿಂದ ರೈತರ ಬಳಿ ತೆರಳುತ್ತಾರೆಂದು ಪ್ರಶ್ನಿಸಿದರು.

ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯ ನಗುವಿನಹಳ್ಳಿ, ಕೊತ್ತತ್ತಿ, ತಗ್ಗಹಳ್ಳಿ ಸೇರಿದಂತೆ ಹಲವು ಕಡೆ ಕಬ್ಬಿನ ಫಸಲು ಒಣಗುತ್ತಿರುವ ದೃಶ್ಯ ಪ್ರದರ್ಶಿಸಿದ ಮಾಜಿ ಶಾಸಕರು, ಮದ್ದೂರು ಮತ್ತು ಮಳವಳ್ಳಿ ಭಾಗದ ರೈತರ ಸ್ಥಿತಿ ಏನಾಗಿರಬೇಕು. ಆ ಭಾಗದ ಶಾಸಕರು ಏನು ಮಾಡುತ್ತಿದ್ದಾರೆಂದು ಪ್ರಶ್ನಿಸಿದರು.

ಭತ್ತ ಖರೀದಿ ಕೇಂದ್ರ ತೆರೆಯಲು ರಾಜ್ಯ ಸರ್ಕಾರ ನಿರಾಸಕ್ತಿ ತೋರಿರುವುದು ನಾಚಿಕೇಡಿನ ಸಂಗತಿ. ಬೆಲೆ ಕುಸಿತ ಹಾಗೂ ಇಳುವರಿ ನಷ್ಟದಿಂದ ರೈತರು ಪರಿತಪಿಸುತ್ತಿದ್ದಾರೆ. ಕೇಂದ್ರ ಸರ್ಕಾರ 2300 ರೂ. ಬೆಂಬಲ ಬೆಲೆ ನೀಡಿ ಭತ್ತ ಖರೀದಿಗೆ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರ ಖರೀದಿ ಕೇಂದ್ರ ತೆರೆಯದೇ ಕ್ವಿಂಟಾಲ್ ಭತ್ತ ಕೇವಲ 1800 ರಿಂದ 1900 ರೂ.ಗೆ ಮಾರಾಟವಾಗುತ್ತಿದ್ದು, ನಷ್ಟಕ್ಕೆ ಹೊಣೆ ಯಾರು ಎಂದು ಪ್ರಶ್ನಿಸಿದರು.

ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹವಿದ್ದರೂ ನೀರು ಹರಿಸಲು ಮೀನಾಮೇಷ ಎಣಿಸುವ ಸರ್ಕಾರ ನಾಲೆಗಳ ಆಧುನೀಕರಣಕ್ಕೆ ಸಾವಿರಾರು ಕೋಟಿ ಅನುದಾನ ನೀಡಿದರೆ ಏನು ಪ್ರಯೋಜನ ಎಂದು ಪ್ರಶ್ನಿಸಿದ ಅವರು, ಯುವ ರೈತರು ಕೃಷಿ ತ್ಯಜಿಸುವ ದಾರಿಯಲ್ಲಿರುವಾಗ ಸರ್ಕಾರ ಹಾಗೂ ಕೃಷಿ ಸಚಿವರಿಗೆ ರೈತರನ್ನು ಕಂಡರೆ ತಾತ್ಸಾರವೇ ಎಂದು ಕಿಡಿಕಾರಿದರು.

ಬಾಗಿನ ಅರ್ಪಣೆಯ ವೇಳೆ ನಾಲೆಗಳಿಗೆ ಕೂಡಲೇ ನೀರು ಹರಿಸಲು ಆದೇಶಿಸಿದ ಮಾನ್ಯ ಮುಖ್ಯಮಂತ್ರಿಗಳ ಆದೇಶಕ್ಕೆ ಒಂದು ದಿನದ ಮೌಲ್ಯವೇ ಎಂದು ಪ್ರಶ್ನಿಸಿದ ಅವರು, ಸಿಡಿಎಸ್ ನಾಲೆಗೆ ಒಂದು ದಿನ ನೀರು ಹರಿಸಿ ನೀರು ನಿಲ್ಲಿಸಿದ್ದು ಯಾವ ಕಾರಣಕ್ಕೆ ಎಂದು ಪ್ರಶ್ನಿಸಿದರು.

ಗೋಷ್ಠಿಯಲ್ಲಿ ಜೆಡಿಎಸ್ ಮುಖಂಡ ಲೋಕೇಶ್ ಉಪಸ್ಥಿತರಿದ್ದರು.

ಯಾರ ಮೆಚ್ಚುಗೆಗೆ ದುಬಾರಿ ಕಾವೇರಿ ಆರತಿ

ಕಾವೇರಿ ಆರತಿಗೆ ನನ್ನ ವಿರೋಧವಿಲ್ಲ. ಆದರೆ 92 ಕೋಟಿ ವೆಚ್ಚದಲ್ಲಿ ಅಣೆಕಟ್ಟೆಯ ಸನಿಹದಲ್ಲಿ ಕಾವೇರಿ ಆರತಿ ಮಾಡಲು ಹೊರಟಿರುವುದು ಯಾರನ್ನು ಮೆಚ್ಚಿಸಲು ಎಂದು ರವೀಂದ್ರ ಶ್ರೀಕಂಠಯ್ಯ ಅತೃಪ್ತಿ ಹೊರ ಹಾಕಿದರು.

ಕಾವೇರಿ ಆರತಿಗೆ ಶ್ರೀರಂಗಪಟ್ಟಣ ಬಳಿ ಇರುವ ಸ್ನಾನಘಟ್ಟ ಸೂಕ್ತ ಪ್ರದೇಶವಾಗಿದ್ದು, ನಾನು ಶಾಸಕನಾಗಿದ್ದ ವೇಳೆ 8 ಕೋಟಿ ರೂ. ಅನುದಾನದಲ್ಲಿ ಮೆಟ್ಟಿಲುಗಳ ನವೀಕರಣ ಮಾಡಲಾಗಿದೆ. ಆ ಸ್ಥಳದಲ್ಲಿ ಕಡಿಮೆ ವೆಚ್ಚದಲ್ಲಿ ಕಾವೇರಿ ಆರತಿ ಧಾರ್ಮಿಕ ಕಾರ್ಯ ಮಾಡಿದರೆ ಅಣೆಕಟ್ಟೆಯ ಸುರಕ್ಷತೆ ಜೊತೆಗೆ ಶ್ರೀರಂಗಪಟ್ಟಣ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬುದನ್ನು ಜಿಲ್ಲೆಯ ಜನಪ್ರತಿನಿಧಿಗಳು ಅರಿತುಕೊಳ್ಳಬೇಕೆಂದರು.

ಹಳೆಬೀಡು ಪಿಎಸಿಎಸ್‌ಗೆ ಲಿಂಗರಾಜು ಅಧ್ಯಕ್ಷ

ಪಾಂಡವಪುರ, ಜು.2– ತಾಲೂಕಿನ ಹಳೆಬೀಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಲಿಂಗರಾಜು ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಹೆಚ್.ಕೆ.ಕುಳ್ಳೇಗೌಡರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಲಿಂಗರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಆನಂದನಾಯಕ ಘೋಷಿಸಿದರು. ನೂತನ ಅಧ್ಯಕ್ಷರನ್ನು ನಿರ್ದೇಶಕರು, ಮುಖಂಡರು ಅಭಿನಂದಿಸಿದರು.


ನೂತನ ಅಧ್ಯಕ್ಷ ಹೆಚ್.ಲಿಂಗರಾಜು ಅವರನ್ನು ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಅಧ್ಯಕ್ಷ ಹೆಚ್.ಲಿಂಗರಾಜು ಮಾತನಾಡಿ, ಸಂಘದ ನಿರ್ದೇಶಕರ ಬೆಂಬಲದೊಂದಿಗೆ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಕ್ರಮ ಕೈಗೊಳ್ಳುತ್ತೇನೆ ಎಂದರು.

ಈ ವೇಳೆ ಉಪಾಧ್ಯಕ್ಷ ಎಂ.ಪಿ.ಗುರುಮೂರ್ತಿ, ನಿರ್ದೇಶಕರಾದ ಹೆಚ್.ಸಿ.ಪುಟ್ಟಸ್ವಾಮೀಗೌಡ, ಹೆಚ್.ಕೆ.ಕುಳ್ಳೇಗೌಡ, ಹೆಚ್.ಆರ್. ತಿಮ್ಮೇಗೌಡ, ಹೆಚ್.ವಿ.ಕುಮಾರ್, ಹೆಚ್.ಸಿ. ಅರವಿಂದ್, ಹೆಚ್.ಎಂ.ರಮೇಶ್, ಪುಟ್ಟಲಕ್ಷ್ಮಮ್ಮ, ನಾಗಮ್ಮ, ಪುಟ್ಟರಾಮಯ್ಯ, ಗ್ರಾಪಂ ಅಧ್ಯಕ್ಷ ಹೆಚ್.ಸಿ.ಧನಂಜಯ, ಮುಖಂಡರಾದ ಪಟೇಲ್ ರಾಜು, ಮರೀಗೌಡ, ಯೋಗರಾಜು, ಕಾರ್ಯದರ್ಶಿ ಹೆಚ್.ಆರ್.ಮಹದೇವು, ಭವಾನಿ, ನಾಗೇಶ್ ಇದ್ದರು.

ಒಂದನೇ ಪುಟದಿಂದ

ಐದು ವರ್ಷವೂ ನಾನೇ ಸಿಎಂ!

ಪೂರ್ಣಗೊಳಿಸುವ ಬಗ್ಗೆ ಅವರಿಗೇಕೆ ಅನುಮಾನ ಎಂದು ಕೇಳಿದ ಅವರು, ಇದರಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ಇಲ್ಲ ಎಂದು ಹೇಳಿದರು.

ಬಿಜೆಪಿ ನಾಯಕರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು, ಅವರ ಮಾತುಗಳಿಗೆ ಯಾವುದೇ ಮಾನ್ಯತೆ ಕೊಡುವುದು ಬೇಡ, ಅವರು ನಾಲ್ಕು ವರ್ಷ ಆಡಳಿತ ನೀಡಿ, ಯಾವ ಸಾಕ್ಷಿಯ ಗುಡ್ಡೆ ಬಿಟ್ಟು ಹೋಗಿದ್ದಾರೆ ಎಂದು ಕೇಳಿದರು.

ನೀರಾವರಿ, ಲೋಕೋಪಯೋಗಿ, ಗ್ರಾಮೀಣ ಅಭಿವೃದ್ಧಿ ಸೇರಿದಂತೆ ಯಾವ ಇಲಾಖೆಯಲ್ಲಿ ಇವರು ಸಾಧನೆ ಮಾಡಿದ್ದಾರೆ. ಇವರಿಗೆ ದೊರೆತ ಅವಕಾಶದಲ್ಲಿ ವ್ಯಾಪಕ ಅಕ್ರಮ, ಭ್ರಷ್ಟಾಚಾರ ನಡೆಸಿದ್ದಷ್ಟೇ ಇವರ ಸಾಧನೆ. ಅದನ್ನು ಮುಚ್ಚಿಕೊಳ್ಳಲು ಸುಳ್ಳು ಹೇಳಿಕೊಂಡು ಓಡಾಡುತ್ತಿದ್ದಾರೆ ಎಂದು ಆಪಾದಿಸಿದರು.

ಸುರ್ಜೇವಾಲ ರಾಜ್ಯಕ್ಕೆ ಬಂದಿದ್ದಾರೆ

ಬಿಜೆಪಿ ಹೋರಾಟಕ್ಕೆ ಸಂದ ಜಯ, ಇದರಲ್ಲಿ ಇನ್ನೂ ದೊಡ್ಡ ತಲೆಗಳು ಉರುಳಲಿವೆ, ನ್ಯಾಯಾಲಯದ ತೀರ್ಪನ್ನು ಪಕ್ಷ ಸ್ವಾಗತಿಸುತ್ತದೆ. ಪರಿಶಿಷ್ಟ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ನ್ಯಾಯಕ್ಕೆ ಮೀಸಲಿಟ್ಟ 187 ಕೋಟಿ ರೂ.ಗಳನ್ನು, ಪಕ್ಕದ ರಾಜ್ಯದ ಬ್ಯಾಂಕ್‌ನಲ್ಲಿ ಸಾವಿರಾರು ಬ್ಯಾಂಕ್ ಖಾತೆಗಳನ್ನು ತೆರೆದು ಲೂಟಿ ಹೊಡೆಯಲಾಯಿತು. ಲೋಕಸಭಾ ಚುನಾವಣೆಗೆ ನಿಗಮದ ಹಣ ದುರ್ಬಳಕೆ ಆಗಿದೆ, ಚಂದ್ರಶೇಖರ್ ಎಂಬ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಡೆತ್‌ನೋಟ್‌ನಲ್ಲಿ ಎಲ್ಲ ಉಲ್ಲೇಖಿಸಿದ್ದರು. ಬಿಜೆಪಿಯ ತೀವ್ರ ಹೋರಾಟದ ಪರಿಣಾಮ ಅನಿವಾರ್ಯವಾಗಿ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಬೇಕಾಗಿ ಬಂತು, ಹೇಗಾದರೂ ಮತ್ತೆ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲು ಮುಖ್ಯಮಂತ್ರಿ ಪರದಾಡುತ್ತಿದ್ದಾರೆ. ಹಗರಣದಲ್ಲಿ ಸ್ವತಃ ಮುಖ್ಯಮಂತ್ರಿ ಭಾಗಿಯಾಗಿದ್ದಾರೆ, ಅವರ ಗಮನಕ್ಕೆ ಬಾರದೆ ಹೊರ ರಾಜ್ಯಕ್ಕೆ ಹಣ ವರ್ಗಾವಣೆ ಆಗಲು ಸಾಧ್ಯವಿಲ್ಲ ಎಂದರು.

ಮುಖ್ಯಮಂತ್ರಿ ಕುರ್ಚಿಗಾಗಿ ಪೈಪೋಟಿ ದಿನೇ ದಿನೇ ಹೆಚ್ಚಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ, ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ದಿನಬಳಕೆ ವಸ್ತುಗಳ ಬೆಲೆ ಏರಿಸಿದ್ದರಿಂದ ಜನಸಾಮಾನ್ಯರು ತತ್ತರಿಸಿ ಹೋಗಿದ್ದಾರೆ, ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದ್ದು, ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ರೈತರ, ಅಧಿಕಾರಿಗಳ ಆತ್ಮಹತ್ಯೆಗಳ ಜೊತೆಗೆ ಗುತ್ತಿಗೆದಾರರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕಾಂಗ್ರೆಸ್ ಸರ್ಕಾರ ಸಂಪೂರ್ಣ ನಿಷ್ಕ್ರಿಯವಾಗಿದೆ ಎಂಬುದನ್ನು ಆಡಳಿತ ಪಕ್ಷದ ಶಾಸಕರೇ ಒಪ್ಪಿಕೊಂಡಿದ್ದಾರೆ ಎಂದರು.

ಸ್ವಯಂ ನಿವೃತ್ತಿಗೆ ಎಎಸ್‌ಪಿ ನಿರ್ಧಾರ

ನಡೆಗೆ ಎಲ್ಲೆಡೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ನಾರಾಯಣ ಭರಮನಿ ಅವರು 1994ರ ಬ್ಯಾಚ್‌ನ ಪೊಲೀಸ್ ಅಧಿಕಾರಿಯಾಗಿದ್ದರು. 2007ರಲ್ಲಿ ನಡೆದ ಕುಖ್ಯಾತ ರೌಡಿ ಪ್ರವೀಣ್ ಶಿಂತ್ರೆ ಎನ್‌ಕೌಂಟರ್‌ನ ನೇತೃತ್ವ ವಹಿಸಿದ್ದರು.

ಸ್ವಯಂ ನಿವೃತ್ತಿ ಅಂಗೀಕರಿಸಲ್ಲ: ಧಾರವಾಡ ಎಎಸ್‌ಪಿಯವರ ಸ್ವಯಂ ನಿವೃತ್ತಿಯನ್ನು ನಾವು ಅಂಗೀಕರಿಸುವುದಿಲ್ಲ. ಅವರಿಗೆ ಮತ್ತೆ ಪೋಸ್ಟಿಂಗ್ ಕೊಡುತ್ತೇವೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಆವತ್ತು ಉದ್ದೇಶಪೂರ್ವಕವಾಗಿ ಹಾಗೆ ಮಾಡಲಿಲ್ಲ. ಆ ಸಂದರ್ಭಕ್ಕೆ ಹಾಗೆ ನಡೆದುಕೊಂಡಿದ್ದಾರೆ ಎಂದರು.

10 ದಿನದಲ್ಲಿ ವರದಿ ಬರುವ ಸಾಧ್ಯತೆ

ಸಮಯದಲ್ಲಿ ರಾಜ್ಯ ಸರ್ಕಾರ ಈ ಹೇಳಿಕೆ ನೀಡಿದೆ. ರಾಜ್ಯ ಸರ್ಕಾರದ ಪರ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ, ಮುಂದಿನ 10 ದಿನಗಳಲ್ಲಿ ನ್ಯಾಯಾಂಗ ತನಿಖೆ ವರದಿ ಬರುವ ಸಾಧ್ಯತೆಯಿದೆ, ಅದನ್ನು ನ್ಯಾಯಾಲಯಕ್ಕೆ ಒದಗಿಸಲಾಗುವುದು, ಆದ್ದರಿಂದ ಅರ್ಜಿ ವಿಚಾರಣೆಯನ್ನು ಹತ್ತು ದಿನಗಳ ನಂತರಕ್ಕೆ ಮುಂದೂಡಬೇಕು ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಪ್ರಕರಣ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿರುವ ವಸ್ತುಸ್ಥಿತಿ ವರದಿ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿಯೇ ಏಕೆ ಇರಿಸಬೇಕು ಎಂದು ಅಡ್ವೋಕೇಟ್ ಜನರಲ್ ಅವರನ್ನು ಪ್ರಶ್ನಿಸಿತು. ಮ್ಯಾಜಿಸ್ಟೀರಿಯಲ್ ವಿಚಾರಣೆ ಅಥವಾ ನ್ಯಾಯಾಂಗ ಆಯೋಗ, ಸ್ಥಿತಿಗತಿ ವರದಿ ಬಳಸಿಕೊಳ್ಳಬಾರದು, ಸ್ವತಂತ್ರ ಹಾಗೂ ನಿಷ್ಪಕ್ಷಪಾತ ವಿಚಾರಣೆ ನಡೆಯಬೇಕಿದೆ, ಈ ಉದ್ದೇಶದಿಂದ ವರದಿ ಬಹಿರಂಗವಾಗಬಾರದು, ಅದನ್ನು ಮುಚ್ಚಿದ ಲಕೋಟೆಯಲ್ಲಿ ಇಡುವಂತೆ ಕೋರಲಾಗುತ್ತಿದೆ ಎಂಬ ಸಮಜಾಯಿಷಿ ನೀಡಿದರು.

ಸರಣಿ ಸಾವಿಗೂ ಕೋವಿಡ್ ಲಸಿಕೆಗೂ ಸಂಬಂಧವಿಲ್ಲ

ಎಂದು ಆರೋಗ್ಯ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ ನಡೆಸಿದ ಅಧ್ಯಯನಗಳು ಭಾರತದಲ್ಲಿ ಕೋವಿಡ್–19 ಲಸಿಕೆಗಳು ಸುರಕ್ಷಿತ ಮತ್ತು ಪರಿಣಾಮಕಾರಿ ಎಂದು ದೃಢ ಪಡಿಸುತ್ತವೆ ಎಂದು ಅದು ಹೇಳಿದೆ. ತಳಿಶಾಸ್ತ್ರ, ಜೀವನಶೈಲಿ, ಪರಿಸ್ಥಿತಿ ಗಳು ಮತ್ತು ಕೋವಿಡ್ ನಂತರದ ತೊಡಕು ಗಳು ಸೇರಿದಂತೆ ಹಲವು ಕಾರಣಗಳಿಂದ ಹಠಾತ್ ಹೃದ ಯಾಘಾತದ ಸಾವುಗಳು ಉಂಟಾಗಬಹುದು ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಐಸಿಎಂಆರ್ ಮತ್ತು ಎನ್‌ಸಿಡಿಸಿ, ವಿಶೇಷವಾಗಿ 18ರಿಂದ 45 ವರ್ಷ ವಯಸ್ಸಿನ ಯುವ ಜನರಲ್ಲಿ ಹಠಾತ್ ಸಾವುಗಳ ಹಿಂದಿನ ಕಾರಣಗಳನ್ನು ಅರ್ಥಮಾಡಿಕೊಳ್ಳಲು ಒಟ್ಟಾಗಿ ಕೆಲಸ ಮಾಡುತ್ತಿವೆ. ಇದನ್ನು ಅನ್ವೇಷಿಸಲು, ವಿಭಿನ್ನ ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಎರಡು ಪೂರಕ ಅಧ್ಯಯನಗಳನ್ನು ಕೈಗೊಳ್ಳಲಾಯಿತು. ಒಂದು ಹಿಂದಿನ ಅಂಕಿ–ಅಂಶ ಆಧರಿಸಿ ಮತ್ತು ಇನ್ನೊಂದು ನೈಜ ಸಮಯದ ಪರೀಕ್ಷೆಯನ್ನು ಒಳಗೊಂಡಿದೆ.

ಐಸಿಎಂಆರ್‌ನ ರಾಷ್ಟ್ರೀಯ ಸಾಂಕ್ರಾಮಿಕ ರೋಗಶಾಸ್ತ್ರ ಸಂಸ್ಥೆ ನಡೆಸಿದ ಮೊದಲ ಅಧ್ಯಯನವು ಭಾರತದಲ್ಲಿ 18 ರಿಂದ 45 ವರ್ಷ ವಯಸ್ಸಿನವರಲ್ಲಿ ಹಠಾತ್ ಸಾವುಗಳಿಗೆ ಸಂಬಂಧಿಸಿದ ಅಂಶಗಳು 'ಬಹು–ಕೇಂದ್ರಿತ ಹೊಂದಾಣಿಕೆಯ ಪ್ರಕರಣ ನಿಯಂತ್ರಣ ಅಧ್ಯಯನ' ಎಂಬ ಶೀರ್ಷಿಕೆಯನ್ನು ಹೊಂದಿತ್ತು.

ಈ ಅಧ್ಯಯನವನ್ನು 2023ರ ಮೇ ತಿಂಗಳಿನಿಂದ ಆಗಸ್ಟ್‌ವರೆಗೆ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 47 ತೃತೀಯ ಆರೈಕೆ ಆಸ್ಪತ್ರೆಗಳಲ್ಲಿ ನಡೆಸಲಾಯಿತು ಎಂದು ಹೇಳಿಕೆ ತಿಳಿಸಿದೆ. ಅಕ್ಟೋಬರ್ 2021 ಮತ್ತು ಮಾರ್ಚ್ 2023ರ ನಡುವೆ ಆರೋಗ್ಯವಂತರಾಗಿ ಕಂಡು ಬಂದ ವ್ಯಕ್ತಿಗಳಲ್ಲಿ ಅಧ್ಯಯನ ನಡೆಸಲಾಗಿದೆ.

ಕೋವಿಡ್–19 ಲಸಿಕೆಯು ಯುವ ವಯಸ್ಕರಲ್ಲಿ ಹಠಾತ್ ಸಾವಿನ ಅಪಾಯವನ್ನು ಹೆಚ್ಚಿಸುವುದಿಲ್ಲ ಎಂದು ಸಂಶೋಧನೆಗಳು ನಿರ್ಣಾಯಕವಾಗಿ ತೋರಿಸಿವೆ. 'ಯುವಕರಲ್ಲಿ ಹಠಾತ್ ಸಾವಿಗೆ ಕಾರಣವಾಗುವ ಅಂಶಗಳು' ಎಂಬ ಶೀರ್ಷಿಕೆಯ ಎರಡನೇ ಅಧ್ಯಯನವನ್ನು ಪ್ರಸ್ತುತ ದೆಹಲಿಯ ಏಮ್ಸ್, ಐಸಿಎಂಆರ್‌ನ ಸಹಯೋಗದೊಂದಿಗೆ ನಡೆಸುತ್ತಿದೆ.

ಕೋವಿಡ್ ಲಸಿಕೆ ಅಪಾಯವನ್ನು ಹೆಚ್ಚಿಸುವುದಿಲ್ಲ ಎಂದು ಕಂಡುಬಂದಿದೆ. ಆದರೆ ಆರೋಗ್ಯ ಸಮಸ್ಯೆಗಳು, ಆನುವಂಶಿಕ ಪ್ರವೃತ್ತಿ ಮತ್ತು ಅಪಾಯಕಾರಿ ಜೀವನ ಶೈಲಿಯ ಆಯ್ಕೆಗಳು ಹಠಾತ್ ಸಾವಿಗೆ ಪ್ರಮುಖ ಕಾರಣವಾಗುತ್ತದೆ ಎಂದು ಅಧ್ಯಯನ ತಿಳಿಸಿದೆ.

ಕೋವಿಡ್ ಲಸಿಕೆ ಹಠಾತ್ ಸಾವುಗಳಿಗೆ ಕಾರಣ ಎಂಬುದು ಸುಳ್ಳು ಹೇಳಿಕೆಗಳಾಗಿದ್ದು, ಜನರನ್ನು ದಾರಿತಪ್ಪಿಸುತ್ತವೆ. ಇದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ನಿರ್ಣಾಯಕ ಪುರಾವೆಗಳಿಲ್ಲದ ಊಹಾಪೋಹದ ಹೇಳಿಕೆಗಳು ಸಾಂಕ್ರಾಮಿಕ ಸಮಯದಲ್ಲಿ ಲಕ್ಷಾಂತರ ಜೀವಗಳನ್ನು ಉಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಲಸಿಕೆಗಳ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ದುರ್ಬಲಗೊಳಿಸುತ್ತವೆ ಎಂದಿದೆ.

ಕೋತಿಗಳ ಮಾರಣಹೋಮ


ನಿತ್ರಾಣಗೊಂಡಿರುವ 2 ಕೋತಿಗಳಿಗೆ ಚಿಕಿತ್ಸೆ ನೀಡುತ್ತಿರುವುದು.

ನಂತರ ಚಿರತೆಯೊಂದರ 4 ಕಾಲುಗಳನ್ನು ಕತ್ತರಿಸಿ ಹತ್ಯೆಗೈಯಲಾಗಿತ್ತು. ಈ ಘಟನೆ ಬೆನ್ನಲ್ಲೇ ಇದೀಗ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಫರ್ ಜೋನ್ ವ್ಯಾಪ್ತಿ ಕಂದೇಗಾಲ ರಸ್ತೆಯಿಂದ 100 ಮೀಟರ್ ಅಂತರದಲ್ಲಿ ವಿಷ ಹಾಕಿ ಕೊಂದ ಕೋತಿಗಳನ್ನು ಎರಡು ಪ್ರತ್ಯೇಕ ಸ್ಥಳದಲ್ಲಿ ಎಸೆಯಲಾಗಿದೆ.

ಮುಂಜಾನೆ ಆ ರಸ್ತೆಯಲ್ಲಿ ಸಂಚರಿಸುತ್ತಿದ್ದ ಗ್ರಾಮಸ್ಥರು ಮತ್ತು ರೈತರು ಚೀಲದಲ್ಲಿ ತುಂಬಿದ್ದ ಕೋತಿಗಳ ಕಳೇಬರ ತೆರೆದು ಪರಿಶೀಲಿಸಿದ್ದಾರೆ. ಅದರಲ್ಲಿ ಎರಡು ಕೋತಿಗಳು ಜೀವಂತವಾಗಿರುವುದನ್ನು ಗಮನಿಸಿದ್ದಾರೆ. ಅವುಗಳಿಗೆ ನೀರು ಕುಡಿಸಿ ಉಪಚರಿಸುತ್ತಿದ್ದಂತೆಯೇ ಅವುಗಳು ಸುಧಾರಿಸಿಕೊಂಡು ಮರವೇರಿ ಕುಳಿತವು. ಕೋತಿಗಳ ಮಾರಣಹೋಮದ ಸುದ್ದಿ ತಿಳಿಯುತ್ತಿದ್ದಂತೆ ಗುಂಡ್ಲುಪೇಟೆ ಬಫರ್ ಜೋನ್ ಪ್ರಭಾರ ಆರ್‌ಎಫ್‌ಓ ಶಿವಕುಮಾರ್(ಡಿಆರ್‌ಎಫ್) ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಸ್ಥಳೀಯರು ಹಾಗೂ ಪರಿಸರವಾದಿಗಳ ಸಹಕಾರದಿಂದ ಮರವೇರಿ ಕುಳಿತಿದ್ದ ಎರಡು ಕೋತಿಗಳನ್ನು ರಕ್ಷಣೆ ಮಾಡಿ ಪಶು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲು ನೆರವಾಗಿದ್ದಾರೆ. ಚಿಕಿತ್ಸೆ ನೀಡಿದ್ದರಿಂದ ನಿತ್ರಾಣಗೊಂಡಿದ್ದ ಎರಡು ಕೋತಿಗಳ ಆರೋಗ್ಯದಲ್ಲಿ ಶೇ.25ರಷ್ಟು ಸುಧಾರಣೆ ಕಂಡಿದ್ದು, ಆಸ್ಪತ್ರೆಯಲ್ಲೇ ಚಿಕಿತ್ಸೆ ಮುಂದುವರೆಸಲಾಗಿದೆ.

ಮರಣೋತ್ತರ ಪರೀಕ್ಷೆ: ಸ್ಥಳ ಮಹಜರು ನಡೆಸಿದ ನಂತರ ಮೃತಪಟ್ಟಿದ್ದ 18 ಕೋತಿಗಳ ಕಳೇಬರವನ್ನು ಅರಣ್ಯ ಇಲಾಖೆ ಸಿಬ್ಬಂದಿ ಮೇಲುಕಾಮನಹಳ್ಳಿ ಸಮೀಪದ ಸಂರಕ್ಷಣಾ ಕೇಂದ್ರಕ್ಕೆ ಕೊಂಡೊಯ್ದರು. ಅಲ್ಲಿ ಪಶುವೈದ್ಯಾಧಿಕಾರಿ ಡಾ.ವಾಸಿಂ ಮಿರ್ಜಾ ಮರಣೋತ್ತರ ಪರೀಕ್ಷೆ ನಡೆಸಿ, ಸ್ಯಾಂಪಲ್ ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನಿಸಲು ಕ್ರಮ ಕೈಗೊಂಡಿದ್ದಾರೆ.

ಪೂಜೆಯೊಂದಿಗೆ ಅಂತ್ಯಕ್ರಿಯೆ: ಮರಣೋತ್ತರ ಪರೀಕ್ಷೆ ಬಳಿಕ ಅರಣ್ಯ ಸಿಬ್ಬಂದಿ ಮೃತ ಕೋತಿಗಳ ಕಳೇಬರವನ್ನು ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ಈ ವೇಳೆ ಹಲವರು ಕಂಬನಿ ಮಿಡಿದರು. ಬಳಿಕ 18 ಕೋತಿಗಳ ಕಳೇಬರವನ್ನು ಸಾಮೂಹಿಕವಾಗಿ ಸುಡಲಾಯಿತು. ವಿಷ ಪ್ರಾಶನದಿಂದ ಮೃತಪಟ್ಟಿರುವುದರಿಂದ ಅವುಗಳನ್ನು ಬೇರೆ ಯಾವುದಾದರೂ ಪ್ರಾಣಿ ತಿಂದು ಅನಾಹುತಕ್ಕೀಡಾಗಬಹುದು ಎಂಬ ಮುಂದಾಲೋಚನೆಯಿಂದ ಸುಡುವ ಮೂಲಕ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮರುಗಿದ ಜನ: ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ರೈತಾಪಿ ವರ್ಗ ಕೋತಿಗಳನ್ನು 'ಹನುಮಂತ' ಎಂಬ ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಹೊಲ, ತೋಟದಲ್ಲಿ ಫಸಲು ಹಾನಿ ಮಾಡಿದರು ಕೋತಿಗಳಿಗೆ ಮಾರಣಾಂತಿಕ ಹಲ್ಲೆ ಮಾಡದೆ ಹೆದರಿಸಿ ಓಡಿಸುವ ಮನೋಭಾವ ಹೊಂದಿದ್ದಾರೆ. ಆದರೆ, 18 ಕೋತಿಗಳ ಮಾರಣ ಹೋಮದ ಸುದ್ದಿ ತಿಳಿಯುತ್ತಿದ್ದಂತೆ ಕಂದೇಗಾಲ, ಕೊಡಸೋಗೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಕೋತಿಗಳ ಸಾವಿಗೆ ಮರುಕ ವ್ಯಕ್ತಪಡಿಸಿದರು. ಅಲ್ಲದೆ, ಕೋತಿ ಕೊಂದವರಿಗೆ ತಕ್ಕ ಶಿಕ್ಷೆಯಾಗಲಿ ಎಂದು ಶಪಿಸಿದರು.

ನಾಳೆ ಆಗಸದಿಂದಲೇ ವಿದ್ಯಾರ್ಥಿಗಳೊಂದಿಗೆ ಗಗನಯಾತ್ರಿ ಶುಭಾಂಶು ಶುಕ್ಲಾ ಸಂವಾದ



ಬೆಂಗಳೂರು, ಜು.2– ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿರುವ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಶುಕ್ರವಾರ ಶಾಲಾ ವಿದ್ಯಾರ್ಥಿಗಳು ಹಾಗೂ ಇಸ್ರೋ ವಿಜ್ಞಾನಿ ಗಳೊಂದಿಗೆ ಹವ್ಯಾಸಿ ರೇಡಿಯೋ (ಹ್ಯಾಮ್ ರೇಡಿಯೋ) ಮುಖಾಂತರ ಶುಕ್ರವಾರ ಸಂವಾದ ನಡೆಸಲಿದ್ದಾರೆ.


ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ ಟೆಲಿಬ್ರಿಡ್ಜ್ ಮುಖಾಂತರ ಈ ಸಂವಾದ ನಡೆಸಲು ಯೋಜಿಸಿರುವುದಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿನ ಹವ್ಯಾಸಿ ರೇಡಿಯೋ ಸಂಸ್ಥೆ (ಎಆರ್‌ಐಎಸ್‌ಎಸ್) ತಿಳಿಸಿದೆ. ಭಾರತೀಯ ಕಾಲಮಾನ ಮಧ್ಯಾಹ್ನ 3.47ಕ್ಕೆ ಈ ಸಂವಾದ ಪ್ರಾರಂಭವಾಗಲಿದ್ದು, ವಿದ್ಯಾರ್ಥಿಗಳು ಹಾಗೂ ವಿಜ್ಞಾನಿಗಳೊಂದಿಗೆ ಶುಕ್ಲಾ ಅವರು 11ರಿಂದ 12 ನಿಮಿಷಗಳ ಕಾಲ ನೇರ ಸಂವಾದ ನಡೆಸಲಿದ್ದಾರೆ.

ಶುಭಾಂಶು ಅವರು ಪ್ರಶ್ನೆಗಳಿಗೆ ಉತ್ತರಿಸಲು ತೆಗೆದುಕೊಳ್ಳುವ ಸಮಯವನ್ನು ಅವಲಂಬಿಸಿ 15ರಿಂದ 16 ಪ್ರಶ್ನೆಗಳನ್ನು ಕೇಳುವ ನಿರೀಕ್ಷೆಗಳಿವೆ. ಈ ಸಂವಾದ ಸಾರ್ವಜನಿಕವಲ್ಲ, ಆಯ್ದ ವಿದ್ಯಾರ್ಥಿಗಳು ಸಂವಾದದಲ್ಲಿ ಭಾಗಿಯಾಗಲಿದ್ದು, ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಹ್ಯಾಕಾಶ ನಿಲ್ದಾಣದಲ್ಲಿ ಶುಭಾಂಶು ಅವರ ಪ್ರಯೋಗಗಳು ಮುಂದುವರೆದಿದ್ದು, ಬಾಹ್ಯಾಕಾಶದ ಭವಿಷ್ಯದ ಆಹಾರ ಮೂಲವೆಂದೇ ಬಣ್ಣಿಸಲಾದ ಸೂಕ್ಷ್ಮ ಹಾವಸೆ ಪ್ರಬೇಧಗಳ ಕುರಿತು ಭಾನುವಾರದಿಂದ ಅಧ್ಯಯನ ನಡೆಸಲು ಪ್ರಾರಂಭಿಸಿದ್ದಾರೆ. ಅಲ್ಲದೆ, ನ್ಯೂರೋ ಮೋಷನ್ ವರ್ಚುವಲ್ ರಿಯಾಲಿಟಿ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತಹ ದತ್ತಾಂಶ ಸಂಗ್ರಹಿಸುತ್ತಿದ್ದಾರೆ. ಹ್ಯಾಮ್ ರೇಡಿಯೋವನ್ನು ಅಧಿಕೃತವಾಗಿ ಹವ್ಯಾಸಿ ರೇಡಿಯೋ ಎಂದು ಕರೆಯಲಾಗುತ್ತದೆ. ಇದು ಪರವಾನಗಿ ಪಡೆದ ಉತ್ಸಾಹಿಗಳಿಂದ ನಿರ್ವಹಿಸಲ್ಪಡುವ ವಾಣಿಜ್ಯೇತರ ರೇಡಿಯೋ–ಸಂವಹನ ಸೇವೆಯಾಗಿದೆ. ಸಾಂಪ್ರದಾಯಿಕ ಸಂವಹನ ವಿಧಾನಗಳು ಲಭ್ಯವಿಲ್ಲದಿರುವಾಗ ವಿಪತ್ತುಗಳ ಸಮಯದಲ್ಲಿ ಸಂವಹನದ ವಿಶ್ವಾಸಾರ್ಹ ಮಾರ್ಗವೆಂದು ಪರಿಗಣಿಸಲಾಗಿದೆ.

ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದಿದ್ದ ಕಾಲ್ತುಳಿತ ಪ್ರಕರಣ

ಐಪಿಎಸ್ ಅಧಿಕಾರಿ ವಿಕಾಸ್‌ಕುಮಾರ್ ಅಮಾನತು ಆದೇಶ ಪ್ರಶ್ನಿಸಿ ಮೇಲ್ಮನವಿ: ಇಂದು ವಿಚಾರಣೆ



ಬೆಂಗಳೂರು,ಜು.2–ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದಿದ್ದ ಕಾಲ್ತುಳಿತ ದುರ್ಘಟನೆಯ ಹಿನ್ನೆಲೆಯಲ್ಲಿ ಕರ್ತವ್ಯ ಲೋಪದಡಿ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಅಮಾನತುಗೊಳಿಸಿದ್ದ ರಾಜ್ಯ ಸರ್ಕಾರದ ಆದೇಶ ರದ್ದುಪಡಿಸಿರುವ ಕೇಂದ್ರೀಯ ಆಡಳಿತಾತ್ಮಕ ನ್ಯಾಯ ಮಂಡಳಿ (ಸಿಎಟಿ) ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ಬುಧವಾರ ಬೆಳಗ್ಗೆ ಹೈಕೋರ್ಟ್ ದಿನದ ಕಲಾಪ ಆರಂಭವಾಗುತ್ತಿದ್ದಂತೆ ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಅವರು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಹಾಜರಾದರು. ಮೇಲ್ಮನವಿಗೆ ಸಂಬಂಧಿಸಿದಂತೆ ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ನಾಳೆ (ಜುಲೈ 3) ವಿಚಾರಣೆ ನಡೆಸುವುದಾಗಿ ತಿಳಿಸಿತು.

ಬೆಂಗಳೂರು ನಗರ ವಿವಿಗೆ ಡಾ.ಮನಮೋಹನ್ ಸಿಂಗ್ ಹೆಸರು

ಚಿಕ್ಕಬಳ್ಳಾಪುರ: ನಂದಿಬೆಟ್ಟದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೆಸರುಗಳ ಬದಲಾವಣೆಗೆ ತೀರ್ಮಾನ ಕೈಗೊಳ್ಳಲಾಗಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿವಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬೆಂಗಳೂರು ಉತ್ತರ ಜಿಲ್ಲೆ ಮತ್ತು ಬಾಗೇಪಲ್ಲಿ ತಾಲೂಕು ಕೇಂದ್ರದ ಹೆಸರನ್ನು ಭಾಗ್ಯನಗರ ಎಂದು ಮರು ನಾಮಕರಣ ಮಾಡಲು ನಿರ್ಣಯಿಸಲಾಯಿತು. 48 ವಿಷಯಗಳು ಸಭೆಯಲ್ಲಿ ಚರ್ಚೆಗೆ ಒಳಪಟ್ಟಿದ್ದು ಬೆಂಗಳೂರು ವಿಭಾಗದ ಜಿಲ್ಲೆಗಳ ವಿಷಯಗಳು ಶೇ.90ರಷ್ಟಿವೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಇದುವರೆಗೆ ಆಗಿರುವ ಪ್ರಗತಿ, ಆಗಬೇಕಾಗಿರುವ ಕ್ರಮಗಳು ಸೇರಿದಂತೆ ಹಲವು ವಿಷಯಗಳ ಕುರಿತು ಪರಿಶೀಲಿಸಲು ಸಚಿವ ಎಚ್.ಕೆ.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

ಕೆಎಸ್‌ಆರ್‌ಪಿ ಹೆಡ್ ಕಾನ್‌ಸ್ಟೇಬಲ್ ಪುತ್ರಿ ಆರ್.ಎನ್.ಬಿಂದುಮಣಿ ಈಗ ಮೈಸೂರು ನಗರ ಡಿಸಿಪಿ



ಮೈಸೂರು ನಗರ ಕಾನೂನು–ಸುವ್ಯವಸ್ಥೆ ಡಿಸಿಪಿಯಾಗಿ ಬುಧವಾರ ಅಧಿಕಾರ ವಹಿಸಿಕೊಂಡ ಆರ್.ಎನ್. ಬಿಂದುಮಣಿ ಅವರಿಗೆ ನಿರ್ಗಮಿತ ಡಿಸಿಪಿ ಎಂ.ಮುತ್ತುರಾಜ್ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದರು.

ಮೈಸೂರು, ಜು.2(ಆರ್‌ಕೆ)– ಮೈಸೂರು ನಗರ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿ ಐಪಿಎಸ್ ಅಧಿಕಾರಿ ಆರ್.ಎನ್.ಬಿಂದುಮಣಿ ಇಂದು ಅಧಿಕಾರ ವಹಿಸಿಕೊಂಡರು.

ದಾಖಲೆಗಳಿಗೆ ಸಹಿ ಮಾಡುವ ಮೂಲಕ ನಿರ್ಗಮಿತ ಡಿಸಿಪಿ ಎಂ.ಮುತ್ತುರಾಜ್ ಅವರು ನೂತನ ಡಿಸಿಪಿ ಬಿಂದುಮಣಿ ಅವರಿಗೆ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದರು. ಕೆಎಸ್‌ಆರ್‌ಪಿ 4ನೇ ಪಡೆಯಲ್ಲಿ ಹೆಡ್‌ಕಾನ್‌ಸ್ಟೇಬಲ್ ಆಗಿ ಸೇವೆ ಸಲ್ಲಿಸುತ್ತಿರುವ ನಾಗರಾಜ್ ಅವರ ಪುತ್ರಿಯಾದ ಬಿಂದುಮಣಿ, ಐಪಿಎಸ್ ಅಧಿಕಾರಿಯಾಗಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಈ ಸಂದರ್ಭ ಪ್ರತಿಕ್ರಿಯಿಸಿದ ಅವರು, ಮೈಸೂರಿನಂತಹ ಸಾಂಸ್ಕೃತಿಕ ನಗರಿಯಲ್ಲಿ ಡಿಸಿಪಿಯಾಗಿ ಕರ್ತವ್ಯ ನಿರ್ವಹಿಸುವ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಕಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು–ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಶಿಸ್ತಿನಿಂದ ಕರ್ತವ್ಯ ನಿರ್ವಹಿಸುತ್ತೇನೆ ಎಂದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಅಭಿನಂದನೆ



ಮೈಸೂರು–ಚಾಮರಾಜನಗರದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ ನಿರ್ದೇಶಕರಾಗಿ ಆಯ್ಕೆಯಾದ ಮೂಗನಹುಂಡಿ ಕೆಂಚಪ್ಪ ಅವರನ್ನು ದೊಡ್ಡಹುಂಡಿ ಗ್ರಾಮಸ್ಥರು ಆತ್ಮೀಯವಾಗಿ ಅಭಿನಂದಿಸಿದರು. ಧನಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ದೊಡ್ಡಹುಂಡಿ ಸೋಮಣ್ಣ, ಡಿ.ಸಿ.ಬಸವೇಗೌಡ, ಸಿ.ಚಿಕ್ಕಣ್ಣ, ಅಂಗಡಿ ನಾಗರಾಜು ಈ ವೇಳೆ ಇದ್ದರು.

ರಾಜ್ಯ ಮಟ್ಟದ ಪೊಲೀಸ್ ಕ್ರೀಡಾಕೂಟದಲ್ಲಿ ಮೈಸೂರು ನಗರ ಪೊಲೀಸರಿಗೆ ಬಹುಮಾನ

ಮೈಸೂರು, ಜು.2(ಆರ್‌ಕೆ)–ಬೆಂಗಳೂರಿನ ಕೋರಮಂಗಲದ ಕೆಎಸ್‌ಆರ್‌ಪಿ ಕ್ರೀಡಾಂಗಣದಲ್ಲಿ ಜೂನ್ 26ರಿಂದ 28ರವರೆಗೆ ನಡೆದ ರಾಜ್ಯ ಮಟ್ಟದ ವಾರ್ಷಿಕ ಪೊಲೀಸ್ ಕ್ರೀಡಾಕೂಟದಲ್ಲಿ ಮೈಸೂರಿನ ಪೊಲೀಸರು ಬಹುಮಾನಗಳನ್ನು ಗಳಿಸಿದ್ದಾರೆ.

ಹಗ್ಗ ಜಗ್ಗಾಟ ಮತ್ತು ಹ್ಯಾಂಡ್‌ಬಾಲ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದೆ. 100 ಮತ್ತು 200 ಮೀಟರ್ ಓಟದ ಸ್ಪರ್ಧೆಯಲ್ಲಿ ಕೆ.ಆರ್.ಠಾಣೆ ಎಎಸ್‌ಐ ಅಮರನಾಥ್ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದರೆ, ಸಿಎಆರ್‌ನ ವಿಜಯಶಂಕರ್ ತ್ರಿವಿಧ ಜಿಗಿತದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಕುವೆಂಪುನಗರ ಠಾಣೆಯ ಕೆ.ಅಶ್ವಿನಿ ಎತ್ತರ ಜಿಗಿತದಲ್ಲಿ ಪ್ರಥಮ, 100 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಗಳಿಸಿದರೆ, ವಿಜಯನಗರ ಠಾಣೆಯ ಆರ್.ಸವಿತ ಡಿಸ್ಕಸ್ ಎಸೆತದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ ಎಂದು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಭಿರುಚಿ ಪ್ರಕಾಶನದ 30ನೇ ಸಂಭ್ರಮ ನಾಳೆ

ಮೈಸೂರು, ಜು.2(ಬಿಎಲ್‌ಯು)– ಮೈಸೂರಿನ ಸರಸ್ವತಿಪುರಂನ ಅಭಿರುಚಿ ಪ್ರಕಾಶನದ 30ನೇ ಸಂಭ್ರಮ ಕಾರ್ಯಕ್ರಮ ಜು.4ರಂದು ಸಂಜೆ 4 ಗಂಟೆಗೆ ನಡೆಯಲಿದೆ. ನಗರದ ಜಯಲಕ್ಷ್ಮಿಪುರಂನ ಕೊಡಗು ಸಹಕಾರ ಸಂಘದಲ್ಲಿ ನಡೆಯುವ ಕಾರ್ಯಕ್ರಮವನ್ನು ಚಿತ್ರನಟ ಪ್ರಕಾಶ್ ರೈ ಉದ್ಘಾಟಿಸುವರು. ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಶ್ತಾಕ್, ಪ್ರಾಧ್ಯಾಪಕಿ ಡಾ.ಲತಾ ಮೈಸೂರು, ರಾಜ್ಯ ಮಾಹಿತಿ ಆಯುಕ್ತ ಡಾ.ಹರೀಶ್‌ಕುಮಾರ್, ಹಿರಿಯ ಲೇಖಕ ಪ್ರೊ.ಪಿ.ವಿ.ನಂಜರಾಜ ಅರಸ್, ಹಿರಿಯ ಪ್ರಕಾಶಕ ಪ್ರೊ.ಬಿ.ಎನ್.ಶ್ರೀರಾಮ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಅಂದು ಬಾನು ಮುಶ್ತಾಕ್ ಅವರ 'ಎದೆಯ ಹಣತೆ' 3ನೇ ಮುದ್ರಣ, 'ಹಸೀನಾ ಮತ್ತು ಇತರ ಕಥೆಗಳು' ನಾಲ್ಕನೇ ಮುದ್ರಣ, ಪ್ರೊ. ಪಿ.ವಿ.ನಂಜರಾಜ ಅರಸ್ ಅವರ 'ಇತಿಹಾಸ ಸೃಷ್ಟಿಸಿದ ಪುಟ್ಟ ಹಳ್ಳಿ ಹದಿನಾರು', 'ಟೀಪೂ ಮಾನ್ಯತೆ ಸಿಗದ ಸುಲ್ತಾನ್; ಅಂದು–ಇಂದು' ಎರಡನೇ ಮುದ್ರಣ ಪುಸ್ತಕ ಬಿಡುಗಡೆಯಾಗಲಿದೆ.

ನಾಳೆ 'ಕ್ಯಾಪಿಟಲ್ ಸಿಟಿ' ಬಿಡುಗಡೆ

ಮೈಸೂರು, ಜು.2(ಜಿಎ)–ನಟ ರಾಜೀವ್ ರೆಡ್ಡಿ ಹಾಗೂ ಖ್ಯಾತ ಖಳನಟ ರವಿಶಂಕರ್ ಅಭಿನಯದ ವಿಭಿನ್ನ ಕಥಾ ಹಂದರದ 'ಕ್ಯಾಪಿಟಲ್ ಸಿಟಿ' ಚಲನಚಿತ್ರ ಜು.4 ರಂದು ರಾಜ್ಯಾದ್ಯಂತ ಬಿಡುಗಡೆ ಕಾಣುತ್ತಿದೆ ಎಂದು ನಿರ್ದೇಶಕ ಅನಂತರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಕ–ತಮ್ಮ– ತಂದೆ–ಮಗಳ ಭಾವನಾತ್ಮಕ ಸಂಬಂಧ ಆಧಾರಿತ ಸಿನಿಮಾ. ಇದು 5 ಭಾಷೆಗಳಲ್ಲಿ ಮೂಡಿಬಂದಿದ್ದು, ಸುಮಾರು 200 ಪರದೆಗಳಲ್ಲಿ ತೆರೆ ಕಾಣಲಿದೆ. 25 ಮಂದಿ ಒಟ್ಟುಗೂಡಿ ನಿರ್ಮಿಸಿರುವ ಚಿತ್ರ ಇದಾಗಿದ್ದು, ಪ್ರೇರಣಾ ಸಿನಿಮಾದ ನಾಯಕಿ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಉದ್ದೇಶದ ಸಿನಿಮಾ ಇದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಯಕ ನಟ ರಾಜೀವ್ ರೆಡ್ಡಿ, ಗುಣಶೇಖರ್, ನಿರ್ಮಾಪಕರು ಟಿ.ಎ. ಕೃಷ್ಣಮೂರ್ತಿ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಗುಣಮಟ್ಟವಲ್ಲದ ನೀರು ಪೂರೈಕೆ

ಆರೋಗ್ಯ ಸುರಕ್ಷತೆ, ಔಷಧಿ ಆಡಳಿತ ಅಧಿಕಾರಿಗಳ ದಿಢೀರ್ ಭೇಟಿ; ಕುಡಿಯುವ ನೀರಿನ ಮಾದರಿ ಸಂಗ್ರಹ



ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತದ ಆಯುಕ್ತ ಕೆ.ಶ್ರೀನಿವಾಸ್ ಅವರ ಆದೇಶದ ಮೇರೆಗೆ ಮೈಸೂರಿನಲ್ಲಿ ಬೀದಿಬದಿ ವ್ಯಾಪಾರಸ್ಥರಿಗೆ ಅರಿವು ಕಾರ್ಯಾಗಾರ ಆರಂಭಿಸಲಾಗಿದೆ.

ಮೈಸೂರು, ಜು.2(ಬಿಎಲ್‌ಯು)– ಮೈಸೂರಿನ ಹೋಟೆಲ್‌ಗಳ ಕುಡಿಯುವ ನೀರಿನ ಗುಣಮಟ್ಟ ಕಳಪೆಯಾಗಿದೆ ಎಂಬ ದೂರಿನ ಮೇರೆಗೆ ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ನಾಳೆಯಿಂದ (ಜುಲೈ 3) ಮೈಸೂರಿನ ಹೋಟೆಲ್‌ಗಳ ಕುಡಿಯುವ ನೀರಿನ ಮಾದರಿ ಸಂಗ್ರಹಿಸುತ್ತಿದೆ.

ಪ್ರತಿಯೊಂದು ಹೋಟೆಲ್‌ನವರು ಗ್ರಾಹಕರಿಗೆ ನೀಡುವ ಕುಡಿಯುವ ನೀರನ್ನು ಕಡ್ಡಾಯವಾಗಿ ಪ್ರಯೋಗಾಲಯಕ್ಕೆ ಕಳುಹಿಸಿ, ತಪಾಸಣೆಗೊಳಪಡಿಸಬೇಕು. ಪ್ರಯೋಗಾಲಯ ವೆಚ್ಚವನ್ನು ಹೋಟೆಲ್‌ನವರೇ ಭರಿಸಬೇಕು. ಕುಡಿಯುವ ನೀರಿನ ಗುಣಮಟ್ಟ ಉತ್ತಮವಾಗಿದೆ ಎಂಬ ಪ್ರಯೋಗಾಲಯದ ವರದಿಯನ್ನು ಹೋಟೆಲ್‌ನಲ್ಲಿ ಇಟ್ಟುಕೊಂಡಿರಬೇಕು. ವರ್ಷಕ್ಕೊಮ್ಮೆ ಪ್ರತಿಯೊಂದು ಹೋಟೆಲ್‌ನವರು ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮ ಇದಾಗಿದೆ.

ನಗರಪಾಲಿಕೆಯ ಸಂಬಂಧಿಸಿದ ಅಧಿಕಾರಿಗಳು ಹೋಟೆಲ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಪ್ರಯೋಗಾಲಯದ ವರದಿ ತೋರಿಸಬೇಕು. ಇದನ್ನು ಪಾಲಿಸದಿದ್ದರೆ ದಂಡ ವಿಧಿಸುವ ನಿಯಮ ಜಾರಿಗೆ ತರಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

ಈಗ ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ಅಧಿಕಾರಿಗಳು ನಾಳೆ ಹೋಟೆಲ್‌ಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಮಾದರಿ ಸಂಗ್ರಹಿಸಿ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಲಿದ್ದಾರೆ. ಒಂದು ವೇಳೆ ಕುಡಿಯುವ ನೀರಿನಲ್ಲಿ ಗುಣಮಟ್ಟ ಇಲ್ಲವೆಂದರೆ ಇಲಾಖೆಯ ಆಯುಕ್ತರ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ.

ಸ್ವಚ್ಛತೆ ಕಾಪಾಡುವಂತೆ ಫಾಸ್ಟ್‌ಫುಡ್‌ನವರಿಗೆ ಕಟ್ಟಾಜ್ಞೆ: ಫಾಸ್ಟ್‌ಫುಡ್ ಸೇರಿದಂತೆ ಬೀದಿಬದಿ ಆಹಾರ ತಯಾರಿಕೆಯ ಸ್ಥಳ ಸ್ವಚ್ಛವಾಗಿಡಬೇಕು ಎಂದು ಸೂಚನೆ ನೀಡಲು ವ್ಯಾಪಾರಸ್ಥರಿಗೆ ಅರಿವು ಕಾರ್ಯಾಗಾರ ಆರಂಭಿಸಲಾಗಿದೆ. ಹಂತ ಹಂತವಾಗಿ ಎಲ್ಲಾ ಬಡಾವಣೆಗಳಲ್ಲಿ ಅರಿವು ಕಾರ್ಯಾಗಾರ ನಡೆಸಿ ಮೊದಲು ಎಫ್‌ಎಸ್‌ಎಸ್‌ಐಐ ಮಾನದಂಡ ಪಾಲಿಸುವಂತೆ ಸೂಚನೆ ನೀಡಲಾಗುವುದು. ವ್ಯಾಪಾರಸ್ಥರು ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ದಂಡ ವಿಧಿಸಲಾಗುವುದು. ಈ ಮೂಲಕ ಬೀದಿಬದಿ ಆಹಾರ ಕೂಡ ಗುಣಮಟ್ಟದಲ್ಲಿರಬೇಕು ಎಂದು ಆಹಾರ ಇಲಾಖೆ ಇಂತಹ ಕ್ರಮ ಕೈಗೊಂಡಿದೆ. ಮೈಸೂರು ನಗರದಲ್ಲಿ 252 ಅಂಗನವಾಡಿ ಕೇಂದ್ರಗಳಿದ್ದು, ಇಲ್ಲಿನ ಆಹಾರ ಮಾದರಿಯನ್ನು ನಾಳೆ ಸಂಗ್ರಹ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಒಂದು ವೇಳೆ ಅಂಗನವಾಡಿಯ ಆಹಾರ ಗುಣಮಟ್ಟದಲ್ಲಿಲ್ಲ ಎಂದು ಪ್ರಯೋಗಾಲಯದ ವರದಿಯಿಂದ ತಿಳಿದು ಬಂದರೆ ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತದ ಆಯುಕ್ತ ಶ್ರೀನಿವಾಸ್ ಅವರಿಗೆ ವರದಿ ನೀಡಲಾಗುವುದು. ತರುವಾಯ ಆಯುಕ್ತರ ಆದೇಶದ ಮೇರೆಗೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತದ ಅಂಕಿತ ಅಧಿಕಾರಿ ಡಾ.ಎಸ್.ಎನ್.ರವೀಂದ್ರ ತಿಳಿಸಿದ್ದಾರೆ.

ಎಫ್‌ಎಸ್‌ಎಸ್‌ಎಐ ನಿಯಮ ಪಾಲಿಸದಿದ್ದರೆ ದಂಡಾಸ್ತ್ರ

ಸ್ವಚ್ಛತೆ ಕಾಪಾಡಿಕೊಂಡು ಗುಣಮಟ್ಟದ ಆಹಾರ ಪೂರೈಕೆ ಮಾಡುವಂತೆ ಮೈಸೂರಿನಲ್ಲಿರುವ ಫಾಸ್ಟ್‌ಫುಡ್ ಸೇರಿದಂತೆ ಬೀದಿಬದಿ ವ್ಯಾಪಾರಸ್ಥರಿಗೆ ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ಕಟ್ಟಾಜ್ಞೆ ಮಾಡಿದೆ. ನಿಯಮ ಉಲ್ಲಂಘನೆ ಮಾಡಿದರೆ ದಂಡಾಸ್ತ್ರ ಪ್ರಯೋಗ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತದ ಆಯುಕ್ತ ಕೆ.ಶ್ರೀನಿವಾಸ್ ಅವರ ಆದೇಶದ ಮೇರೆಗೆ ಮೈಸೂರಿನಲ್ಲಿ ಬೀದಿಬದಿ ವ್ಯಾಪಾರಸ್ಥರಿಗೆ ಅರಿವು ಕಾರ್ಯಾಗಾರ ಆರಂಭಿಸಲಾಗಿದೆ. ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಫಾಸ್ಟ್‌ಫುಡ್ ಸೇರಿದಂತೆ ಬೀದಿಬದಿ ಆಹಾರ ತಯಾರಕರನ್ನು ಒಂದೆಡೆ ಸೇರಿಸಿದ್ದ ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ಅಧಿಕಾರಿಗಳು ಸ್ವಚ್ಛತೆ ಹಾಗೂ ಗುಣಮಟ್ಟದ ಆಹಾರ ತಯಾರಿಕೆ ಬಗ್ಗೆ ಪಾಠ ಮಾಡಿದ್ದಾರೆ.

ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತದ ಅಂಕಿತ ಅಧಿಕಾರಿ ಡಾ.ಎಸ್.ಎಲ್. ರವೀಂದ್ರ ಎಫ್‌ಎಸ್‌ಎಸ್‌ಎಐ ಮಾನದಂಡದ ಬಗ್ಗೆ ವ್ಯಾಪಾರಸ್ಥರಿಗೆ ಮಾಹಿತಿ ನೀಡಿದ್ದಾರೆ.


ಆಹಾರ ತಯಾರಿಸುವ ಸ್ಥಳದ ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು, ಆಹಾರ ತಯಾರು ಮಾಡುವ ವ್ಯಕ್ತಿ ಕಡ್ಡಾಯವಾಗಿ ಸ್ನಾನ ಮಾಡಿ ಶುಭ್ರವಾದ ಬಟ್ಟೆ ಧರಿಸಬೇಕು, ಆಹಾರದ ಮೇಲೆ ಕೂದಲು ಬೀಳದಂತೆ ಏರ್ ನೆಟ್ ಹಾಗೂ ಏಪ್ರಾನ್ ಧರಿಸಬೇಕು. ಜೊತೆಗೆ ಕೈಗೆ ಗ್ಲೌಸ್ ಹಾಕಿಕೊಳ್ಳಬೇಕು, ಆಹಾರ ತಯಾರಿಕೆಯಲ್ಲಿ ರಾಸಾಯನಿಕ ಬಣ್ಣ ಬಳಸಬಾರದು ಎಂದು ಸೂಚನೆ ನೀಡಿದ್ದಾರೆ.

ನಾವು ಈಗ ಸೂಚನೆ ನೀಡಿದ ನಿಯಮಗಳು ಎಫ್‌ಎಸ್‌ಎಸ್‌ಎಐ ಮಾನದಂಡಗಳಾಗಿದ್ದು, ಪ್ರತಿಯೊಬ್ಬ ಬೀದಿಬದಿ ಆಹಾರ ತಯಾರಕ ಇದನ್ನು ಕಡ್ಡಾಯವಾಗಿ ಅನುಸರಿಸಬೇಕು. ಎಫ್‌ಎಸ್‌ಎಸ್‌ಎಐ ಮಾನದಂಡ ಅನುಸರಿಸದೆ ಸ್ವಚ್ಛತೆ ಕಾಪಾಡದ ಹಲವು ಬೀದಿಬದಿ ಆಹಾರ ತಯಾರಕರಿಗೆ ಈಗಾಗಲೇ ದಂಡ ವಿಧಿಸಲಾಗಿದೆ. ಈ ಮೂಲಕ ಮೊದಲು ಎಚ್ಚರಿಕೆ ನೀಡಲಾಗುವುದು. ಆದರೂ ವ್ಯಾಪಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಎಚ್ಚೆತ್ತುಕೊಳ್ಳದಿದ್ದರೆ ದಂಡಾಸ್ತ್ರ ಪ್ರಯೋಗಿಸಲಾಗುವುದು ಎಂದು ಡಾ.ರವೀಂದ್ರ ಎಚ್ಚರಿಕೆ ನೀಡಿದ್ದಾರೆ.

ಬೀದಿಬದಿ ಆಹಾರ ತಯಾರಕರು ಕಡ್ಡಾಯವಾಗಿ ನಗರಪಾಲಿಕೆಯಿಂದ ಲೈಸೆನ್ಸ್ ಪಡೆಯಬೇಕಿದೆ. ಈ ಮೊದಲು ಲೈಸೆನ್ಸ್‌ಗೆ ವರ್ಷಕ್ಕೆ 100 ರೂ. ಶುಲ್ಕ ನಿಗದಿ ಮಾಡಲಾಗಿತ್ತು. ಆದರೆ ಈಗ ಲೈಸೆನ್ಸ್ ಪಡೆಯಲು ವಿನಾಯಿತಿ ನೀಡಲಾಗಿದೆ. ಈ ಮೂಲಕ ಬೀದಿಬದಿ ವ್ಯಾಪಾರಿಗಳನ್ನು ಕಾನೂನು ಚೌಕಟ್ಟಿನ ಒಳಗೆ ತರಲಾಗಿದೆ. ವ್ಯಾಪಾರಸ್ಥರು ಏನಾದರೂ ಲೋಪ ಎಸಗಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಲೈಸೆನ್ಸ್‌ನಲ್ಲಿರುವ ಮಾಹಿತಿಗಳು ಪೂರಕ ದಾಖಲೆ ಒದಗಿಸುತ್ತದೆ.

ಈಗಾಗಲೇ ಬೀದಿಬದಿ ವ್ಯಾಪಾರಿಗಳಿಗೆ ಉಚಿತವಾಗಿ ಲೈಸೆನ್ಸ್ ನೀಡುವ ಕಾರ್ಯ ಆರಂಭವಾಗಿದೆ. ಹಂತ ಹಂತವಾಗಿ ಮೈಸೂರಿನ ಎಲ್ಲಾ ಬಡಾವಣೆಯ ಬೀದಿಬದಿ ವ್ಯಾಪಾರಿಗಳಿಗೆ ಲೈಸೆನ್ಸ್ ನೀಡಲಾಗುವುದು.

ಮೈಸೂರು ವಾಣಿವಿಲಾಸ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ ಕಾರ್ಯವೈಖರಿ ಬಗ್ಗೆ ತಿಳುವಳಿಕೆ



ವಾಣಿವಿಲಾಸ ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ ಕಾರ್ಯವೈಖರಿ ಬಗ್ಗೆ ಸ್ಥಳದಲ್ಲೇ ತಿಳುವಳಿಕೆ ನೀಡಲಾಯಿತು.

ಮೈಸೂರು,ಜು.2(ಆರ್‌ಕೆ)–ಮೈಸೂರಿನ ವಾಣಿವಿಲಾಸ ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್ (TMC) ಕಾರ್ಯವೈಖರಿ ಬಗ್ಗೆ ಸ್ಥಳದಲ್ಲೇ ತಿಳುವಳಿಕೆ ನೀಡಲಾಯಿತು.

ನಜರ್‌ಬಾದಿನ ಪೊಲೀಸ್ ಕಮಿಷ್ನರ್ ಕಚೇರಿಯಲ್ಲಿರುವ ಟಿಎಂಸಿಗೆ ಕರೆದೊಯ್ದು ಮೈಸೂರು ನಗರದಾದ್ಯಂತ ಅಳವಡಿಸಿರುವ ಸಿಸಿ ಕ್ಯಾಮರಾಗಳು ಸೆರೆಹಿಡಿಯುವ ದೃಶ್ಯಾವಳಿಗಳನ್ನು ಕಂಪ್ಯೂಟರ್ ಸಿಸ್ಟಂಗಳಲ್ಲಿ ವೀಕ್ಷಿಸುವ ಸಿಬ್ಬಂದಿ, ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ನಂಬರ್ ಪ್ಲೇಟ್‌ಗಳನ್ನು ಜೂಮ್ ಮಾಡಿ ನೋಟ್ ಮಾಡಿಕೊಂಡು ನೋಟಿಸ್ ಜನರೇಟ್ ಮಾಡಿ ವಾಹನ ಮಾಲೀಕರಿಗೆ ಸ್ವಯಂಚಾಲಿತ ಚಲನ್ ರವಾನಿಸುವ ವಿಧಾನಗಳನ್ನು ಪ್ರಸ್ತುತಪಡಿಸಲಾಯಿತು. ಆಧುನಿಕ ಸಂಚಾರ ನಿರ್ವಹಣಾ ತಂತ್ರಜ್ಞಾನಗಳು, ಪ್ರಕ್ರಿಯೆ, ಅಪಘಾತ ಮತ್ತು ಸಂಚಾರ ಉಲ್ಲಂಘನೆಯಾದಾಗ ಸಂಚಾರ ಪೊಲೀಸರು ಫೀಲ್ಡ್ ಟ್ರಾಫಿಕ್ ವಯಲೇಷನ್ ರಿಪೋರ್ಟ್ (FTVR) ವ್ಯವಸ್ಥೆ ಅಳವಡಿಸಿಕೊಂಡು ಹೇಗೆ ಅಪ್‌ಲೋಡ್ ಮಾಡುತ್ತಾರೆ ಎಂಬುದರ ಬಗ್ಗೆ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸಿದ್ದೇಶ್ ಅವರು ವಿದ್ಯಾರ್ಥಿಗಳಿಗೆ ವಿವರಿಸಿದರು.

ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ITMS) ಕಾರ್ಯ ನಿರ್ವಹಣೆ, ಸಂಚಾರ ನಿಯಂತ್ರಣ, ಡೇಟಾ ಸಂಗ್ರಹ, ನಿಯಂತ್ರಣ ಕೊಠಡಿಗೆ ಮಾಹಿತಿ ರವಾನೆ, ಸ್ಮಾರ್ಟ್ ಸಂಚಾರ ಸುಗಮ ವ್ಯವಸ್ಥೆ ಹಾಗೂ ಆಧುನಿಕ ಪೊಲೀಸರು ತಂತ್ರಜ್ಞಾನ ಬಳಸಿ ಸುಗಮ ಸಂಚಾರದ ಬಗ್ಗೆ ಕಾರ್ಯನಿರ್ವಹಿಸುವ ಕುರಿತಂತೆಯೂ ಜಾಗೃತಿ ಮೂಡಿಸಲಾಯಿತು.

ನೇರ ಸಂದರ್ಶನ

ಮೈಸೂರು: ಪಿ.ಎಂ. ಅಭಿವ್ ಯೋಜನೆಯಡಿ ಮೈಸೂರು ಜಿಲ್ಲೆಯ ಕ್ಲಿನಿಕ್‌ಗಳಲ್ಲಿ ಪ್ರಸ್ತುತ ಖಾಲಿ ಇರುವ 11 ಎಂ.ಬಿ.ಬಿ.ಎಸ್. ವೈದ್ಯರ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಜು.7ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಮೈಸೂರು ಇವರನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಇಂಡಿಯನ್ ಆಯಿಲ್ ಡಿಪೋ ಸ್ಥಳಾಂತರಿಸದಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿಂದ ಬೆಂಗಳೂರಿಗೆ ಇಂಡಿಯನ್ ಆಯಿಲ್ ಡಿಪೋ ಸ್ಥಳಾಂತರ ಮಾಡದಂತೆ ಆಗ್ರಹಿಸಿ, ಡೀಲರ್ಸ್ ಅಸೋಸಿಯೇಷನ್ ಸದಸ್ಯರು ಬುಧವಾರ ಮೇಟಗಳ್ಳಿಯಲ್ಲಿರುವ ಆಯಿಲ್ ಡಿಪೋ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು, ಜು.2(ಎಂಟಿವೈ)– ಮೈಸೂರಿನ ಮೇಟಗಳ್ಳಿಯಲ್ಲಿರುವ ಇಂಡಿಯನ್ ಆಯಿಲ್ ಡಿಪೋ ಬೆಂಗಳೂರಿಗೆ ಸ್ಥಳಾಂತರ ಮಾಡುವ ಪ್ರಕ್ರಿಯೆ ಕೈಬಿಡುವಂತೆ ಆಗ್ರಹಿಸಿ ಫೆಡರೇಷನ್ ಆಫ್ ಮೈಸೂರು ಪೆಟ್ರೋಲಿಯಂ ಟ್ರೇಡರ್ಸ್ ಸದಸ್ಯರು ಪ್ರತಿಭಟಿಸಿದರು.

ಮೈಸೂರಿನ ಮೇಟಗಳ್ಳಿಯ ಇಂಧನ ಘಟಕದಲ್ಲಿರುವ ಇಂಡಿಯನ್ ಆಯಿಲ್ ಡಿಪೋವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಹುನ್ನಾರ ನಡೆಸಲಾಗುತ್ತಿದೆ. ಇದರಿಂದ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪೆಟ್ರೋಲ್, ಡೀಸಲ್ ಬಂಕ್ ಮಾಲೀಕರಿಗೆ ತೈಲ ಸರಬರಾಜು ಮಾಡಲು ತೊಂದರೆಯಾಗುತ್ತದೆ. ಮೂರು ಜಿಲ್ಲೆಗಳಿಂದ 150ಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳು ಮೈಸೂರಿನಲ್ಲಿರುವ ಡಿಪೋವನ್ನೇ ಅವಲಂಬಿಸಿವೆ. ಈ ಹಿನ್ನೆಲೆಯಲ್ಲಿ ಮೈಸೂರಿಂದ ಬೆಂಗಳೂರಿಗೆ ಡಿಪೋ ಸ್ಥಳಾಂತರ ಪ್ರಸ್ತಾಪ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಮೈಸೂರಿನ ಡಿಪೋ ಸ್ಥಗಿತಗೊಂಡರೆ ಮೈಸೂರಿನ ಇಂಡಿಯನ್ ಆಯಿಲ್ ಡೀಲರ್‌ಗಳು ಬೆಂಗಳೂರಿನ ಡಿಪೋಗೆ ತೆರಳಬೇಕಾಗುತ್ತದೆ. ಇದರಿಂದ ಡೀಲರ್‌ಗಳಿಗೆ ತೊಂದರೆಯಾಗುವುದಲ್ಲದೆ, ಗ್ರಾಹಕರಿಗೆ ಇಂಧನ ಪೂರೈಕೆಯಲ್ಲೂ ವ್ಯತ್ಯಯವಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕಳೆದ 60 ವರ್ಷದಿಂದಲೂ ಮೈಸೂರಲ್ಲೇ ಇರುವ ಇಂಡಿಯನ್ ಆಯಿಲ್ ಡಿಪೋ ಸೇವೆ ಮುಂದುವರೆಸಬೇಕು. ಆ ಮೂಲಕ ಡೀಲರ್ಸ್‌ಗಳ ಹಿತ ಕಾಯಬೇಕು. ಈಗಾಗಲೇ ವಿವಿಧ ಸಮಸ್ಯೆಗಳಿಂದ ಡೀಲರ್ಸ್‌ಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದೀಗ ಡಿಪೋ ಬೆಂಗಳೂರಿಗೆ ಸ್ಥಳಾಂತರಗೊಂಡರೆ ಮತ್ತಷ್ಟು ಸಮಸ್ಯೆಗೆ ತುತ್ತಾಗಲಿದ್ದಾರೆ ಎಂದು ಪ್ರತಿಭಟನಾಕಾರರು ಅಳಲು ತೋಡಿಕೊಂಡರು.

ಪ್ರತಿಭಟನೆಯಲ್ಲಿ ಡೀಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳಾದ ಎಸ್.ಆರ್.ಪಾಟೀಲ್, ಎಂ.ಎಸ್.ಲೋಕೇಶ್, ಶಶಿಕಲಾ ನಾಗರಾಜ್, ರವಿಶಂಕರ್, ಎಸ್.ಕೆ.ದಿನೇಶ್, ಬಸವೇಗೌಡ, ಶ್ರೀಕಂಠಪ್ರಸಾದ್, ರವಿಶಂಕರ್, ರಂಜಿತ್ ಹೆಗ್ಡೆ, ಹರ್ಷ, ಹೆಚ್.ಎಸ್.ಗುರುಸ್ವಾಮಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ದೇಶ - ವಿದೇಶ

ತನ್ನ ಮನೆಯಲ್ಲೇ ಶವವಾಗಿ ಪತ್ತೆಯಾದ ಖ್ಯಾತ ನೀಲಿಚಿತ್ರ ತಾರೆ



ಲಾಸ್ ಏಂಜಲೀಸ್: ಲಾಸ್ ಏಂಜಲೀಸ್‌ನಲ್ಲಿ ನೀಲಿ ಚಿತ್ರೋದ್ಯಮದಲ್ಲಿ ಸಂಚಲನ ಮೂಡಿಸಿದ ನಟಿ ಕೈಲೀ ಪೇಜ್ ಅವರು ಲಾಸ್ ಏಂಜಲೀಸ್‌ನ ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಲಾಸ್ ಏಂಜಲೀಸ್ ಕೌಂಟಿ ವೈದ್ಯಕೀಯ ಪರೀಕ್ಷಕರ ಪ್ರಕಾರ ಅವರ ಸಾವಿಗೆ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಸದ್ಯ ತನಿಖೆ ನಡೆಯುತ್ತಿದೆ. ನೆಟ್‌ಫ್ಲಿಕ್ಸ್‌ನ ಸಾಕ್ಷ್ಯಚಿತ್ರ ಸರಣಿ 'ಹಾಟ್ ಗರ್ಲ್ಸ್ ವಾಂಟೆಡ್: ಟರ್ನ್ಡ್ ಆನ್'ನಲ್ಲಿ ಕಾಣಿಸಿಕೊಂಡ ಕೈಲೀ ಖ್ಯಾತಿ ಗಳಿಸಿದ್ದರು. ಕೈಲೀ ಪೇಜ್ ನಿಜ ಹೆಸರು ಕೈಲೀ ಪೈಲಾಂಟ್. ಒಕ್ಲಹೋಮಾದ ತುಲ್ಸಾದಲ್ಲಿ ಜನಿಸಿದರು. 2016ರಲ್ಲಿ ಆಕೆ ನೀಲಿ ಚಲನಚಿತ್ರೋದ್ಯಮಕ್ಕೆ ಪ್ರವೇಶಿಸಿದರು. ಶೀಘ್ರದಲ್ಲೇ 'ವಿಕ್ಸೆನ್ ಮೀಡಿಯಾ ಗ್ರೂಪ್', 'ಬ್ರೇಜರ್ಸ್' ಮತ್ತು 'ನಾಟಿ ಅಮೇರಿಕಾ' ನಂತಹ ದೊಡ್ಡ ನಿರ್ಮಾಣ ಸಂಸ್ಥೆಗಳೊಂದಿಗೆ 200ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಕೆಲಸ ಮಾಡಿದರು. ಕೈಲೀ ನಗು ಮತ್ತು ಸಕಾರಾತ್ಮಕ ವ್ಯಕ್ತಿತ್ವವು ಅವರಿಗೆ ಉದ್ಯಮದಲ್ಲಿ ವಿಶೇಷ ಸ್ಥಾನ ನೀಡಿತು. ಬ್ರೇಜರ್ಸ್ ತನ್ನ ಅಧಿಕೃತ ಎಕ್ಸ್ ಹ್ಯಾಂಡಲ್‌ನಲ್ಲಿ ಸಂತಾಪ ಸೂಚಿಸಿದೆ.

ಬಾಂಬ್ ಸ್ಫೋಟಕ್ಕೆ ನಾಲ್ವರು ಸರ್ಕಾರಿ ಅಧಿಕಾರಿಗಳು ಸಾವು



ಪೇಶಾವರ: ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಬುಧವಾರ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಪೊಲೀಸ್ ಸಹಾಯಕ ಆಯುಕ್ತ ಸೇರಿ ಒಟ್ಟು 4 ಮಂದಿ ಮೃತಪಟ್ಟು, 11 ಮಂದಿ ಗಾಯಗೊಂಡಿದ್ದಾರೆ.

ಅಫ್ಘಾನಿಸ್ತಾನದ ಗಡಿ ಸಮೀಪದ ಬುಡಕಟ್ಟು ಜಿಲ್ಲೆ ಬಜೌರ್‌ನ ಖರ್ ತೆಹಸಿಲ್‌ನ ಮೇಳ ಮೈದಾನದ ಸಮೀಪ ಬಾಂಬ್ ಸ್ಫೋಟ ಸಂಭವಿಸಿದೆ. ಬಜೌರ್ ಜಿಲ್ಲೆಯ ನವಗಾಂಯ್ ತೆಹ್ಸಿಲ್‌ನ ಸಹಾಯಕ ಆಯುಕ್ತ ಫೈಸಲ್ ಸುಲ್ತಾನ್ ಅವರನ್ನು ಗುರಿಯಾಗಿಸಿಕೊಂಡೇ ದಾಳಿ ನಡೆಸಲಾಗಿದೆ. ಸಹಾಯ ಇನ್ಸ್‌ಪೆಕ್ಟರ್ ನೂರ್ ಹಕೀಮ್, ತಹಶೀಲ್ದಾರ್ ವಕೀಲ್ ಖಾನ್ ಹಾಗೂ ಕಾನ್‌ಸ್ಟೇಬಲ್ ರಶೀದ್ ಖಾನ್ ಇತರರು ಸಾವನ್ನಪ್ಪಿದ್ದು, ಭದ್ರತಾ ಪಡೆಗಳು ಕೂಡಲೇ ಸ್ಥಳವನ್ನು ಸುತ್ತುವರಿದು ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮುಖ್ಯಮಂತ್ರಿಯ ಸಲಹೆಗಾರ ಬ್ಯಾರಿಸ್ಟರ್ ಸೈಫ್ ದಾಳಿಯನ್ನು ಖಂಡಿಸಿದ್ದು, ಇದೊಂದು ಭೀಕರ ಘಟನೆ ಎಂದಿದ್ದಾರೆ. ಘಟನೆ ಬಗ್ಗೆ ಸಂಪೂರ್ಣ ತನಿಖೆಗೆ ಮುಖ್ಯಮಂತ್ರಿ ಅಲಿ ಅಮಿನ್ ಆದೇಶಿಸಿದ್ದು, ಗಾಯಗೊಂಡವರಿಗೆ ತಕ್ಷಣವೇ ವೈದ್ಯಕೀಯ ಸೌಲಭ್ಯ ಸಿಗುವಂತೆ ನೋಡಿಕೊಳ್ಳಲು ಆದೇಶಿಸಿದ್ದಾಗಿ ತಿಳಿಸಿದ್ದಾರೆ.

ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾಗೆ 6 ತಿಂಗಳು ಜೈಲು ಶಿಕ್ಷೆ



ಢಾಕಾ: ಬಾಂಗ್ಲಾದೇಶ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ ಬುಧವಾರ ಅಂತರ ರಾಷ್ಟ್ರೀಯ ಅಪರಾಧ ನ್ಯಾಯ ಮಂಡಳಿ (ಐಸಿಟಿ)ಯು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ನಡೆಸಿದ ಐಸಿಟಿ ಅಧ್ಯಕ್ಷ ನ್ಯಾಯಮೂರ್ತಿ ಎಂಡಿ ಗೋಲಮ್ ಮೊರ್ಟುಜಾ ಮೊಜುಂದರ್ ನೇತೃತ್ವದ ಅಂತರ ರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಈ ತೀರ್ಪು ನೀಡಿದೆ ಎಂದು ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ತಿಳಿಸಿದೆ. ಇದೇ ತೀರ್ಪಿನಲ್ಲಿ, ಗೈಬಂಧದ ಗೋಬಿಂದ ಗಂಜ್‌ನ ಶಕಿಲ್ ಅಕಂದ್ ಬುಲ್ಬುಲ್‌ಗೆ ನ್ಯಾಯಮಂಡಳಿ 2 ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಶೇಖ್ ಹಸೀನಾ ಅವರು 11 ತಿಂಗಳ ಹಿಂದೆ ಅಧಿಕಾರ ತೊರೆದು ದೇಶದಿಂದ ಪಲಾಯನ ಮಾಡಿದ ನಂತರ ಮೊದಲ ಬಾರಿ ಪ್ರಕರಣವೊಂದರಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ರೈಲು: 8 ಗಂಟೆಗೂ ಮುನ್ನ ಸೀಟು ಖಾತರಿ

ನವದೆಹಲಿ: ಬೆಳಗ್ಗೆ 5 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ನಡುವೆ ಹೊರಡುವ ರೈಲುಗಳಿಗೆ ಸೀಟು ಕಾಯ್ದಿರಿಸಿದ ಪಟ್ಟಿಯನ್ನು ಹಿಂದಿನ ದಿನ ರಾತ್ರಿ 9 ಗಂಟೆಗೆ ಮತ್ತು ಇತರ ಅವಧಿಯಲ್ಲಿ ಸಂಚರಿಸುವ ರೈಲುಗಳಿಗೆ 8 ಗಂಟೆ ಮುನ್ನ ಈ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಪ್ರಯಾಣಿಕರ ಅನುಕೂಲಕ್ಕಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ರೈಲ್ವೆ ಸಚಿವಾಲಯ ಬುಧವಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ. 2015ರಿಂದಲೂ, ರೈಲು ಹೊರಡುವ ಸಮಯಕ್ಕೂ 4 ಗಂಟೆಗಳ ಮುನ್ನ ಸೀಟು ಕಾಯ್ದಿರಿಸಿದ ಮೊದಲ ಪಟ್ಟಿಯು ಸಿದ್ಧಪಡಿಸಲಾಗುತ್ತಿತ್ತು. ಇದೀಗ ಈ ನಿಯಮದಲ್ಲಿ ಬದಲಾವಣೆ ತರಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ವಲಯಗಳ ಅಧಿಕಾರಿಗಳಿಗೆ ಸೂಚಿಸಿರುವ ಸಚಿವಾಲಯ, ಇದು ಯಾವ ದಿನಾಂಕದಿಂದ ಜಾರಿಯಾಗಬೇಕು ಎಂಬುದನ್ನು ಪ್ರಸ್ತಾಪಿಸಿಲ್ಲ. ಅಲ್ಲದೆ 2ನೇ ಪಟ್ಟಿ ತಯಾರಿಕೆ ಕುರಿತು ಯಾವುದೇ ಬದಲಾವಣೆಯನ್ನೂ ಅದು ಉಲ್ಲೇಖಿಸಿಲ್ಲ. ಪಟ್ಟಿ ಬಿಡುಗಡೆಯಾದ ಬಳಿಕವೂ ಸೀಟುಗಳು ಬಾಕಿ ಉಳಿದಿದ್ದರೆ, ಪ್ರಚಲಿತ ಬುಕಿಂಗ್ ಸೌಲಭ್ಯ ಬಳಸಿ ಸೀಟುಗಳನ್ನು ಕಾಯ್ದಿರಿಸಬಹುದು. ಎರಡನೇ ಪಟ್ಟಿಯು ರೈಲು ಹೊರಡುವ 30 ನಿಮಿಷ ಮುನ್ನ ಸಿದ್ಧವಾಗುತ್ತದೆ.

ಕದನ ವಿರಾಮಕ್ಕೆ ಇಸ್ರೇಲ್ ಒಪ್ಪಿದೆ, ಪರಿಸ್ಥಿತಿ ಹದಗೆಡುವುದಕ್ಕೂ ಮುನ್ನ ನೀವೂ ಒಪ್ಪಿಕೊಳ್ಳಿ



ವಾಷಿಂಗ್ಟನ್: ಗಾಜಾದಲ್ಲಿ 60 ದಿನಗಳ ಕದನ ವಿರಾಮಕ್ಕೆ ಇಸ್ರೇಲ್ ಒಪ್ಪಿಕೊಂಡಿದ್ದು, ಪರಿಸ್ಥಿತಿ ಹದಗೆಡುವುದಕ್ಕೂ ಮುನ್ನ ನೀವು ಕೂಡ ಒಪ್ಪಿಕೊಳ್ಳಿ ಎಂದು ಹಮಾಸ್‌ಗೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಶ್ವೇತಭವನದಲ್ಲಿ ಭೇಟಿಯಾಗಲು ಸಿದ್ಧತೆ ನಡೆಸುತ್ತಿರುವ ನಡುವಲ್ಲೇ ಟ್ರಂಪ್ ಹೇಳಿಕೆ ನೀಡಿದ್ದಾರೆ.

ನನ್ನ ಪ್ರತಿನಿಧಿಗಳು ಗಾಜಾ ವಿಷಯಕ್ಕೆ ಸಂಬಂಧಿಸಿದಂತೆ ಇಂದು ಇಸ್ರೇಲ್ ಜೊತೆ ದೀರ್ಘ ಮತ್ತು ಆಶಾದಾಯಕ ಮಾತುಕತೆ ನಡೆಸಿದರು. 60 ದಿನಗಳ ಕದನ ವಿರಾಮವನ್ನು ಅಂತಿಮಗೊಳಿಸಲು ಅಗತ್ಯವಾದ ಷರತ್ತುಗಳಿಗೆ ಇಸ್ರೇಲ್ ಒಪ್ಪಿಕೊಂಡಿದೆ ಎಂದು ಹೇಳಿದ್ದಾರೆ. ಇಸ್ರೇಲ್ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ಈ ಸಮಯದಲ್ಲಿ ನಾವು ಯುದ್ಧವನ್ನು ಕೊನೆಗೊಳಿಸಲು ಎಲ್ಲ ದೇಶಗಳೊಂದಿಗೆ ಪ್ರಯತ್ನ ಮಾಡುತ್ತೇವೆ. ಶಾಂತಿಯನ್ನು ತರಲು ಬಹಳ ಶ್ರಮಿಸಿದ ಕತಾರ್ ಮತ್ತು ಈಜಿಪ್ಟ್ ಅಂತಿಮ ಪ್ರಸ್ತಾಪವನ್ನು ನೀಡುತ್ತವೆ. ಪಶ್ಚಿಮ ಏಷ್ಯಾದ ಒಳಿತಿಗಾಗಿ ಹಮಾಸ್ ಈ ಒಪ್ಪಂದವನ್ನು ಒಪ್ಪಿಕೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇದು ಹೀಗೆ ಮುಂದುವರಿದರೆ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಮುಂದಿನ ಪೀಳಿಗೆಗೆ ವಚನಗಳ ಕಟ್ಟಿಕೊಟ್ಟ ಹಳಕಟ್ಟಿ


ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ ಹಳಕಟ್ಟಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಮಡಿಕೇರಿ, ಜು.2–ವಚನಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಡಾ.ಫ.ಗು.ಹಳಕಟ್ಟಿ ಅವರ ದೂರದೃಷ್ಟಿ ಮತ್ತು ಮೌಲ್ಯಗಳು ಪ್ರತಿಯೊಬ್ಬರಿಗೂ ಮಾದರಿ ಎಂದು ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದ ಉಪನ್ಯಾಸಕ ಮಾರುತಿ ದಾಸಣ್ಣವರ್ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ಗಾಂಧಿಭವನದಲ್ಲಿ ಡಾ.ಫ.ಗು.ಹಳಕಟ್ಟಿ ಜನ್ಮದಿನದ ಪ್ರಯುಕ್ತ ನಡೆದ ವಚನ ಸಾಹಿತ್ಯ ಸಂರಕ್ಷಣೆ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಚನ ಸಂಶೋಧನೆ, ಸಂಗ್ರಹಣೆ, ಪರಿಷ್ಕರಣೆ, ಮುದ್ರಣ, ಪ್ರಕಾಶನ, ಪ್ರಚಾರ, ಪ್ರಸಾರ ಹಾಗೂ ಇಂಗ್ಲೀಷ್ ಭಾಷೆಗೆ ವಚನಗಳ ಅನು ವಾದ ಇವುಗಳಲ್ಲಿ ತೊಡಗಿಸಿಕೊಂಡು ವಚನ ಗಳನ್ನು ಮುಂದಿನ ಪೀಳಿಗೆಗೆ ಕಟ್ಟಿಕೊಟ್ಟರು ಎಂದರು.

ಅನೇಕ ಬಾರಿ ಸೈಕಲ್ ಏರಿ ಊರೂರು ಅಲೆಯುವುದು, ತಾಳೆ ಗರಿ, ಓಲೆಕಟ್ಟುಗಳನ್ನು ಸಂಗ್ರಹಿಸಿ ಪುಸ್ತಕ ಮುದ್ರಣಕ್ಕೆ ಮುಂದಾದರು. ಇದರಿಂದ ಆರ್ಥಿಕ ತೊಂದರೆಗೂ ಸಿಲುಕಿದ್ದರು. ಆದರೂ ಯಾವುದನ್ನು ಲೆಕ್ಕಿಸದೆ ಜೀವನವನ್ನೇ ವಚನ ಸಾಹಿತ್ಯ ಸಂಗ್ರಹಕ್ಕೆ ಮೀಸಲಿಟ್ಟ ಅಪ್ರತಿಮರೆಂದು ಸ್ಮರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ ಮಾತನಾಡಿ, ಹಳಕಟ್ಟಿಯವರು ಪತ್ರಿಕೋದ್ಯಮದಲ್ಲೂ ಗಣನೀಯವಾದ ಸೇವೆ ಸಲ್ಲಿಸಿದರು. ಅವರು ಆರಂಭಿಸಿದ ಶಿವಾನುಭವ ಮಾಸಿಕ ಪತ್ರಿಕೆ 35 ವರ್ಷಗಳವರೆಗೆ ನಡೆದದ್ದು ಅದರ ಹೆಗ್ಗಳಿಕೆ. ಅಷ್ಟು ಮಾತ್ರವಲ್ಲದೇ 1925 ರಲ್ಲಿ ನವಕರ್ನಾಟಕ ವಾರಪತ್ರಿಕೆಯನ್ನು ಆರಂಭಿಸಿದರು. ಅವರು ಸಂಪಾದಿಸಿ ಪ್ರಕಟಿಸಿದ ವಚನ ಸಾಹಿತ್ಯ ಸಾರವಂತೂ ಅಪರೂಪ ವಚನಗಳುಳ್ಳ ಒಂದು ಅದ್ಭುತ ಕೃತಿ. ಶೂನ್ಯ ಸಂಪಾದನೆ, ಶಿವಾನುಭವ, ಕೃಷಿ ವಿಜ್ಞಾನ, ಪ್ರಭುದೇವರ ವಚನಗಳು, ಹರಿಹರನ ರಗಳೆ, ಪ್ರದೀಪಿಕೆ, ಶಬ್ದಕೋಶ, ಆದಿ ಶೆಟ್ಟಿ ಪುರಾಣ ಮುಂತಾದ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟರು ಎಂದು ವಿವರಿಸಿದರು.

ಶಿಕ್ಷಣ ಇಲಾಖೆಯ ಡಿವೈಪಿಸಿ ಕೃಷ್ಣಪ್ಪ, ನಗರ ಸಭೆ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿದರು. ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಸ್ವಾಗತಿಸಿದರು. ಬ್ಲಾಸಂ ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು.

ತವರಲ್ಲಿ ಯೋಧನಿಗೆ ಅದ್ದೂರಿ ಸ್ವಾಗತ


ನಿವೃತ್ತ ಯೋಧ ಕೃಷ್ಣಪ್ಪ, ಪೂರ್ಣಿಮಾ ಕೃಷ್ಣಪ್ಪ ಉಚಿತವಾಗಿ ಮಕ್ಕಳಿಗೂ ಟಿ ಷರ್ಟ್ ವಿತರಿಸಿದರು.

ಕುಶಾಲನಗರ, ಜು.2–ಸೇನೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಸ್ವಗ್ರಾಮಕ್ಕೆ ಆಗಮಿಸಿದ ಯೋಧ ಎಚ್.ಎಸ್.ಕೃಷ್ಣಪ್ಪಗೆ ಹೆಬ್ಬಾಲೆ ಗ್ರಾಮಸ್ಥರು ಅದ್ದೂರಿ ಸ್ವಾಗತದೊಂದಿಗೆ ಬರಮಾಡಿಕೊಂಡರು

ಚೆನ್ನೈನಿಂದ ಮಧ್ಯಾಹ್ನ ಮೂರು ಗಂಟೆಗೆ ಊರಿಗೆ ಬಂದ ಯೋಧ ಕೃಷ್ಣಪ್ಪನವರ ಕುಟುಂಬಸ್ಥರ ಮೇಲೆ ಗ್ರಾಮಸ್ಥರು, ಶಾಲಾ ಮಕ್ಕಳು ಹಾಗೂ ಅಭಿಮಾನಿಗಳು ಪುಷ್ಪಮಳೆಗೆರೆದರು. ಕೃಷ್ಣಪ್ಪ ಗೆಳೆಯರ ಬಳಗ ಹಾಗೂ ಅಭಿಮಾನಿಗಳು ಬೃಹತ್ ಹೂವಿನ ಹಾರ ಹಾಕಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು. ಯೋಧ ಹಾಗೂ ದೇಶದ ಪರವಾಗಿ ಘೋಷಣೆ ಕೂಗುವ ಮೂಲಕ ಯುವಕರ ದೇಶಪ್ರೇಮ ಬಿಂಬಿಸಿದರು. ಅಭಿಮಾನಿಗಳು ಹೆಬ್ಬಾಲೆ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು.

ಮೆರವಣಿಗೆ : ಹೆಬ್ಬಾಲೆ ಗ್ರಾಮದ ಸಿದ್ದಪ್ಪ ಹಾಗೂ ದಿ.ಪುಟ್ಟಗೌರಮ್ಮ ದಂಪತಿಗಳ ಕಿರಿಯ ಪುತ್ರನಾಗಿರುವ ಕೃಷ್ಣಪ್ಪ ಹಾಗೂ ದಂಪತಿಗಳನ್ನು ಗ್ರಾಮದ ಮುಖ್ಯ ಸರ್ಕಲ್‌ನಿಂದ ಪ್ರಮುಖ ಬೀದಿಯಲ್ಲಿ ಮಂಗಳವಾದ್ಯಗಳೊಂದಿಗೆ ಅಲಂಕೃತ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ಉದ್ದಕ್ಕೂ ಅಭಿಮಾನಿ ಜಯಘೋಷ ಹಾಕಿದರು. ನಂತರ ತಮ್ಮ ಮನೆಗೆ ಆಗಮಿಸಿದಾಗ ಮನೆಯವರು ಮಂಗಳಾರತಿಯೊಂದಿಗೆ ಯೋಧರ ಕುಟುಂಬವನ್ನು ಬರಮಾಡಿಕೊಂಡರು.

ಟಿ ಷರ್ಟ್ ವಿತರಣೆ : ಸರ್ಕಾರ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನಿವೃತ್ತ ಯೋಧ ಕೃಷ್ಣಪ್ಪ ಹಾಗೂ ಪೂರ್ಣಿಮಾ ಕೃಷ್ಣಪ್ಪ ಉಚಿತವಾಗಿ ಎಲ್ಲ ಮಕ್ಕಳಿಗೂ ಟಿ ಷರ್ಟ್ ವಿತರಣೆ ಮಾಡಿದರು. ತವರಿಗೆ ಆಗಮಿಸಿದ ಯೋಧ ಮೊದಲು ತಾನು ವಿದ್ಯಾಭ್ಯಾಸ ಮಾಡಿದ ಶಾಲೆಗೆ ಭೇಟಿ ನೀಡಿದಾಗ ಶಾಲಾ ಮಕ್ಕಳು ಹೂಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು. ಗುರುಗಳಾದ ಎಚ್.ಎನ್.ನಾಗಾಚಾರಿ ಹಾಗೂ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಎಚ್.ಎಂ.ವೆಂಕಟೇಶ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭ ಶಾಲಾ ಅಭಿವೃದ್ಧಿ ಸಮಿತಿ ವತಿಯಿಂದ ಯೋಧ ಕೃಷ್ಣಪ್ಪ ಅವರನ್ನು ಸನ್ಮಾನಿಸಿದರು. ನಂತರ ಶಾಲಾ ಆವರಣದಲ್ಲಿ ಗಿಡನೆಟ್ಟು ನೀರು ಹಾಕುವ ಮೂಲಕ ಪರಿಸರ ಕಾಳಜಿ ಪ್ರದರ್ಶಿಸಿದರು. ಯೋಧ ಕೃಷ್ಣಪ್ಪ ಅಭಿಮಾನಿ ಬಳಗದ ಎಚ್.ಎಲ್. ರಮೇಶ್, ಎಚ್.ಆರ್. ಶ್ರೀನಿವಾಸ್, ಲೋಕೇಶ್, ಮಹಾದೇಶ, ಕಾಸರಗೋಡು ಬೀದಿ ರಮೇಶ್, ವಿಶ್ವನಾಥ್, ರಘು, ಯೋಗೇಶ್ ಮತ್ತಿತರರು ಭಾಗವಹಿಸಿದ್ದರು.

ಕ್ರೀಡಾ ವಸತಿ ನಿಲಯಕ್ಕೆ ಸರ್ಕಾರಿ ಜಾಗ : ನಾಮಫಲಕ ಅಳವಡಿಕೆ



ಒತ್ತುವರಿ ಅತಿಕ್ರಮ ಪ್ರವೇಶ ಆಗದಂತೆ ಅಧಿಕಾರಿ ವರ್ಗದವರು ನಾಮಫಲಕವನ್ನು ಅಳವಡಿಸಿದರು.

ವಿರಾಜಪೇಟೆ: ಕ್ರೀಡಾ ವಸತಿ ನಿಲಯಕ್ಕೆ 11 ಎಕರೆ ಸರ್ಕಾರಿ ಜಾಗವನ್ನು ಕಾಯ್ದಿರಿಸಿ ಇಂದಿನಿಂದ ಈ ಪ್ರದೇಶ ಒತ್ತುವರಿ ಅತಿಕ್ರಮ ಪ್ರವೇಶ ಆಗದಂತೆ ಅಧಿಕಾರಿವರ್ಗದವರು ನಾಮಫಲಕವನ್ನು ಅಳವಡಿಸಿದರು.

ಮಹತ್ವಾಕಾಂಕ್ಷೆಯ ವಿವಿಧ ಕ್ರೀಡಾ ತರಬೇತಿ ಕೇಂದ್ರಕ್ಕೆ ಸರಕಾರಿ ಜಾಗವನ್ನು ಕಾಯ್ದಿರಿಸುವಂತೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ವಿರಾಜಪೇಟೆ ತಹಶೀಲ್ದಾರ್‌ರವರಿಗೆ ಸೂಚಿಸಿದ್ದರು. ಅದರಂತೆ ಇಂದು ತಹಶೀಲ್ದಾರ್ ಅನಂತ ಶಂಕರ ನೇತೃತ್ವದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ತಾಲೂಕಿನ ವಿ.ಬಾಡಗ ಗ್ರಾಮಕ್ಕೆ ಭೇಟಿ ನೀಡಿ 11 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡು ಈ ಪ್ರದೇಶದಲ್ಲಿ ಅತಿಕ್ರಮ ಪ್ರವೇಶ ನಿಷೇಧಿಸಿದ್ದು ಯಾರಾದರು ಈ ಜಾಗ ಒತ್ತುವರಿ ಕಂಡು ಬಂದಲ್ಲಿ ಭೂ ಕಂದಾಯ ಕಾಯ್ದೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳುವುದಾಗಿ ನಾಮಫಲಕದಲ್ಲಿ ಎಚ್ಚರಿಸಿದ್ದಾರೆ. ಜಾಗ ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭ ತಹಶೀಲ್ದಾರ್ ಅನಂತ ಶಂಕರ, ಕಂದಾಯ ಪರಿವೀಕ್ಷಕ ಎಂ.ಎಲ್.ಹರೀಶ್, ಗ್ರಾಮ ಆಡಳಿತ ಅಧಿಕಾರಿ ಪೂಜಾ, ಸಹಾಯಕರಾದ ಬಿದ್ದಪ್ಪ ಮತ್ತು ದಿತೇಂದ್ರ ಇತರರು ಹಾಜರಿದ್ದರು.

ಇನ್ನರ್‌ವ್ಹೀಲ್ ಸಂಸ್ಥೆ ಲಲಿತಾ ರಾಘವನ್ ಪದಗ್ರಹಣ



ಗಿರಿಶೃಂಗ ವಾರ್ತಾ ಸಂಚಿಕೆಯನ್ನು ರೋಟರಿ ಕಾರ್ಯದರ್ಶಿ ಪ್ರಿನ್ಸ್ ಪೊನ್ನಣ್ಣ ಅನಾವರಣಗೊಳಿಸಿದರು.

ಮಡಿಕೇರಿ: ಮಡಿಕೇರಿಯ ಇನ್ನರ್‌ವ್ಹೀಲ್ ಸಂಸ್ಥೆಯ 50ನೇ ಅಧ್ಯಕ್ಷೆಯಾಗಿ ಲಲಿತಾ ರಾಘವನ್ ಮತ್ತು ಕಾರ್ಯದರ್ಶಿಯಾಗಿ ನಮಿತಾ ರೈ ಅಧಿಕಾರ ವಹಿಸಿಕೊಂಡರು. ನಗರದ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇನ್ನರ್‌ವೀಲ್‌ನಲ್ಲಿ ಸದಸ್ಯೆಯಾಗಿ 50 ವರ್ಷ ಪೂರೈಸಿರುವ ಹಿರಿಯ ಸದಸ್ಯೆ ಡಾ.ಜಯಲಕ್ಷ್ಮಿ ಪಾಟ್ಕರ್ ನೂತನ ಆಡಳಿತ ಮಂಡಳಿಗೆ ಪದಗ್ರಹಣ ನೆರವೇರಿಸಿ, ಮಹಿಳೆಯರ ಸ್ವಾವಲಂಬನೆಗೆ ಪೂರಕವಾದ ಯೋಜನೆಗಳನ್ನು ಮುಂದಿನ ವರ್ಷದಲ್ಲಿ ಜಾರಿಗೊಳಿಸುವುದಾಗಿ ಭರವಸೆ ನೀಡಿದರಲ್ಲದೇ ಅರ್ಥಪೂರ್ಣ ಯೋಜನೆಗಳ ಮೂಲಕ ಸಮುದಾಯ ಸೇವೆಗೆ ಮುಂದಾಗುವುದಾಗಿ ನುಡಿದರು.

ಕಾರ್ಯಕ್ರಮದಲ್ಲಿ ಇನ್ನರ್‌ವ್ಹೀಲ್ ಜಿಲ್ಲೆಯ ಮಾಜಿ ಅಧ್ಯಕ್ಷೆ ಪೂರ್ಣಿಮ ರವಿ, ನಿಕಟಪೂರ್ವ ಅಧ್ಯಕ್ಷೆ ಅಗ್ನೇಸ್ ಮುತ್ತಣ್ಣ, ನಿಕಟಪೂರ್ವ ಕಾರ್ಯದರ್ಶಿ ರಶ್ಮಿ ಪ್ರವೀಣ್ ಹಾಜರಿದ್ದರು. ಶಫಾಲಿ ರೈ ಸಂಪಾದಕತ್ವದಲ್ಲಿ ಪ್ರಕಟವಾದ ಗಿರಿಶೃಂಗ ವಾರ್ತಾ ಸಂಚಿಕೆಯನ್ನು ರೋಟರಿ ಕಾರ್ಯದರ್ಶಿ ಪ್ರಿನ್ಸ್ ಪೊನ್ನಣ್ಣ ಅನಾವರಣಗೊಳಿಸಿದರು. ರೇಣುಕಾ ಸುಧಾಕರ್, ಲಕ್ಷ್ಮಿ ಈಶ್ವರ ಭಟ್, ಲತಾ ಸುಬ್ಬಯ್ಯ ಪ್ರಾರ್ಥಿಸಿದರು. ಡಾ. ಶುಭಾ ರಾಜೇಶ್, ದಿವ್ಯ ಮುತ್ತಣ್ಣ, ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ನಮಿತಾ ರೈ ವಂದಿಸಿದರು.

ಗುಂಡುಗುಟ್ಟಿ ವಿದ್ಯಾರ್ಥಿಗಳಿಗೆ ಟ್ರ್ಯಾಕ್‌ಸೂಟ್ ವಿತರಣೆ


ಸುಂಟಿಕೊಪ್ಪ ತಾಲೂಕು ಗುಂಡುಗುಟ್ಟಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಸ್ಥಳೀಯ ಮುತ್ತಿನ ತೋಟದ ಮಾಲೀಕರಾದ ರಾಜೇಂದ್ರ ಹಾಗೂ ಸಾಧನ ಟ್ರ್ಯಾಕ್‌ಸೂಟ್ ನೀಡಿದರು. ಮುತ್ತಿನ ತೋಟದ ವ್ಯವಸ್ಥಾಪಕ ಪ್ರದೀಪ್ ಮಕ್ಕಳಿಗೆ ಸಮವಸ್ತ್ರವನ್ನು ವಿತರಿಸಿದರು. ಈ ಭಾಗದಲ್ಲಿ ಹೆಚ್ಚಾಗಿ ಕೂಲಿಕಾರ್ಮಿಕರ ಮಕ್ಕಳೇ ವಿದ್ಯಾಭ್ಯಾಸಕ್ಕೆ ಬರುತ್ತಿದ್ದಾರೆ. ಅವರ ಭವಿಷ್ಯದ ದೃಷ್ಟಿಯಿಂದ ಮಕ್ಕಳಲ್ಲಿ ಓದಿನಲ್ಲಿ ಆಸಕ್ತಿ ಮೂಡುವ ದೃಷ್ಟಿಯಿಂದ ನಮ್ಮಿಂದಾದ ಸಣ್ಣ ಸಹಾಯ ಮಾಡುತ್ತಿದ್ದೇವೆ ಎಂದರು. ಶಾಲೆಯ ಮುಖ್ಯ ಶಿಕ್ಷಕಿ ಗೌರಮಣಿ ಮತ್ತು ಶಿಕ್ಷಕಿ ಪೂರ್ಣಿಮಾ ಇದ್ದರು.

ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ: ಶೈಲಜಾಗೆ ತೃತೀಯ ರ್‍ಯಾಂಕ್



ಮಡಿಕೇರಿ, ಜು.2– ಪೊನ್ನಂಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ವಿಭಾಗದ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿನಿ ಶೈಲಜಾ 9.55 ಸಿಜಿಪಿಎ ಅಂಕಗಳೊಂದಿಗೆ ವಿಟಿಯು ಇಂಜಿನಿಯರಿಂಗ್ ಪದವಿಯಲ್ಲಿ ರಾಜ್ಯ ಮಟ್ಟದಲ್ಲಿ 3ನೇ ರ್‍ಯಾಂಕ್ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಬಸವರಾಜ್ ಮುಂದಾಳತ್ವದಲ್ಲಿ ವಿಭಾಗದ ಮುಖ್ಯಸ್ಥ ಡಾ.ರಾಮಕೃಷ್ಣ ಬಿ.ಬಿ ಹಾಗೂ ಅಧ್ಯಾಪಕರ ಸಮರ್ಥ ಮಾರ್ಗದರ್ಶನದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.

ವಿದ್ಯಾರ್ಥಿನಿ ಶೈಲಜಾ ಅವರ ಈ ಸಾಧನೆಗೆ ಕೊಡವ ಎಜುಕೇಷನ್ ಸೊಸೈಟಿಯ ಅಧ್ಯಕ್ಷ ಡಾ.ಎಂ.ಸಿ.ಕಾರ್ಯಪ್ಪ, ಉಪಾಧ್ಯಕ್ಷ ಕೆ.ಎಂ.ಚಿಣ್ಣಪ್ಪ, ಕಾರ್ಯದರ್ಶಿ ರಾಕೇಶ್ ಪೂವಯ್ಯ, ನಿರ್ದೇಶಕರುಗಳು, ಕಾಲೇಜಿನ ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು, ಅಧ್ಯಾಪಕರು, ಕಾಲೇಜು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಜು.9, ಗ್ರಾಪಂ ನೌಕರರ ಪ್ರತಿಭಟನೆಗೆ ನಿರ್ಧಾರ

ಮಡಿಕೇರಿ: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಗ್ರಾಪಂ ನೌಕರರ ಸಂಘ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳ ವತಿಯಿಂದ ಜು.9 ರಂದು ವಿರಾಜಪೇಟೆ ಮತ್ತು ಕುಶಾಲನಗರ ತಹಶೀಲ್ದಾರರ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ ಎಂದು ರಾಜ್ಯ ಗ್ರಾಮ ಪಂಚಾಯ್ತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ತಿಳಿಸಿದ್ದಾರೆ.

ಕಾರ್ಪೋರೇಟ್ ಸಂಸ್ಥೆಗಳ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿರುವ ಕಾರ್ಮಿಕ ವಿರೋಧಿ 4 ಸಂಹಿತೆಗಳನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಮತ್ತು ಕೆಲಸದ ಅವಧಿಯನ್ನು 12 ಗಂಟೆಗೆ ವಿಸ್ತರಣೆ ಮಾಡಿರುವ ಕ್ರಮವನ್ನು ವಿರೋಧಿಸಿ ಬೆಳಿಗ್ಗೆ 10.30 ಗಂಟೆಗೆ ಪ್ರತಿಭಟನೆ ನಡೆಸಲಾಗುವುದು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಕಾರ್ಮಿಕ ಸಂಘಟನೆಯಲ್ಲಿ ಸಂಯೋಜನೆಗೊಂಡಿರುವ ಎಲ್ಲಾ ಸಂಘಟನೆಗಳು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿವೆ. ಕೆಲಸದ ಅವಧಿ 8 ಗಂಟೆ ಖಾಯಂಗೊಳಿಸಬೇಕು, ಉದ್ಯೋಗವನ್ನು ಖಾಯಂಗೊಳಿಸಬೇಕೆಂದು ಪಿ.ಆರ್. ಭರತ್ ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಶ್ರೀಕ್ಷೇತ್ರ ಕನಕಗಿರಿಗೆ ಜಿಲ್ಲಾಧಿಕಾರಿ ಭೇಟಿ


ಕನಕಗಿರಿ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸ್ವಾಮೀಜಿರೊಂದಿಗೆ ಸಮಾಲೋಚನೆ ನಡೆಸಿದರು. ತಹಶೀಲ್ದಾರ್ ಗಿರಿಜಾ ಹಾಜರಿದ್ದರು.

ಮಲೆಯೂರು: ಜಿಲ್ಲಾಧಿಕಾರಿಯಾಗಿ ನೇಮಕಗೊಂಡ ನಂತರ ಶಿಲ್ಪಾ ನಾಗ್ ಇದೇ ಮೊದಲ ಬಾರಿಗೆ ಶ್ರೀಕ್ಷೇತ್ರ ಕನಕಗಿರಿಗೆ ಭೇಟಿ ನೀಡಿದ್ದರು.

ಮಧ್ಯಾಹ್ನ 1 ಗಂಟೆಗೆ ಕ್ಷೇತ್ರಕ್ಕೆ ಆಗಮಿಸಿದ ಜಿಲ್ಲಾಧಿಕಾರಿಯವರನ್ನು ಪೂರ್ಣಕುಂಬದೊಂದಿಗೆ ಸ್ವಾಗತಿಸಲಾಯಿತು. ಬೆಟ್ಟದ ಮೇಲಿನ ದೇವಾಲಯಕ್ಕೆ ಹೋಗಿ ದರ್ಶನ ಮಾಡಿ ಅಲ್ಲಿನ ಪ್ರಕೃತಿಯನ್ನು ನೋಡಿ ಸಂತೋಷಪಟ್ಟರು. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿಯವರನ್ನು ಭೇಟಿ ಮಾಡಿದ ಜಿಲ್ಲಾಧಿಕಾರಿಗಳು 30 ನಿಮಿಷಕ್ಕೂ ಹೆಚ್ಚು ಕಾಲ ಧಾರ್ಮಿಕ ಸಮಾಲೋಚನೆ ನಡೆಸಿ ತಾವು ಇನ್ನೊಮ್ಮೆ ಕ್ಷೇತ್ರಕ್ಕೆ ಬಂದು ಇಲ್ಲಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಮಾಲೋಚಿಸುವುದಾಗಿ ಸ್ವಾಮೀಜಿಯವರಿಗೆ ಆಶ್ವಾಸನೆ ನೀಡಿದರು.

ಧಾರ್ಮಿಕ ರಂಗದಲ್ಲಿ ಅಪಾರ ಆಸಕ್ತಿ ಹೊಂದಿರುವ ಜಿಲ್ಲಾಧಿಕಾರಿಯವರಿಗೆ ಪೂಜ್ಯ ಸ್ವಾಮೀಜಿಯವರು ಜೈನೇಂದ್ರ ಸಿದ್ಧಾಂತ ಕೋಶ ಕೃತಿಯನ್ನು ನೀಡಿ ಶಾಲು ಹೊದಿಸಿ ಫಲತಾಂಬೂಲ ನೀಡಿ ಗೌರವಿಸಿದರು. ತಹಶೀಲ್ದಾರ್ ಶ್ರೀಮತಿ ಗಿರಿಜಾ, ಚಾಮರಾಜನಗರ ದಿಗಂಬರ ಜೈನ ಸಮಾಜದ ಅಧ್ಯಕ್ಷ ನಿರ್ಮಲ್ ಕುಮಾರ್, ಉಪಾಧ್ಯಕ್ಷ ಸಿ.ಬಿ. ನಾಗೇಂದ್ರಯ್ಯ, ಸಿವಿಜೆ ಬಾಬು, ಮಹೇಶ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಂಡೀಪುರದ ಕಳ್ಳಬೇಟೆ ತಡೆ ಶಿಬಿರಗಳಿಗೆ ಮೂಲ ಸೌಕರ್ಯ

ಗುಂಡ್ಲುಪೇಟೆ, ಜು.2(ಸೋವ್.ಜಿ)– ತಾಲೂಕಿನ ಬಂಡೀಪುರದ ಎಲ್ಲಾ ಕಳ್ಳಬೇಟೆ ತಡೆ ಶಿಬಿರಗಳನ್ನು ನವೀಕರಣಗೊಳಿಸಿ ಸಿಬ್ಬಂದಿಗೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಬಂಡೀಪುರ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್ ಹೇಳಿದ್ದಾರೆ.

ಬಂಡೀಪುರ ಕಾಡಂಚಿನಲ್ಲಿ 123 ಗ್ರಾಮಗಳಿದ್ದು ಯಾವುದೇ ಜಮೀನಿಗೆ ಆನೆ ಬಂದರೂ ಸ್ವಲ್ಪಹೊತ್ತಿಗೆ ಅವುಗಳನ್ನು ಓಡಿಸಲಾಗುತ್ತಿದೆ. 70 ಕಿಮೀ ಮಾತ್ರ ರೈಲ್ವೆ ಕಂಬಿ ಅಳವಡಿಸಲಾಗಿದ್ದು ಇನ್ನೂ 200 ಕಿಮೀ ಅಳವಡಿಸಬೇಕಾಗಿದೆ. ಸದ್ಯ 27 ಕಿಮೀ ಅನುಮತಿ ದೊರಕಿದ್ದು ಆನೆಗಳ ಹಾವಳಿ ಹೆಚ್ಚಾಗಿರುವ ನುಗು, ಮೊಳೆಯೂರು ಮತ್ತು ಗೋಪಾಲಸ್ವಾಮಿಬೆಟ್ಟ ವಲಯಗಳಲ್ಲಿ ಕೈಗೊಳ್ಳಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಲಾಖೆಯಲ್ಲಿ ಸಿಬ್ಬಂದಿ ಹಾಗೂ ವಾಹನಗಳ ಕೊರತೆಯಿದ್ದರೂ ಕರೆ ಬಂದ ಕೂಡಲೇ ಸ್ಥಳಕ್ಕೆ ತೆರಳುತ್ತಿದ್ದಾರೆ. ಮಾನವ ವನ್ಯಜೀವಿ ಸಂಘರ್ಷ ಹಾಗೂ ಮಾನವ ಸಾವು ತಡೆಗಟ್ಟಲು ಶ್ರಮಿಸಲಾಗುತ್ತಿದೆ. ಕಳೆದ ವರ್ಷ ಸರ್ಕಾರದಿಂದ 3 ಕೋಟಿ ರೂ. ಅನುದಾನ ಬಂದಿದ್ದು ಬಹುತೇಕ ಬೆಳೆನಷ್ಟ ಪರಿಹಾರದ ಅರ್ಜಿಗಳಿಗೆ ಪರಿಹಾರ ನೀಡಲಾಗಿದೆ. ಬಂಡೀಪುರ ಹುಲಿ ಸಂರಕ್ಷಣಾ ನಿಧಿಯನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಚೆಕ್ ಪೋಸ್ಟ್‌ಗಳಿಗೆ ಆ್ಯಪ್ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಿ ವಾಹನಗಳ ಸಂಖ್ಯೆ ಹಾಗೂ ನಿಖರವಾದ ಚಲನವಲನಗಳನ್ನು ದಾಖಲಿಸಲು ವ್ಯವಸ್ಥೆ ಮಾಡ ಲಾಗುತ್ತಿದೆ. ಅರಣ್ಯ ಮಾರ್ಗದಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗಸ್ತು ನಡೆಸಲಾಗುತ್ತಿದೆ. ಗಿರಿಜನರ ಮಕ್ಕಳಿಗೆ ಸ್ಕಾಲರ್‌ಶಿಪ್, ಹಾಡಿಗಳಿಗೆ ಸೋಲಾರ್ ದೀಪ ಅಳವಡಿಕೆ, ಕರಕುಶಲ ಕೌಶಲ್ಯವೃದ್ಧಿಗೆ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ರಾಂಪುರ ಶಿಬಿರದ ಆನೆಗಳನ್ನು ದಸರೆಗೆ ಆಯ್ಕೆ ಮಾಡುವ ತಂಡ ಒಮ್ಮೆ ಭೇಟಿ ನೀಡಿದ್ದು ಮತ್ತೊಮ್ಮೆ ಆಯ್ಕೆ ಪ್ರಕ್ರಿಯೆ ನಡೆಸಲಿದೆ ಎಂದು ಹೇಳಿದರು. ಬಂಡೀಪುರ ಉಪ ವಿಭಾಗದ ಎಸಿಎಫ್ ಎನ್.ಪಿ.ನವೀನ್ ಕುಮಾರ್, ವಲಯಾರಣ್ಯಾಧಿಕಾರಿ ಎನ್.ಸಿ.ಮಹದೇವ, ಬಿ.ಎಂ.ಮಲ್ಲೇಶ್ ಪತ್ರಿಕಾಗೋಷ್ಠಿ ಇದ್ದರು.

ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ರಾಷ್ಟ್ರೀಯ ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ವ್ಯಾಪ್ತಿಯಲ್ಲಿ ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ ಮತ್ತು ಸಂಸ್ಕೃತಿ ಮತ್ತು ನೂತನ ಆವಿಷ್ಕಾರಗಳನ್ನು ಮಾಡಿ ಉತ್ತಮ ಸಾಧನೆ ಮಾಡಿದ 5 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ಎಲ್ಲಾ ಮಕ್ಕಳು ರಾಷ್ಟ್ರೀಯ ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ವೆಬ್‌ಸೈಟ್ https://awards.gov.in ಮೂಲಕ ಜುಲೈ 31ರೊಳಗೆ ಸಲ್ಲಿಸಬೇಕು. ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನ ಮೊದಲನೇ ಮಹಡಿಯ ಕೊಠಡಿ ಸಂಖ್ಯೆ 127ರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂ.ಸಂ.08226–222354 ಸಂಪರ್ಕಿಸಿ.

ಕೆಸ್ತೂರು ಗ್ರಾಮದಲ್ಲಿ ಪ್ರತಿಭಾ ಪುರಸ್ಕಾರ


ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಯಳಂದೂರು,ಜು.2(ವಿ.ನಾಗರಾಜು)– ತಾಲೂಕಿನ ಕೆಸ್ತೂರು ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಅಂಬೇಡ್ಕರ್ ಸಂಘ ಆಯೋಜಿಸಿತ್ತು.

ದೈಹಿಕ ಶಿಕ್ಷಕ ಕುಮಾರ್ ನಾಯಕ್ ಮಾತನಾಡಿ, ಸಮಾಜದಲ್ಲಿ ಏನಾದರೂ ಸಾಧಿಸಿ ಬದಲಾವಣೆ ತರಬೇಕಾದರೆ ಮೊದಲು ಶಿಕ್ಷಿತರಾಗಬೇಕು. ಈ ದಿಸೆಯಲ್ಲಿ ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳು ಉಳಿದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎಂದರು. ವಿದ್ಯಾರ್ಥಿಗಳನ್ನು ಗ್ರಾಮದ ಯಜಮಾನರು ಮುಖಂಡರು ಸಂಘದ ಪದಾಧಿಕಾರಿಗಳು ಸನ್ಮಾನಿಸಿದರು. ಮುಖ್ಯೋಪಾಧ್ಯಾಯ ಉಮಾಶಂಕರ್, ಗ್ರಾಮ ಪಂಚಾಯತಿ ಸದಸ್ಯರಾದ ಗುರುಲಿಂಗಯ್ಯ, ಮಹೇಂದ್ರ, ಪ್ರಸಾದ್, ವಿಚಾರವಾದಿ ಕೇಶವಮೂರ್ತಿ, ಯಜಮಾನರಾದ ನಾಗರಾಜು, ದೊರೆಸ್ವಾಮಿ, ಜಯರಾಜು, ಅಂಬೇಡ್ಕರ್ ಸಂಘದ ಅಧ್ಯಕ್ಷ ಸಚಿನ್. ಕಾರ್ಯದರ್ಶಿ ಮಹೇಂದ್ರ, ಕಿರಣ್ ಜೆ, ಸಂಜಯ್ ರಾಜ್, ಶಿವಕುಮಾರ್, ಸಾಗರ್ ಸಂದೀಪ್, ಶಿವು, ಮುಖಂಡರಾದ ಸಿದ್ದರಾಜು, ರಾಜು, ಮಧು, ಚಿನ್ನಸ್ವಾಮಿ ಕೆ.ಪತ್ರಕರ್ತ. ಪ್ರಸನ್ನ ಕುಮಾರ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ವಚನಗಳನ್ನು ಮುಂದಿನ ಪೀಳಿಗೆಗೆ ಪಸರಿಸಿದ ಫ.ಗು. ಹಳಕಟ್ಟಿ


ವಚನ ಪಿತಾಮಹ ಡಾ. ಫಗು. ಹಳಕಟ್ಟಿ ಜಯಂತಿಯನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಉದ್ಘಾಟಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ಇತರರು ಉಪಸ್ಥಿತರಿದ್ದರು.

ಚಾಮರಾಜನಗರ, ಜು.2–ಶಿವಶರಣರು ರಚಿಸಿದ ಮೂಲ ವಚನಗಳನ್ನು ಸಂಗ್ರಹಿಸಿ, ಮುದ್ರಿಸಿ ಮುಂದಿನ ಪೀಳಿಗೆಗೆ ಪರಿಚಯಿಸಿದ ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಸರ್ವ ಕಾಲಕ್ಕೂ ಮಾನ್ಯರಾಗಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ತಾಳೆಗರಿ, ಓಲೆಗರಿ, ಒಡ್ಡೋಲಗಳಲ್ಲಿ ಕೈಬರಹದಲ್ಲಿದ್ದ ವಚನಗಳನ್ನು ಸಂಗ್ರಹಿಸಿ, ಸಂಶೋಧನೆ ಮಾಡಿ, ಮುದ್ರಿಸಿ ಇಂದು ನಮಗೆ ದೊರಕುವ ಕೆಲಸವನ್ನು ಹಳಕಟ್ಟಿ ಮಾಡಿದ್ದಾರೆ ಎಂದರು.

ವೃತ್ತಿಯಲ್ಲಿ ವಕೀಲರಾಗಿದ್ದರೂ ವಚನಗಳನ್ನು ಸಂಗ್ರಹಿಸುವ ಅಸಕ್ತಿ ಬೆಳೆಸಿಕೊಂಡು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಫ.ಗು. ಹಳಕಟ್ಟಿ ಅವರ ವ್ಯಕ್ತಿತ್ವ, ಪರಿಶ್ರಮ, ತ್ಯಾಗ ನಮಗೆ ಮಾದರಿಯಾಗಿದೆ. ಹಳಕಟ್ಟಿಯವರ ಸಾಧನೆಯನ್ನು ಸ್ಮರಿಸುವ ಸಲುವಾಗಿ ಸರ್ಕಾರ ಅವರ ಜಯಂತಿಯನ್ನು ಆಚರಿಸಿ ಅಭಿನಂದಿಸುವ ಕೆಲಸ ಮಾಡಿದೆ. ಅವರ ಹಾದಿಯಲ್ಲಿ ನಾವೆಲ್ಲರೂ ಮುನ್ನಡೆಯೋಣ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಸುರೇಶ್ ಋಗ್ವೇದಿ ಅವರು ಮಾತನಾಡಿ ಮನುಷ್ಯನ ಜೀವನವನ್ನು ಪ್ರಜ್ಞಾಪೂರ್ವಕವಾಗಿ ಸಾತ್ವಿಕದೆಡೆಗೆ ಕೊಂಡೊಯ್ಯುವ ಶಕ್ತಿ ವಚನಗಳಿಗೆ ಇದೆ. ಇಂತಹ 22 ಸಾವಿರಕ್ಕೂ ಹೆಚ್ಚು ವಚನಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಮುದ್ರಿಸಿ ಮುಂದಿನ ತಲೆಮಾರಿಗೂ ಪಸರಿಸುವ ಕಾರ್ಯವನ್ನು ಹಳಕಟ್ಟಿಯವರು ಮಾಡಿದ್ದಾರೆ ಎಂದು ಸ್ಮರಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂಜುಂಡಯ್ಯ, ಮುಖಂಡರಾದ ದುಗ್ಗಹಟ್ಟಿ ಮಲ್ಲಿಕಾರ್ಜುನಪ್ಪ, ಬಿ.ಕೆ.ರವಿಕುಮಾರ್, ಕಾಳನಹುಂಡಿ ಗುರುಸ್ವಾಮಿ, ಜನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಕಾರ್ಯಕ್ರಮದಲ್ಲಿ ಇದ್ದರು.

ಗುಂಬಳ್ಳಿ ಗ್ರಾಪಂ ಸಾಮಾನ್ಯ ಸಭೆಯಲ್ಲಿ ಪಿಡಿಒಗೆ ತರಾಟೆ

ಯಳಂದೂರು, ಜು.2 (ವಿ.ನಾಗರಾಜು)– ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಪಿಡಿಒ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಮಾಜಿ ಅಧ್ಯಕ್ಷೆ ಮೀನಾ ಗೋವಿಂದ ಆರೋಪಿಸಿ ತರಾಟೆಗೆ ತೆಗೆದುಕೊಂಡ ಘಟನೆ ಇಂದು ನಡೆದ ಗುಂಬಳ್ಳಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಡೆಯಿತು.

ಕೊಮಾರನಪುರ, ಗುಂಬಳ್ಳಿ, ಉಪ್ಪಿನಮೋಳೆ ಸೇರಿದಂತೆ ಇತರೆ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೂರೈಕೆ, ಬೀದಿ ದೀಪ ಅಳವಡಿಕೆ, ಬೇಕಾಗಿರುವ ಪರಿಕರಗಳನ್ನು ನನ್ನ ಅಧ್ಯಕ್ಷ ಅವಧಿಯಲ್ಲಿ ಖರೀದಿಸಲಾಗಿತ್ತು ಇದಕ್ಕೆ ಇನ್ನೂ ಕೂಡ ಬಿಲ್ ಪಾವತಿ ಮಾಡಿಲ್ಲ. ಈ ಬಗ್ಗೆ ಪಿಡಿಒಗೆ ಕೇಳಿದರೆ ಇಲ್ಲಸಲ್ಲದ ನೆಪವೊಡ್ಡಿ ಪ್ರತಿನಿತ್ಯ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಚೇರಿಗೆ ಸರಿಯಾದ ಸಮಯಕ್ಕೆ ಬರುವುದಿಲ್ಲ. ಇವರು ಪ್ರಭಾರ ಪಿಡಿಒ ಆಗಿದ್ದು ವಾರಕ್ಕೆ ಮೂರು ದಿನ ಮಾತ್ರ ಭೇಟಿ ನೀಡುತ್ತಾರೆ. ಈ ಸಮಯದಲ್ಲಿ ಬಂದರೂ ಕೂಡ ಪೂರ್ಣ ಅವಧಿವರೆಗೆ ಪಂಚಾಯಿತಿಯಲ್ಲಿ ಇರುವುದಿಲ್ಲ. ಸಾರ್ವಜನಿಕರೊಂದಿಗೆ ಸರಿಯಾಗಿ ಸ್ಪಂದಿಸುವುದಿಲ್ಲ. ಅವರ ಅಹವಾಲು ಗಳನ್ನು ಸ್ವೀಕರಿಸಲು ಹಿಂದೇಟು ಹಾಕುತ್ತಾರೆ ಎಂದು ಪಿಡಿಒಗೆ ತರಾಟೆಗೆ ತೆಗೆದುಕೊಂಡರು.

ಪಂಚಾಯಿತಿಯ ನಾಮಫಲಕದಲ್ಲಿ ಬೇಕೆಂತಲೇ ಮಾಜಿ ಅಧ್ಯಕ್ಷೆಯಾಗಿರುವ ನನ್ನ ಹೆಸರನ್ನು ಕೊನೆಯಲ್ಲಿ ಹಾಕಲಾಗಿದೆ. ಪಂಚಾಯಿತಿಯ ಸಮಸ್ಯೆಗಳು, ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಿ ಎಂದು ಪ್ರಶ್ನಿಸಿದರೆ ಯಾರದೊ ಮಾತು ಕೇಳಿ ಕೊಂಡು ನನ್ನನ್ನು ಅವಮಾನಿಸಲಾಗಿದೆ ಎಂದು ಆರೋಪಿಸಿದರು.

ನಾಮಫಲಕದಲ್ಲಿ ಹೆಸರು ಹಾಕಿರುವ ವಿಚಾರವಾಗಿ ಗೊಂದಲ ಏರ್ಪಟ್ಟಿದೆ. ಇದು ಬೇಕೆಂತಲೇ ಮಾಡಿರುವ ತಪ್ಪಲ್ಲ. ಕಣ್ತಪ್ಪಿನಿಂದ ಹೀಗಾಗಿದ್ದು ಇದನ್ನು ಸರಿಪಡಿಸಲಾಗುವುದು. ಪಂಚಾಯಿತಿಯಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಅಧ್ಯಕ್ಷೆ ಪುಟ್ಟಮಾಧವಿ, ಸದಸ್ಯರು ಇದ್ದರು.


ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾಜಿ ಅಧ್ಯಕ್ಷೆ ಮೀನಾ ಗೋವಿಂದ ಮಾತನಾಡಿದರು.

ಇತಿಹಾಸ ಸಂಭ್ರಮ–2 ಭಿತ್ತಿಪತ್ರ ಬಿಡುಗಡೆ



ಜುಲೈ 4 ರಂದು ನಡೆಯಲಿರುವ ಇತಿಹಾಸ ಸಂಭ್ರಮ –2 ಕಾರ್ಯಕ್ರಮದ ಭಿತ್ತಿ ಪತ್ರವನ್ನು ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್.ಉದಯಶಂಕರ್ ಬಿಡುಗಡೆ ಮಾಡಿದರು. ದೇವನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಚನ್ನಬಸಪ್ಪ, ಇತಿಹಾಸ ವೇದಿಕೆಯ ಅಧ್ಯಕ್ಷ ಹೆಚ್.ಬಿ. ವಾಸು, ಇತಿಹಾಸ ಉಪನ್ಯಾಸಕರಾದ ಸತ್ಯನಾರಾಯಣ, ಪೂರ್ಣಚಂದ್ರ, ಡಾ.ಉಮೇಶ್, ಗಣೇಶ್, ಮಹೇಶ್, ಉಮೇಶ್, ವಿನೇಶ್, ಡಾ.ನಾಗರತ್ನ, ಅನು ಉಪಸ್ಥಿತರಿದ್ದರು.

ಮಂಗನ ಬಾಯಾರಿಕೆ ನೀಗಿಸಿದ ಕುಲಸಚಿವೆ ಎಂ.ಕೆ.ಸವಿತಾ



ಮೈಸೂರು, ಜು.2– ಆಷಾಢ ಮಾಸದ ಅಂಗವಾಗಿ ಮನೆಯಲ್ಲಿ ನಡೆಯುತ್ತಿದ್ದ ಪೂಜಾ ಕಾರ್ಯಕ್ರಮದ ನಡುವೆ ಅತೀವ ಬಾಯಾರಿಕೆಯಿಂದ ಬಳಲಿ ಬಂದ ಮಂಗನಿಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ನೀರುಣಿಸಿ, ಮಾನವೀಯತೆ ಮೆರೆದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ಪಶು, ಪ್ರಾಣಿ–ಪಕ್ಷಿಗಳ ಬಾಯಾರಿಕೆ ಹಾಗೂ ಹಸಿವು ನೀಗಿಸುವುದು ಮನುಷ್ಯ ಧರ್ಮ. ಕೆಲವೊಮ್ಮೆ ಮನುಷ್ಯರಿಂದ ಸಹಾಯ ಬಯಸುತ್ತವೆ. ಆ ವೇಳೆಯಲ್ಲಿ ನಾವು ಪ್ರೀತಿಯಿಂದ ಅವುಗಳನ್ನು ಕಂಡು ಆಹಾರ ಹಾಗೂ ನೀರು ಕೊಡುವುದು ಒಳ್ಳೆಯದು ಎಂದರು.

ಪ್ರಾಣಿಗಳು ಕಾಡಿನಲ್ಲಿ ವಾಸಿಸುವಾಗ ನೀರು, ಆಹಾರ ಅರಸಿ ಹತ್ತಾರು ಕಿ.ಮೀ. ವಲಸೆ ಹೋಗುತ್ತವೆ. ವನ್ಯಜೀವಿಗಳಿಗೆ ಅದು ಸಾಮಾನ್ಯವಾಗಿರುತ್ತದೆ. ಆದರೆ ನಾಡಿನಲ್ಲಿ ಬದುಕುವ ಪ್ರಾಣಿ, ಪಕ್ಷಿಗಳು ತಮ್ಮ ಆಹಾರಕ್ಕಾಗಿ ಮನುಷ್ಯರೆಡೆಗೆ ಬಂದಾಗ ಸಹಾನುಭೂತಿಯಿಂದ ವರ್ತಿಸಬೇಕು.

ಪ್ರಾಣಿಗಳಿಗೆ ಮನುಷ್ಯನಿಗಿಂತ ಹೆಚ್ಚು ಜ್ಞಾನ, ಪ್ರೀತಿ ಇರುತ್ತದೆ. ಆ ಸಮಯದಲ್ಲಿ ರಕ್ಷಣೆ ಮಾಡುವ ಕೆಲಸ ಮನುಷ್ಯನ ಜವಾಬ್ದಾರಿಯೂ ಹೌದು. ಎಲ್ಲೇ ಆಗಲಿ, ಯಾರೇ ಆಗಲಿ ಹಸಿವಿನಿಂದ ಬಳಲುವ ಪ್ರಾಣಿಗಳ ಪೋಷಿಸಬೇಕು ಎಂದು ಅಭಿಪ್ರಾಯಪಟ್ಟರು.



ಎಂ. ಕಿರಣ್‌ಕುಮಾರ್‌ಗೆ ಪಿಎಚ್.ಡಿ

ಮೈಸೂರು, ಜು.2– ಡಾ. ರುಬಿ ಸಲೆಸ್ಟೀನಾ ಅವರ ಮಾರ್ಗದರ್ಶನದಲ್ಲಿ ಎಂ. ಕಿರಣ್‌ಕುಮಾರ್ ಅವರು ಪ್ರಾಚೀನ ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪ್ರೀ ಸ್ಕೂಲ್ ಉದ್ಘಾಟನೆ



ಶ್ರೀಕಾಂತ ವಿದ್ಯಾಸಂಸ್ಥೆಗಳ ಶ್ರೀ ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಡಿಯಲ್ಲಿ ಶ್ರೀಕಾಂತ ಪ್ರೀ ಸ್ಕೂಲನ್ನು ಉದ್ಘಾಟಿಸಲಾಯಿತು. ಗೌರವ ಕಾರ್ಯದರ್ಶಿ ಎ.ಜಿ. ರಘು, ಖಜಾಂಚಿ ಎಂ.ಎಲ್. ಅನಂತನಾರಾಯಣ, ಪ್ರೀ ಸ್ಕೂಲ್ ಮುಖ್ಯ ಆಡಳಿತ ಅಧಿಕಾರಿ ಶ್ರೀಮತಿ ಪೂರ್ಣಿಮಾ ಶರತ್, ಸಂಸ್ಥೆಯ ಹಿರಿಯ ಶಿಕ್ಷಕರು, ಅಧ್ಯಾಪಕ ವೃಂದ ಹಾಜರಿದ್ದರು.

ಇಂದಿನಿಂದ ಪೌಷ್ಟಿಕಾಂಶದ ಕುರಿತು ಅಭಿಯಾನ

ಮೈಸೂರು,ಜು.2– ರಾಜ್ಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 2025–26ನೇ ಸಾಲಿನ ಪೋಷಣ ಅಭಿಯಾನದಡಿ ಪೌಷ್ಟಿಕಾಂಶದ ಮಹತ್ವದ ಕುರಿತು ಗುರುವಾರದಿಂದ ಜು.17ರವರೆಗೆ ಅಭಿಯಾನ ಪಾಲ್ಗೊಂಡು ಯಶಸ್ವಿಗೊಳಿಸಲು ಸೂಚಿಸಿದೆ. ಶಾಲೆಗಳಲ್ಲಿ ಸಮತೋಲಿತ ಆಹಾರ, ಪೋಷಣೆ ಮತ್ತು ಆರೋಗ್ಯಕರ ಆಹಾರ ಪದ್ಧತಿಯ ಪ್ರಯೋಜನಗಳ ಪ್ರಾಮುಖ್ಯತೆಯನ್ನು ಕೇಂದ್ರೀಕರಿಸಿ ವಿವಿಧ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು, ಪೋಷಕರಿಗೆ ಜಾಗೃತಿ ಮೂಡಿಸುವುದು. ಪೌಷ್ಟಿಕತೆಯ ಸಾಕ್ಷರತಾ ಅಭಿಯಾನ, ಸ್ಪರ್ಧೆಗಳು ಮತ್ತು ಚಟುವಟಿಕೆಗಳು, ಪೋಷಕರ ಪಾಲ್ಗೊಳ್ಳುವಿಕೆ, ಸಾಂಪ್ರದಾಯಿಕ ಮತ್ತು ಸ್ಥಳೀಯ ಆಹಾರ ಉತ್ತೇಜಿಸುವುದು, ಆರೋಗ್ಯ ಮತ್ತು ನೈರ್ಮಲ್ಯ ಜಾಗೃತಿ ಮೂಡಿಸುವಂತೆ ಬೆಂಗಳೂರು ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ ನಿರ್ದೇಶಕರು ಸೂಚಿಸಿದ್ದಾರೆ.


ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜು.17ರಿಂದ ಸಾಲಿಗ್ರಾಮ, ಕೆ.ಆರ್.ನಗರ ನಾಲೆಗಳಿಗೆ ನೀರು

ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದ ಶಾಸಕ ಡಿ.ರವಿಶಂಕರ್ ಪ್ರಕಟ

ಕೆ.ಆರ್.ನಗರ, ಜು.2– ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಕಾವೇರಿ ನದಿ ಪಾತ್ರದ ನಾಲೆಗಳಿಗೆ ಜು.17 ರಿಂದ ನೀರು ಹರಿಸ ಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಬೀಚನಹಳ್ಳಿಕೊಪ್ಪಲು ಗ್ರಾಮದಲ್ಲಿ ಹಂಪಾಪುರ–ಸಾಲಿಗ್ರಾಮ ಮುಖ್ಯ ರಸ್ತೆಯಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿ ಮಾತನಾಡಿದ ಅವರು, ನೀರು ಹರಿಸುವ ಮುನ್ನ ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳು ನಾಲೆ ಏರಿಗಳ ಮೇಲೆ ಸಂಚರಿಸಿ ಸರಾಗವಾಗಿ ನೀರು ಹರಿದು ಹೋಗುವಂತೆ ಹೂಳು ತೆಗೆಸಬೇಕೆಂದು ಸೂಚಿಸಿದರು.


ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಡಿ.ರವಿಶಂಕರ್ ಪರಿಶೀಲಿಸಿದರು.

ಬೀಚನಹಳ್ಳಿಕೊಪ್ಪಲು ಗ್ರಾಮದ ಸಂಪರ್ಕ ರಸ್ತೆ ಕಾಮಗಾರಿಗೆ 2.5 ಕೋಟಿ ಹಣ ಮಂಜೂರಾಗಿದ್ದು, 1.5 ಕಿಮೀ ದೂರದ ರಸ್ತೆಯಲ್ಲಿ 1 ಕಿಮೀ ಡಾಂಬರು ಮತ್ತು ಉಳಿದ 0.5 ಕಿಮೀ ಸಿಮೆಂಟ್ ರಸ್ತೆ ಮಾಡಲಾಗುತ್ತದೆ ಎಂದರು.

ಕೆ.ಆರ್.ನಗರ ತಾಲೂಕಿನ ಹೊಸ ಅಗ್ರಹಾರ ಮತ್ತು ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿ ಕೇಂದ್ರ ವ್ಯಾಪ್ತಿಯ ಗ್ರಾಮಗಳ ಎಲ್ಲಾ ಕೆರೆಗಳಿಗೂ ಕಾವೇರಿ ನದಿಯಿಂದ ನೀರು ತುಂಬಿಸುವ ಕಾರ್ಯಕ್ಕೆ ರಾಜ್ಯ ಸರ್ಕಾರ 50 ಕೋಟಿ ಹಣ ನೀಡಲಿದೆ ಎಂದರು.

ನಾನು ಶಾಸಕನಾದ ಕಳೆದ 2 ವರ್ಷಗಳ ಅವಧಿಯಲ್ಲಿ ಜಾತಿ ಮತ್ತು ಪಕ್ಷ ರಾಜಕಾರಣ ಮಾಡದೆ ಕ್ಷೇತ್ರಾದ್ಯಂತ ಅಭಿವೃದ್ಧಿ ಕೆಲಸ ಮಾಡುತ್ತಿದ್ದು, ಇದಕ್ಕೆ ಸರ್ವರೂ ಸಹಕಾರ ನೀಡಬೇಕು ಎಂದು ಕೋರಿದರು.

ಜನರ ತೆರಿಗೆ ಹಣದಲ್ಲಿ ನಡೆಯುವ ಸಾರ್ವಜನಿಕ ಕಾಮಗಾರಿಗಳನ್ನು ಗ್ರಾಮಸ್ಥರು ಪರಿಶೀಲಿಸಿ ಕಳಪೆ ಗುಣಮಟ್ಟ ಕಂಡು ಬಂದಲ್ಲಿ ಅಧಿಕಾರಿಗಳಿಗೆ ಮತ್ತು ನನಗೆ ದೂರು ನೀಡಬೇಕೆಂದು ನುಡಿದ ಶಾಸಕರು ಈ ವಿಚಾರದಲ್ಲಿ ನಾಗರಿಕರು ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಬೀಚನಹಳ್ಳಿ ಗೇಟ್ ಬಳಿ ಈ ಭಾಗದಲ್ಲಿ ಸಂಚರಿಸುವ ಎಲ್ಲಾ ಸಾರಿಗೆ ಬಸ್ಸುಗಳ ನಿಲುಗಡೆಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಡಿ.ರವಿಶಂಕರ್ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕೆಂದು ಆದೇಶಿಸಿದರು.

ಹಂಪಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಪಿ.ಪ್ರಶಾಂತ್, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಾಣಿ, ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಗ್ರಾಪಂ ಸದಸ್ಯರಾದ ಯೋಗೇಶ್ ಸುಜಾತ, ಅರುಣ್, ಜಲ ಸಂಪನ್ಮೂಲ ಇಲಾಖೆ ಸಾಲಿಗ್ರಾಮ ವಿಭಾಗದ ಕಾರ್ಯಪಾಲಕ ಅಭಿಯಂತರ ಕುಶಕುಮಾರ್, ಕೆ.ಆರ್.ನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಅಯಾಜ್ ಪಾಷಾ, ಪಂಚಾಯತ್ ರಾಜ್ ಉಪ ವಿಭಾಗದ ಸಹಾಯಕ ಅಭಿಯಂತರ ರವಿಕುಮಾರ್, ಗ್ರಾಮದ ಮುಖಂಡರಾದ ಸುರೇಶ್, ಕೆಂಪೇಗೌಡ, ಯಶವಂತ್, ಮಹದೇವ ಮತ್ತಿತರರಿದ್ದರು.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆ


ಮೈಸೂರು ಮತ್ತು ಚಾಮರಾನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೂತನ ನಿರ್ದೇಶಕರೂ ಆದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಹುಣಸೂರು ದಸಂಸ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ದೇವೇಂದ್ರ, ಗಜೇಂದ್ರ, ಕೆಂಪರಾಜು, ವೇಣುಗೋಪಾಲ, ಮಲ್ಲಿಕ್ ಪಾಷ, ದಾಸಪ್ಪ, ಶ್ರೀನಿವಾಸ, ರಾಘವೇಂದ್ರ ಆಚಾರ್, ಮಹದೇವ, ವೆಂಕಟೇಶ್ ಇತರರಿದ್ದರು.

ಜು.5ಕ್ಕೆ, ಪೂರ್ವಭಾವಿ ಸಭೆ

ಬನ್ನೂರು, ಜು.2– ಪಟ್ಟಣದ ಶ್ರೀಕಾಳಮ್ಮ ಸಮುದಾಯ ಭವನದಲ್ಲಿ ಜು.5ರಂದು ಸಂಜೆ ಗಂಟೆಗೆ ಬನ್ನೂರು ತಾಲೂಕು ರಚನೆಗೆ ಆಗ್ರಹಿಸಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ. ಎಲ್ಲಾ ರಾಜಕೀಯ ಪಕ್ಷದ ಮುಖಂಡರು, ಸಂಘ ಸಂಸ್ಥೆ, ರೈತ, ವಿವಿಧ ಸಮುದಾಯದ ಮುಖಂಡರು ಸೇರದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಮಂಟೇಸ್ವಾಮಿ ಗದ್ದುಗೆ ಪ್ರಥಮ ವಾರ್ಷಿಕೋತ್ಸವ

ತಿ.ನರಸೀಪುರ, ಜು.2– ತಾಲೂಕಿನ ಮೂಗೂರು ಗ್ರಾಮದ ಶ್ರೀರಾಮ ಕಾಲೋನಿಯಲ್ಲಿರುವ ಶ್ರೀಮಂಟೇಸ್ವಾಮಿ ಗದ್ದುಗೆಯ ಪ್ರಥಮ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ತಾಲೂಕಿನ ಮೂಗೂರು ಗ್ರಾಮದ ಶ್ರೀರಾಮ ಕಾಲೋನಿಯಲ್ಲಿ ಸಂಪೂರ್ಣವಾಗಿ ಶಿಥಿಲಗೊಂಡಿದ್ದ ಶ್ರೀಮಂಟೇಸ್ವಾಮಿ ಗದ್ದಿಗೆಯನ್ನು ಜೀರ್ಣೋದ್ಧಾರ ಗೊಳಿಸಿ ವರ್ಷ ತುಂಬಿದ ಹಿನ್ನೆಲೆಯಲ್ಲಿ ಧಾರ್ಮಿಕ ಉತ್ಸವ ಹಾಗೂ ದಾಸೋಹ ಕಾರ್ಯಕ್ರಮ ವೈಭವದಿಂದ ನಡೆಯಿತು.

ಸಮಾಜ ಸೇವಕರಾದ ಜಯಮ್ಮ ಸುಂದರ್ ಮಾತನಾಡಿ, ಪುರಾಣ ಪ್ರಸಿದ್ಧ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯವಿರುವ ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ಗದ್ದುಗೆ ಶಿಥಿಲಗೊಂಡಿತ್ತು. ಗದ್ದುಗೆ ಜೀರ್ಣೋದ್ಧಾರಗೊಳಿಸುವಂತೆ ಗ್ರಾಮಸ್ಥರು ಮನವಿ ಮಾಡಿದ ಹಿನ್ನೆಲೆಯಲ್ಲಿ ನಮ್ಮ ಕುಟುಂಬಕ್ಕೆ ದೇವರ ಶ್ರೀರಕ್ಷೆ ಅಪೇಕ್ಷಿಸಿ, ಜೀರ್ಣೋದ್ಧಾರ ಕಾರ್ಯ ಪೂರ್ಣಗೊಳಿಸಿದೆವು ಎಂದರು.


ಶ್ರೀಮಂಟೇಸ್ವಾಮಿ ಗದ್ದುಗೆಯ ಪ್ರಥಮ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೂಗೂರು ಗ್ರಾಮ ನಮ್ಮ ಕುಟುಂಬಕ್ಕೆ ಮಾತೃ ವಾತ್ಸಲ್ಯ ತುಂಬಿರುವ ಸ್ಥಳ. ಶ್ರೀರಾಮ ಕಾಲೋನಿಯಲ್ಲಿರುವ ಶ್ರೀಮಂಟೇಸ್ವಾಮಿ ಹಾಗೂ ಶ್ರೀಚೆನ್ನಪ್ಪಾಜಿ ಗದ್ದುಗೆಯಲ್ಲಿ ಸೋಮವಾರ ಮತ್ತು ಶುಕ್ರವಾರ ಪೂಜೆ ಮಾಡಿಕೊಂಡು ಬರಲಾಗುತ್ತದೆ. ಇಲ್ಲಿಗೆ ಅಪಾರ ಭಕ್ತರು ಆಗಮಿಸುತ್ತಾರೆ. ಕಾರ್ತಿಕ ಮಾಸದ ವೇಳೆ ಕುರುಬನಕಟ್ಟೆ ಕಂಡಾಯ ಕೂಡ ಧರಿಸಿ ಮೆರವಣಿಗೆ ಮಾಡುವ ಪ್ರತೀತಿಯಲ್ಲಿದೆ. ಇದನ್ನರಿತು ಧಾರ್ಮಿಕ ಕೇಂದ್ರ ಅಭಿವೃದ್ಧಿಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಆಧುನಿಕ ವಿನ್ಯಾಸಕ್ಕೆ ತಕ್ಕಂತೆ ಜೀರ್ಣೋದ್ಧಾರ ಮಾಡಲಾಗಿದೆ ಎಂದರು.

ಈ ವೇಳೆ ಜಯಮ್ಮ ಸುಂದರ್, ಪುತ್ರ, ಸಮುದಾಯದ ಮುಖಂಡ ಶಂಕರ್ ಹಾಗೂ ಅವರ ಪುತ್ರ ರಾಹುಲ್ ಸೇರಿದಂತೆ ಸಮಸ್ತ ಕುಟುಂಬ ಶ್ರೀಮಂಟೇಸ್ವಾಮಿ ಗದ್ದುಗೆ ಪೂಜೆ ಸಲ್ಲಿಸಿದರು. ಶ್ರೀರಾಮ ಕಾಲೋನಿಯಲ್ಲಿ ಬೆಳಗ್ಗೆಯಿಂದಲೇ ಪೂಜಾ ವಿಧಿ ವಿಧಾನಗಳು, ಯಜ್ಞಾದಿಗಳು ಹಾಗೂ ಕಂಡಾಯ ಮೆರವಣಿಗೆ, ಡೋಲು, ನಗಾರಿಗಳ ಶಬ್ದಗಳ ನಡುವೆ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ನಡೆಯಿತು. ದಾಸೋಹದಲ್ಲಿ ಸಾವಿರಾರು ಜನ ಪ್ರಸಾದ ಸ್ವೀಕರಿಸಿದರು.

ಗ್ರಾಮಠಾಣಾ ಜಾಗ ಒತ್ತುವರಿ ತೆರವಿಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಜು.2– ತಾಲೂಕಿನ ಚಲ್ಲಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮ ಠಾಣಾ ಜಾಗ ಒತ್ತುವರಿ ತೆರವುಗೊಳಿಸುವಂತೆ ಒತ್ತಾಯಿಸಿ ಬುಧವಾರ ಚಲ್ಲಹಳ್ಳಿ ಗ್ರಾಪಂ ಆವರಣದಲ್ಲಿ ರೈತ ಸಂಘ ಹಾಗೂ ದಸಂಸ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಣ್ಣ ಮಾತನಾಡಿ, ಚಲ್ಲಹಳ್ಳಿ ಗ್ರಾಪಂ ವ್ಯಾಪ್ತಿಯ ಬೆಂಕಿಪುರ ಹಾಗೂ ಅನ್ನರಾಯಪುರ ಗ್ರಾಮಸ್ಥರ ಗ್ರಾಮಠಾಣಾ ಜಾಗವನ್ನು ಖಾಸಗಿಯವರು ಹಾಗೂ ಬಂಡವಾಳ ಶಾಹಿಗಳು ತಮಗಿಷ್ಟ ಬಂದಂತೆ ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತೆರವುಗೊಳಿಸುವಂತೆ ಕಳೆದ 1 ವರ್ಷದಿಂದ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಒತ್ತುವರಿ ತೆರವುಗೊಳಿಸಿ ಕಾನೂನು ಕ್ರಮ ಕೈಗೊಂಡು ನಿವೇಶನ ಇಲ್ಲದವರಿಗೆ ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಬಳಸಿಕೊಳ್ಳಲು ಅವಕಾಶ ನೀಡಬೇಕಾಗಿ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು.


ಗ್ರಾಮ ಠಾಣಾ ಜಾಗ ಒತ್ತುವರಿ ತೆರವುಗೊಳಿಸುವಂತೆ ಒತ್ತಾಯಿಸಿ ದಸಂಸ ವತಿಯಿಂದ ತಹಸೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಮಂಜುನಾಥ್, ಒತ್ತುವರಿಯಾಗಿರುವ ಜಾಗ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ತಾಪಂ ಇಓ ಹೊಂಗಯ್ಯ ಮಾತನಾಡಿ, ಒತ್ತುವರಿಯಾದ ಪ್ರದೇಶವನ್ನು ಅಳತೆ ಮಾಡಿಸಿ ನಿವೇಶನ ರಹಿತರಿಗೆ ಮಂಜೂರು ಮಾಡಲಾಗುವುದು ಎಂದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ರೈತ ಸಂಘದ ರಾಮೇಗೌಡ, ಧನಂಜಯ, ಸೋಮಣ್ಣ, ಈಶ್ವರ, ಕುಚೇಲಗೌಡ, ಚಾಮೇಗೌಡರು, ರಾಮೇಗೌಡ, ಗ್ರಾಪಂ ಸದಸ್ಯರಾದ ದೇವರಾಜು, ಪಿಡಿಓ ನವೀನ್, ಕಾರ್ಯದರ್ಶಿ ರಮೇಶ್, ಮಂಜುಳಾ, ದಸಂಸದ ದೇವೇಂದ್ರ, ಗಜೇಂದ್ರ, ಕೆಂಪರಾಜು, ಮಲ್ಲಿಕ್ ಪಾಷ ಇತರರಿದ್ದರು.

ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮೌನ ಮೆರವಣಿಗೆ

ತಿ.ನರಸೀಪುರ, ಜು.2– ಪ್ರಾಥಮಿಕ ಶಾಲಾ ಶಿಕ್ಷಕರ ಹೆಚ್ಚುವರಿ ಮರು ಹೊಂದಾಣಿಕೆ ರದ್ದು ಪಡಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಿ.ನರಸೀಪುರ ತಾಲೂಕು ಘಟಕದಿಂದ ಬುಧವಾರ ಮೌನ ಮೆರವಣಿಗೆಯೊಂದಿಗೆ ಪ್ರತಿಭಟನೆ ನಡೆಸಲಾಯಿತು.


ಬೇಡಿಕೆ ಈಡೇರಿಸುವಂತೆ ಬಿಇಓಗೆ ಮನವಿ ಸಲ್ಲಿಸಲಾಯಿತು.

ಇಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮುಂಭಾಗದಿಂದ ಮೌನ ಮೆರವಣಿಗೆ ನಡೆಸಿದ ಶಿಕ್ಷಕರು, ಸರ್ಕಾರಿ ನೌಕರರು ತಾಲೂಕು ಕಚೇರಿವರೆಗೂ ಸಾಗಿ ಕೆಲಕಾಲ ಪ್ರತಿಭಟನೆ ನಡೆಸಿ ಬೇಡಿಕೆ ಈಡೇರಿಸುವಂತೆ ತಾಲೂಕು ದಂಡಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ನೌಕರರ ಸಂಘ ಮತ್ತು ಶಿಕ್ಷಕರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ ಮಾತನಾಡಿ, ಸಿ ಆಂಡ್ ಆರ್ ನಿಯಮ ತಿದ್ದುಪಡಿಯಾಗದೇ ಯಾವುದೇ ಹೆಚ್ಚುವರಿ ಮರು ಹೊಂದಾಣಿಕೆ ಮಾಡಬಾರದು. 2020ರ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಕಾಯ್ದೆಯನ್ವಯ ಕಡ್ಡಾಯ ವರ್ಗಾವಣೆಯನ್ನು ಮೊದಲು ಮಾಡಬೇಕು. ಹೆಚ್ಚುವರಿ ನಿಯಮದಲ್ಲಿ ಮುಖ್ಯ ಶಿಕ್ಷಕರ ಹುದ್ದೆಯನ್ನು ಪಿಟಿಆರ್‌ನಿಂದ ಕೈ ಬಿಡಬೇಕು. ಹೆಚ್ಚುವರಿ ಮರು ಹೊಂದಾಣಿಕೆಯನ್ನು ತಾಲೂಕಿನೊಳಗೆ ಮಾತ್ರ ಮಾಡಬೇಕು. ಜಿಲ್ಲಾ ಹಂತದಲ್ಲಿ ಮರು ಹೊಂದಾಣಿಕೆ ಕೈ ಬಿಡಬೇಕು ಎಂದರು.

ಹೆಚ್ಚುವರಿ(ಪಿಎಸ್‌ಟಿ) ಶಿಕ್ಷಕರಿಗೆ ಖಾಲಿ ಇರುವ ಜಿಪಿಟಿ ಹುದ್ದೆಗಳಿಗೆ ಅವಕಾಶ ನೀಡಬೇಕು. ಸರ್ಕಾರಿ ಶಾಲೆಗಳು ವಿಷಯಾಧಾರಿತ ಹಾಗೂ ತರಗತಿಗೊಬ್ಬ ಶಿಕ್ಷಕರ ಕೊರತೆ ಎದುರಿಸುತ್ತಿವೆ. ಹಾಗಾಗಿ ಹೆಚ್ಚುವರಿ ಕೈ ಬಿಡಬೇಕು. ಹೆಚ್ಚುವರಿ ಮರು ಹೊಂದಾಣಿಕೆ ಮಾಡುವ ಸಂದರ್ಭ 2024–2026ನೇ ಸಾಲಿನ ವಿದ್ಯಾರ್ಥಿಗಳ ದಾಖಲಾತಿ ಮತ್ತು 2025–2026ನೇ ಸಾಲಿನ ದಾಖಲಾತಿಯಲ್ಲಿ ಯಾವುದೇ ಹೆಚ್ಚು ಇರುತ್ತದೋ, ಆ ವರ್ಷದ ದಾಖಲಾತಿಯನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ನಾಗೇಶ್, ಸುಬ್ರಹ್ಮಣ್ಯ, ಕಾರ್ಯಾಧ್ಯಕ್ಷ ಗಜೇಂದ್ರ, ಉಪಾಧ್ಯಕ್ಷ ಸಿದ್ದಮಲ್ಲಪ್ಪ, ರಾಜ್ಯ ಪರಿಷತ್ ಸದಸ್ಯ ರೇವಣ್ಣ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಪುಟ್ಟಸ್ವಾಮಿ, ಎನ್‌ಪಿಎಸ್ ನೌಕರ ಸಂಘದ ಅಧ್ಯಕ್ಷ ಶ್ರೀಧರ್, ಪದವೀಧರ ಶಿಕ್ಷರ ಸಂಘದ ಅಧ್ಯಕ್ಷ ಸಿ.ಮಹದೇವ ಸ್ವಾಮಿ, ಮುಖ್ಯ ಶಿಕ್ಷಕ ಸಂಘದ ಅಧ್ಯಕ್ಷ ಸಿ.ಶಿವಣ್ಣ, ಸಂಘದ ಮಹಿಳಾ ಘಟಕದ ಅಧ್ಯಕ್ಷರಾದ ಸತ್ಯವತಿ, ಸಾವಿತ್ರಿಬಾಯಿ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ರಾಜೇಂದ್ರ ಬಾಬು, ದೈಹಿಕ ಶಿಕ್ಷಕರ ಸಂಘದ ಕಾರ್ಯ ದರ್ಶಿ ಮಲ್ಲೇಶ್, ನೌಕರರ ಸಂಘದ ಸುರೇಶ್, ನಿವೃತ್ತ ದೈಹಿಕ ಶಿಕ್ಷಕ ವಿನೋದ್ ಕುಮಾರ್, ಪದಾಧಿಕಾರಿಗಳು ಸೇರಿದಂತೆ ನೌಕರರು, ಶಿಕ್ಷಕರು ಇದ್ದರು.

ವಿಜೃಂಭಣೆಯ ವಾರಾಹಿ, ಮಾರಮ್ಮನವರ ಕೊಂಡೋತ್ಸವ

ಹೆಚ್.ಡಿ.ಕೋಟೆ, ಜು.2– ಪಟ್ಟಣದ ಶಕ್ತಿದೇವತೆ ವಾರಾಹಿ ಮತ್ತು ಮಾರಮ್ಮನವರ ಜಾತ್ರಾ ಮಹೋತ್ಸವ ಮತ್ತು ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದಲ್ಲಿ 3 ದಿನಗಳ ಕಾಲ ಶ್ರದ್ಧಾಭಕ್ತಿಯಿಂದ ನಡೆದ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಮಂಗಳವಾದ್ಯದೊಂದಿಗೆ ಕಪಿಲಾ ನದಿಯಲ್ಲಿ ಪೂಜೆ ಸಲ್ಲಿಸಿ ಗಂಗೆಯನ್ನು ತರಲಾಯಿತು. ಈ ವೇಳೆ ಶಾಸಕ ಅನಿಲ್, ತಹಸೀಲ್ದಾರ್ ಶ್ರೀನಿವಾಸ್ ಹಾಗೂ ಪಟೇಲ್ ನಾಗರಾಜಶೆಟ್ಟಿ ಅವರು ಕುಟುಂಬದ ಸದಸ್ಯರೊಂದಿಗೆ ಆಗಮಿಸಿ ದೇವರಿಗೆ ತಂಪಿನ ಪೂಜೆ ಸಲ್ಲಿಸಿದರು. ಇದೇ ವೇಳೆ ದೇವಾಲಯ ಸಮಿತಿಯವರು ತಹಸೀಲ್ದಾರ್ ಶ್ರೀನಿವಾಸ್, ಆರಕ್ಷಕ ನಿರೀಕ್ಷಕ ಗಂಗಾಧರ್ ಅವರನ್ನು ಅಭಿನಂದಿಸಿದರು.

ಮಂಗಳವಾರ ಬೆಳಗ್ಗೆ 8 ಗಂಟೆಗೆ ದೇವರಿಗೆ ಹೋಮ ಹವನ, ಮಂಗಳಾರತಿ ನಡೆಸಿ ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಕೊಂಡೋತ್ಸವಕ್ಕೆ ತರಲಾಗಿದ್ದ ಒಂದೇ ಜಾತಿಯ ಕಗ್ಗಲಿ ಮರಗಳನ್ನು ಜೋಡಿಸಿ ರಾತ್ರಿ 8.30ಕ್ಕೆ ಹನುಮಂತ ನಗರದ ಪೂಜಾರಿ ಕೃಷ್ಣ ಅವರ ಮನೆಯಿಂದ ಬೆಂಕಿ ತಂದು ಬೆಂಕಿ ಸ್ಪರ್ಶ ನೀಡಲಾಯಿತು.



ಅಲಂಕೃತಗೊಂಡ ವಾರಾಹಿ ಮತ್ತು ಮಾರಮ್ಮ. ಮತ್ತೊಂದು ಚಿತ್ರದಲ್ಲಿ ಕೊಂಡೋತ್ಸವ ಕಾಣಬಹುದು.

ಬುಧವಾರ ಬೆಳಗ್ಗೆ ಗುಳಿಗೆ ಕೆಂಡವನ್ನು ನೂಕಲಾಗಿ ಕೊಂಡದ ಸುತ್ತ ನೂರೊಂದು ಎಡೆ ಇಟ್ಟು ಪೂಜೆ ಸಲ್ಲಿಸಲಾಯಿತು.

ನಂತರ ನೇಮಕವಾಗಿದ್ದ ಐವರು ಕೊಂಡ ಹಾಯ್ದರು. ನಂತರ ಸಾವಿರಾರು ಭಕ್ತರು ಕೊಂಡಕ್ಕೆ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿದರು. ಸಂಜೆ 5 ಗಂಟೆಗೆ ಪಟ್ಟಣದ ಸಿದ್ದಪ್ಪಾಜಿ ರಸ್ತೆಯ ನಾಗರಿಕರು ಮೆರವಣಿಗೆಯಲ್ಲಿ ಬಂದು ವಥೆ ಪೂಜೆ ನೆರವೇರಿಸಿದರು. ಕೊಂಡೋತ್ಸವದಲ್ಲಿ ಸಾವಿರಾರು ಭಕ್ತರು ಮರಮ್ಮನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಅಲ್ಲದೇ ಸಿಪಿಐ ಗಂಗಾಧರ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. 9 ವರ್ಷಗಳ ನಂತರ ನಡೆದ ವಾರಹಿ ಮತ್ತು ಮಾರಮ್ಮನವರ ಜಾತ್ರಾ ಮಹೋತ್ಸವ ಹಾಗೂ ಕೊಂಡೋತ್ಸವಕ್ಕೆ ಎಲ್ಲಾ ಕೋಮಿನ ಯಜಮಾನರು, ಸಾರ್ವಜನಿಕರು, ಮುಖಂಡರು, ದೇವಸ್ಥಾನ ಕಮಿಟಿ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

ಡೈರಿ ಅಧ್ಯಕ್ಷರು, ನಿರ್ದೇಶಕರಿಗೆ ಸನ್ಮಾನ


ಹೆಚ್.ಡಿ.ಕೋಟೆ ತಾಲೂಕಿನ ಹಿರೇಹಳ್ಳಿ ಎ ಕಾಲೋನಿ ಡೈರಿ ನೂತನ ಅಧ್ಯಕ್ಷ, ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಜು.2– ತಾಲೂಕಿನ ಹಿರೇಹಳ್ಳಿ ಎ ಕಾಲೋನಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ಪುನಶ್ಚೇತನಗೊಳಿಸಿ, ನೂತನ ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ನಿರ್ದೇಶಕರನ್ನು ಮೈಮುಲ್ ನಿರ್ದೇಶಕ ಕೆ. ಈರೇಗೌಡ ಸನ್ಮಾನಿಸಿದರು.

ಈ ವೇಳೆ ಸಹಾಯಕ ವ್ಯವಸ್ಥಾಪಕ ಮುಕುಲ್, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಮುಖಂಡರಾದ ಸೋಮೇಶ್, ಕೆಂಡಗಣ್ಣೇಗೌಡ, ರವಿಗೌಡ, ನಾಗೇಗೌಡ, ಈಶ್ವರೇಗೌಡ, ಸೋಮೇಗೌಡ, ನಾಗಣ್ಣ, ಸಂಘದ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷೆ ಶಿವಮ್ಮ, ನಿರ್ದೇಶಕರಾದ ಇಂದ್ರಮ್ಮ, ಶಿವನಂಜಮ್ಮ, ಗಿರಿಜಮ್ಮ, ಜಯಮ್ಮ, ರಾಜಮ್ಮಣ್ಣಿ, ಭವ್ಯ, ನಾಗಣ್ಣ ಇನ್ನಿತರರಿದ್ದರು.

ಬೆಟ್ಟದಪುರದಲ್ಲಿ ವನಮಹೋತ್ಸವ ಆಚರಣೆ

ಬೆಟ್ಟದಪುರ, ಜು.2– ಗ್ರಾಮದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಗಿಡ ನೆಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಬೆಟ್ಟದಪುರ ಉಪವಲಯ ಅರಣ್ಯಾಧಿಕಾರಿ ವಿಶಾಲ್‌ರಾವ್, ಮನುಷ್ಯನ ಉತ್ತಮ ಆರೋಗ್ಯಕ್ಕೆ ಮರ ಗಿಡಗಳು ಅವಶ್ಯಕ. ಹೀಗಾಗಿ ಸಾರ್ವಜನಿಕರು ಮರ ಕಡಿಯುವ ಬದಲು 4 ಗಿಡಗಳನ್ನು ನೆಟ್ಟು ಪರಿಸರ ಉಳಿಸುವ ಮೂಲಕ ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕು ಎಂದರು.



ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜಗದೀಶ್ ಮಾತನಾಡಿ, ಪ್ರಕೃತಿಯೇ ದೇವರು. ಹೀಗಾಗಿ ನಾವು ಪ್ರಕೃತಿಗೆ ಕೇಡು ಬಯಸಿದರೇ, ಅದರ ಪರಿಣಾಮವನ್ನು ಮನುಷ್ಯ ಅನುಭವಿಸಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಖಾಲಿ ಇರುವ ಕಡೆ ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ತಿಳಿಸಿದರು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಅಧ್ಯಕ್ಷ ಕೆಂಪಣ್ಣ, ಪತ್ರಕರ್ತ ಶಿವದೇವ್, ಆರೋಗ್ಯ ನಿರೀಕ್ಷಕ ಕುಮಾರ್, ಗೀತಾ ಸೇರಿದಂತೆ ವಿದ್ಯಾರ್ಥಿಗಳು ಇತರರಿದ್ದರು.

ಹೆಗ್ಗಡಹಳ್ಳಿ ಗ್ರಾಪಂಗೆ ರೇವತಿ ಅಧ್ಯಕ್ಷೆ

ನಂಜನಗೂಡು, ಜು.2– ತಾಲೂಕಿನ ಹೆಗ್ಗಡಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರೇವಮ್ಮ ಆಯ್ಕೆಯಾದರು.

19 ಸದಸ್ಯ ಬಲದ ಹೆಗ್ಗಡಹಳ್ಳಿ ಗ್ರಾಪಂಗೆ 11 ಬಿಜೆಪಿ, 8 ಕಾಂಗ್ರೆಸ್ ಬೆಂಬಲಿತ ಸದಸ್ಯರು ಆಯ್ಕೆಯಾಗಿದ್ದರು. ಈ ಹಿಂದಿನ ಅಧ್ಯಕ್ಷ ಕಾಂತರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರೇವಮ್ಮ, ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಎಸ್.ರಾಣಿ ನಾಮಪತ್ರ ಸಲ್ಲಿಸಿದ್ದರು.


ಹೆಗ್ಗಡಹಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ರೇವಮ್ಮ ಆಯ್ಕೆಯಾದರು.

ಬುಧವಾರ ನಡೆದ ಚುನಾವಣೆಯಲ್ಲಿ ರೇವಮ್ಮ 10 ಮತಗಳನ್ನು ಪಡೆದು ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಎಸ್.ರಾಣಿ 8 ಮತಗಳನ್ನು ಪಡೆದು ಪರಾಭವಗೊಂಡರು. ಶಿವನಿರ್ಮಲ ಚುನಾವಣೆಗೆ ಗೈರು ಹಾಜರಾಗಿದ್ದರು.

ನೂತನ ಅಧ್ಯಕ್ಷೆ ರೇವಮ್ಮ ಮಾತನಾಡಿ, ಶಾಸಕ ದರ್ಶನ್ ಅವರು ಉಪ್ಪಾರ ಸಮಾಜದ ಮುಖಂಡ ಕೂಡ್ಲಾಪುರ ರಾಜು ಅವರಿಗೆ ಚುನಾವಣೆ ಜವಾಬ್ದಾರಿ ವಹಿಸಿದ್ದರು. ಅವರ ಪ್ರಯತ್ನದ ಫಲವಾಗಿ 25 ವರ್ಷಗಳ ನಂತರ ಕಾಂಗ್ರೆಸ್ ಪಕ್ಷ ಹೆಗ್ಗಡಹಳ್ಳಿ ಗ್ರಾಪಂ ಅಧಿಕಾರ ಹಿಡಿಯಲು ಸಫಲವಾಗಿದೆ. ಉಳಿದ ಅವಧಿಯಲ್ಲಿ ಶಾಸಕರ ಸಹಕಾರ ಪಡೆದು ಹೆಚ್ಚಿನ ಅನುದಾನ ತಂದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಮೂಲ ಸೌಕರ್ಯ ಒದಗಿಸಲು ಶ್ರಮಿಸುತ್ತೇನೆ ಎಂದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಕಳೆದ 25 ವರ್ಷಗಳಿಂದ ಹೆಗ್ಗಡಹಳ್ಳಿ ಗ್ರಾಪಂ ಅಧಿಕಾರ ಕಾಂಗ್ರೆಸ್ ಪಕ್ಷಕ್ಕೆ ಮರೀಚಿಕೆಯಾಗಿತ್ತು. ಈ ಬಾರಿ ಶಾಸಕ ದರ್ಶನ್ ಅವರ ರಾಜಕೀಯ ತಂತ್ರದಿಂದಾಗಿ ಕಾಂಗ್ರೆಸ್ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಮುಂಬರುವ ಜಿಪಂ, ತಾಪಂ ಮತ್ತು ಗ್ರಾಪಂ ಚುನಾವಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮಿಸಲಾಗುವುದು ಎಂದರು.

ಈ ವೇಳೆ ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಉಪ್ಪಾರ ಜನಾಂಗದ ಜಿಲ್ಲಾಧ್ಯಕ್ಷ ನಾಗರಾಜು, ಮುಖಂಡರಾದ ರಾಜು, ವಕೀಲರಾದ ಸೋಮಣ್ಣ, ಗ್ರಾಪಂ ಸದಸ್ಯರಾದ ರಂಗಸ್ವಾಮಿ, ಅಶೋಕ್, ಬಸವರಾಜು, ಪುಟ್ಟಸಿದ್ದಮ್ಮ, ಗೀತಾ, ಜ್ಯೋತಿ, ಮುಖಂಡರಾದ ಶಿವಶಂಕರ್, ಕೃಷ್ಣಶೆಟ್ಟಿ, ಲೋಕೇಶ್, ಮಹೇಶ್, ಶೇಖರ್, ಚಂದ್ರು, ಕಾಂಗ್ರೆಸ್ ಯುವ ಮೋರ್ಚ ಪ್ರಧಾನ ಕಾರ್ಯದರ್ಶಿ ಮಹೇಶ್ ಸೇರಿದಂತೆ ಹಲವರಿದ್ದರು.

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್

ಸರಗೂರು, ಜು.2– ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವವಾದದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್ ತಿಳಿಸಿದರು.

ತಾಲೂಕಿನ ಸಾಗರೆ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಿರಿಯ ವಿದ್ಯಾರ್ಥಿಗಳ ಬಳಗದಿಂದ ಆಯೋಜಿಸಿದ್ದ ಗುರುವಂದನಾ, ಸ್ನೇಹ ಸಮ್ಮಿಲನ ಮತ್ತು ಗೀತ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಗರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಇದೀಗ ಹುಣಸೂರಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಪ್ರಸ್ತುತ ಉತ್ತಮ ಶಿಕ್ಷಕರಿದ್ದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಅದರಂತೆ ಉತ್ತಮ ಶಿಷ್ಯಂದಿರು ಗುರುಗಳ ಆದರ್ಶಗಳನ್ನು ಪಾಲಿಸುತ್ತಿದ್ದಾರೆ. ಗ್ರಾಪಂ ಸದಸ್ಯನಿಂದ ಪ್ರಧಾನಿವರೆಗೂ ಗುರುಗಳ ಮಾರ್ಗದರ್ಶನ ಅವಶ್ಯಕ. ಬಾಲ್ಯದಲ್ಲಿ ಬಡತನ ಕಿತ್ತು ತಿನ್ನುತ್ತಿತ್ತು. ಊಟವಿಲ್ಲದೆ ಮನೆಯಲ್ಲಿ ನೀಡುತ್ತಿದ್ದ ಸೊಪ್ಪು ತಿಂದು ಶಾಲೆಗೆ ತೆರಳುತ್ತಿದ್ದೆ ಎಂದು ತಮ್ಮ ಕಷ್ಟದ ದಿನಗಳನ್ನು ನೆನಪಿಸಿಕೊಂಡ ಅವರು ಅಂದು ಶಾಲೆಯಲ್ಲಿ ಗುರುಗಳು ಕಲಿಸಿದ ಪಾಠದಿಂದ ಇಂದು ನಮ್ಮ ಗ್ರಾಮದ 100 ಮಂದಿ ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರತಿಯೊಬ್ಬರು ಶಿಕ್ಷಕರ ಆದರ್ಶವನ್ನು ಪಾಲಿಸಿ ಎಂದರು.


ಕಾರ್ಯಕ್ರಮವನ್ನು ಬಿಇಓ ಎಸ್.ಪಿ.ಮಹದೇವ್ ಉದ್ಘಾಟಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸೋಮಣ್ಣ ಮಾತನಾಡಿದರು. ಸಾಗರೆ ಸರ್ಕಾರಿ ಪ್ರೌಢಶಾಲೆಯಲ್ಲಿ ನಿವೃತ್ತ ಶಿಕ್ಷಣಾಧಿಕಾರಿ ಎಸ್.ಪಿ. ಶಿವಕುಮಾರ್ ದಿಕ್ಸೂಚಿ ಭಾಷಣ ಮಾಡಿದರು. ಇದೇ ವೇಳೆ ಶಾಲೆಯಲ್ಲಿ ಸೇವೆ ಸಲ್ಲಿಸಿದ 70 ಶಿಕ್ಷಕರನ್ನು ಸನ್ಮಾನಿಸಲಾಯಿತು. ಅಂತಾರಾಷ್ಟ್ರೀಯ ಖ್ಯಾತಿಯ ಜಾನಪದ ಗಾಯಕರಾದ ಅಮ್ಮ ರಾಮಚಂದ್ರ ಗೀತ ಗಾಯನ ನಡೆಸಿಕೊಟ್ಟರು. ಸಾಗರೆ ಗ್ರಾಮದ ಸೂರಿ ಮತ್ತು ತಂಡದವರು ಗುರುಗಳ ಶ್ರೇಷ್ಠತೆ ಕುರಿತ ಹಾಡುಗಳನ್ನು ಹಾಡಿದರು. ಬಳಿಕ ತಮಗೆ ವಿದ್ಯೆ ಕಲಿಸಿದ ಶಿಕ್ಷಕರನ್ನು ಕಣ್ಣಾರ ಕಂಡ ಶಿಷ್ಯರು ನೆಚ್ಚಿನ ಗುರುಗಳ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರು. ಈ ವೇಳೆ ಹಿರಿಯ ವಿದ್ಯಾರ್ಥಿ ಅಂಕಶೆಟ್ಟಿ, ರಾಘವೇಂದ್ರ, ಗ್ರಾಪಂ ಅಧ್ಯಕ್ಷೆ ವಸಂತ, ಮುಖಂಡ ಮಹೇಂದ್ರ, ಮಹದೇವನಾಯಕ, ಶಂಕರ್, ಲಿಂಗರಾಜು, ಎಸ್.ಎನ್.ಗಣೇಶ್, ಕಾರ್ತಿಕ್, ವೈಚಲುವರಾಜ್, ಎಸ್.ಪಿ.ಲೋಕೇಶ್, ಅಂಕನಾಯಕ, ಸುರೇಶ್, ಜಯರಾಮ್, ಸಿದ್ದರಾಜು, ಎಸ್.ಕೆ.ಸತೀಶ್, ಗೋವಿಂದರಾಜು, ರವಿಕುಮಾರ್, ಕಾರಯ್ಯ, ರಾಜೇಶ್, ನವೀನ್ ಕುಮಾರ್, ಹಳೆ ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮಸ್ಥರು ಇದ್ದರು.

ಮೈಸೂರು ಮಿತ್ರ ಗುರುವಾರ 3 ಜುಲೈ 2025

ವಚನ ಸಾಹಿತ್ಯಕ್ಕೆ ಡಾ. ಫ.ಗು.ಹಳಕಟ್ಟಿ ಕೊಡುಗೆ ಅಪಾರ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಪ್ರಾಯ

ಮೈಸೂರು, ಜು.2(ಎಂಟಿವೈ)– ವಚನ ಸಾಹಿತ್ಯ ಕ್ಷೇತ್ರಕ್ಕೆ ಡಾ.ಫ.ಗು. ಹಳಕಟ್ಟಿ ಅವರು ನೀಡಿರುವ ಕೊಡುಗೆ ಅಪಾರವಾಗಿದ್ದು, ಯುವ ಜನತೆ ಮಹನೀಯರ ವಚನ ಸಾಹಿತ್ಯದಲ್ಲಿನ ಸಂದೇಶ ಅರಿಯಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ.ಫ.ಗು. ಹಳಕಟ್ಟಿ ಅವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯುವ ಪೀಳಿಗೆ ಮಹನೀಯರ ವಚನ ಸಾಹಿತ್ಯದ ಬಗ್ಗೆ ತಿಳಿದುಕೊಳ್ಳಬೇಕು. ಮಹಾನ್ ವ್ಯಕ್ತಿಗಳಿಂದ ಪ್ರೇರಿತರಾಗಿ ಸಾಧನೆ ಮಾಡುವತ್ತ ಗಮನಹರಿಸಬೇಕು. ತಾಳ್ಮೆಯಿಂದ ಓದಿನ ಕಡೆ ಗಮನಹರಿಸಬೇಕು. ಡಾ.ಫ.ಗು. ಹಳಕಟ್ಟಿ ಅವರು ವಕೀಲರಾಗಿ, ಸಾಹಿತ್ಯ ಪ್ರಚಾರಕರಾಗಿ ಅನೇಕ ವಚನಗಳನ್ನು ರಚಿಸಿದ್ದಾರೆ ಎಂದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಡಾ.ಫ.ಗು. ಹಳಕಟ್ಟಿ ಅವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ .ಫ.ಗು. ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಡಾ. ಫ ಗು ಹಳಕಟ್ಟಿ ಅವರದ್ದು ತ್ಯಾಗಮಯ ಜೀವನ. ವಚನ, ಸಾಹಿತ್ಯ ಸಂರಕ್ಷಣೆಗಾಗಿ ತಪಸ್ಸಿನಂತೆ ತಮ್ಮ ಜೀವನವನ್ನು ಗಂಧದ ರೀತಿಯಲ್ಲಿ ಸವೆಸಿದ್ದಾರೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ನಮಗೆ ಹಲವಾರು ಸಾಹಿತ್ಯದ ಪ್ರಕಾರಗಳು ತಿಳಿದಿರುತ್ತವೆ. ಹಳೆಗನ್ನಡ, ಚಂಪಾ ಸಾಹಿತ್ಯಗಳು, ಷಟ್ಪದಿ, ರಗಳೆ ಆ ರೀತಿಯ ಸಾಹಿತ್ಯ ಪ್ರಕಾರಗಳನ್ನು ನಾವು ಅಧ್ಯಯನ ಮಾಡದಿದ್ದರೂ ಜನಸಾಮಾನ್ಯರ ಮಟ್ಟಕ್ಕೆ ಇಳಿದ, ಜನಸಾಮಾನ್ಯರ ರಕ್ತದಲ್ಲಿ ಬೆರೆತ ಸಾಹಿತ್ಯ ಪ್ರಕಾರವೇ ವಚನ ಸಾಹಿತ್ಯ ಎಂದು ತಿಳಿಸಿದರು.

ವಚನಕಾರರು ಜನಮಾನಸದಲ್ಲಿ ಬೆರೆತು ವಚನಗಳನ್ನು ರಚಿಸಿದ್ದಾರೆ. ವಚನಗಳ ನಾಲ್ಕು ಸಾಲುಗಳಲ್ಲಿ ಅಗಾಧವಾದ ಅರ್ಥವನ್ನು ಒಳಗೊಂಡಿರುತ್ತವೆ. ನಾವು ವಚನಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳನ್ನು ಅರ್ಥೈಸಿಕೊಳ್ಳಬೇಕು. ವಚನಗಳು ಜೀವನವನ್ನು ಕಟ್ಟಿ ಕೊಡುತ್ತಿವೆ. ವಚನಗಳಿಲ್ಲದೆ ನಮ್ಮ ಜೀವನವನ್ನು ಸಂಪೂರ್ಣಗೊಳಿಸಲು ಸಾಧ್ಯವಿಲ್ಲ. ಅವಷ್ಟರ ಮಟ್ಟಿಗೆ ನಮ್ಮ ಜೀವನದಲ್ಲಿ ವಚನಗಳು ಬೆರೆತು ಹೋಗಿವೆ ಎಂದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ರಾಜ್ಯಾಧ್ಯಕ್ಷೆ ಹೆಚ್.ಎಲ್. ಯಮುನಾ ಹಾಗೂ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕಣ್ಣಪ್ಪ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ರಾಜರತ್ನಾಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿದ್ಯಾರ್ಥಿ ಸಂಘ ಉದ್ಘಾಟನೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರಾಯೋಗಿಕ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಲಾಯಿತು. ಮುಖ್ಯ ಶಿಕ್ಷಕ ಎಂ. ಗುರುಸ್ವಾಮಿ, ಭಾರತ್ ಸ್ಕೌಟ್ ಅಂಡ್ ಗೈಡ್ ವಯಸ್ಕರ ಸಂಪನ್ಮೂಲ ಜಿಲ್ಲಾ ಆಯುಕ್ತ ಡಾ. ಬಿ.ಕೆ. ಅಜಯ್ ಕುಮಾರ್ ಜೈನ್, ಶಿಕ್ಷಣ ಸಂಯೋಜನಾಧಿಕಾರಿ ಬಿ.ಎಂ. ಮೋಹನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಕೇಂದ್ರದ ಸ್ಥಾಪನೆಗೆ ಭೂ ಮಾಲೀಕರಿಂದ ಜಮೀನು ಖರೀದಿ

ಮೈಸೂರು, ಜು.2– ಮೈಸೂರು ಜಿಲ್ಲೆ ಚಾಮರಾಜನಗರ ಯೋಜನೆ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಎಲಮತ್ತೂರು ಗ್ರಾಮ, ಹೆಚ್.ಡಿ.ಕೋಟೆ ತಾಲೂಕು ಅಥವಾ ಸುತ್ತ–ಮುತ್ತ ಇರುವ ಸ್ಥಳದಲ್ಲಿ 66/11 ಕೆ.ವಿ ವಿದ್ಯುತ್ ಉಪ–ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ವಿದ್ಯುತ್ ಉಪ–ಕೇಂದ್ರಕ್ಕೆ ಕನಿಷ್ಠ 2 ಎಕರೆ ಜಮೀನನ್ನು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಭೂ ಮಾಲೀಕರಿಂದ ನೇರವಾಗಿ ಸರ್ಕಾರವು ನಿಗದಿಪಡಿಸುವ ಬೆಲೆಯಲ್ಲಿ ಖರೀದಿ ಮಾಡಲು ಉದ್ದೇಶಿಸಲಾಗಿದೆ.

ಜಮೀನನ್ನು ಕವಿಪ್ರನಿನಿ ಗೆ ಮಾರಾಟ ಮಾಡಲು ಇಚ್ಛಿಸುವ ಭೂ ಮಾಲೀಕರು ಪ್ರೀತಮ್ ಎಂ.ಎಂ, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)–9448271524, ವಿನೋದ್ ಕುಮಾರ್ ಸಿಂಗ್, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)–9448365383, ಕಿರಣ್, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)–9480813912 ನ್ನು ಸಂಪರ್ಕಿಸಬಹುದು ಎಂದು ಹೆಚ್.ಡಿ.ಕೋಟೆ ಚಾವಿಸನಿನಿ ಯ ಕಾರ್ಯ ಮತ್ತು ಪಾಲನೆ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಚಂದು ಕುಮಾರ್.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಆದಾಯ ದ್ವಿಗುಣಗೊಳಿಸಲು, ಮಣ್ಣನ್ನು ಉಳಿಸಲು ವ್ಯಾಪಕ ಸುಧಾರಣೆ

ಹೊಸ ಕೃಷಿ–ಅರಣ್ಯ ಮಾರ್ಗಸೂಚಿಗಳನ್ನು ಸ್ವಾಗತಿಸಿದ ಸದ್ಗುರುಗಳು



ಮೈಸೂರು, ಜು.2– ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಇತ್ತೀಚೆಗೆ ಘೋಷಿಸಿದ ಮಾದರಿ ಕೃಷಿ–ಅರಣ್ಯ ಮಾರ್ಗಸೂಚಿಗಳನ್ನು ಸದ್ಗುರು ಶ್ರೀ ಜಗ್ಗಿ ವಾಸುದೇವ್ ಸ್ವಾಗತಿಸಿದ್ದಾರೆ, ಅವುಗಳನ್ನು ರೈತರ ಆದಾಯವನ್ನು ದ್ವಿಗುಣಗೊಳಿಸಲು, ಹಸಿರು ಹೊದಿಕೆಯನ್ನು ಹೆಚ್ಚಿಸಲು ಮತ್ತು ಭಾರತದ ಮಣ್ಣನ್ನು ಉಳಿಸಲು ಅಗತ್ಯವಾದ "ವ್ಯಾಪಕ ಸುಧಾರಣೆ" ಎಂದು ವರ್ಣಿಸಿದ್ದಾರೆ.

X ನಲ್ಲಿ ಇದರ ಬಗ್ಗೆ ಹಂಚಿಕೊಂಡ ಸದ್ಗುರುಗಳು, ನಮ್ಮ ರೈತರ ಆದಾಯವನ್ನು ದ್ವಿಗುಣಗೊಳಿಸಲು, ಹಸಿರು ಹೊದಿಕೆಯನ್ನು ಹೆಚ್ಚಿಸಲು ಮತ್ತು ಭಾರತದ ಮಣ್ಣನ್ನು ಉಳಿಸಲು ನಮಗೆ ಅಗತ್ಯವಿರುವ ವ್ಯಾಪಕ ಸುಧಾರಣೆ ಇದಾಗಿದೆ. ಹೊಸ ಕೃಷಿ–ಅರಣ್ಯ ನಿಯಮಗಳು ರೈತರು ತಮ್ಮ ಕೃಷಿ ಭೂಮಿಯಲ್ಲಿ ಮರಗಳನ್ನು ಬೆಳೆಯುವುದರಿಂದ ಆರ್ಥಿಕವಾಗಿ ಲಾಭ ಪಡೆಯಲು ಪ್ರೋತ್ಸಾಹಿಸುತ್ತದೆ. ಇದು ಅವರಿಗೆ ವಿಶ್ವಾದ್ಯಂತ ಕಾನೂನುಬದ್ಧ ಮಾರುಕಟ್ಟೆಗಳನ್ನು ಭರವಸೆ ನೀಡುತ್ತದೆ, ಇದು ರೈತರನ್ನು ಮರ ಬೆಳೆಯುವತ್ತ ಮತ್ತಷ್ಟು ಪ್ರೋತ್ಸಾಹಿಸುತ್ತದೆ ಎಂದು ಹೇಳಿದರು.

ಸದ್ಗುರುಗಳು 'ನದಿಗಳನ್ನು ರಕ್ಷಿಸಿ', 'ಕಾವೇರಿ ಕೂಗು' ಮತ್ತು 'ಮಣ್ಣು ಉಳಿಸಿ' ಅಭಿಯಾನಗಳು ಸೇರಿದಂತೆ ಹಲವಾರು ದೊಡ್ಡ ಪ್ರಮಾಣದ ಪರಿಸರ ಅಭಿಯಾನಗಳಗಳ ಮುಂಚೂಣಿಯಲ್ಲಿದ್ದಾರೆ. ಮಣ್ಣಿನ ಆರೋಗ್ಯ, ಹಸಿರು ಹೊದಿಕೆ, ನೀರಿನ ಸಂರಕ್ಷಣೆ ಮತ್ತು ರೈತರ ಸಮೃದ್ಧಿಯ ನಡುವಿನ ಸಂಬಂಧವನ್ನು ನಿರಂತರವಾಗಿ ಒತ್ತಿ ಹೇಳುತ್ತಿದ್ದಾರೆ.

ಹೊಸ ಮಾದರಿ ಮಾರ್ಗಸೂಚಿಗಳು ಕೃಷಿ ಭೂಮಿಗಳಲ್ಲಿ ಮರಗಳನ್ನು ಕಡಿ ಯುವ ನಿಯಂತ್ರಣಗಳನ್ನು ಸರಳೀಕರಿಸುವ ಮತ್ತು ಪ್ರಮಾಣೀಕರಿಸುವ ನಿರೀಕ್ಷೆ ಇದೆ. ಇದು ರೈತರಿಗೆ ಮರ ಆಧಾರಿತ ಕೃಷಿಯಿಂದ ಗಮನಾರ್ಹ ಆರ್ಥಿಕ ಪ್ರಯೋಜನಗಳನ್ನು ಪಡೆಯಲು ಸಶಕ್ತಗೊಳಿಸುತ್ತದೆ ಮತ್ತು ದೇಶಾದ್ಯಂತ ಅದರ ವ್ಯಾಪಕ ಅಳವಡಿಕೆಯನ್ನು ಉತ್ತೇಜಿಸುತ್ತದೆ.

ಈ ಮಾದರಿ ನಿಯಮಗಳು, ರಾಜ್ಯ ಮಟ್ಟದಲ್ಲಿ ಅಳವಡಿಸಿಕೊಂಡಾಗ, ರೈತರು ಮರದ ಮರಗಳನ್ನು ಬೆಳೆಯುವುದರ ಮೂಲಕವಾಗಲಿ ಅಥವಾ ಮೆಣಸು ಮತ್ತು ವ್ಯಾನಿಲಾ ಮುಂತಾದ ಹೆಚ್ಚು ಮೌಲ್ಯದ ಬಳ್ಳಿಗಳನ್ನು ಮರಗಳ ಬೆಂಬಲದೊಂದಿಗೆ ಬೆಳೆಯುವುದರ ಮೂಲಕವಾಗಲಿ ನಿಜವಾದ ಉದ್ಯಮಿಗಳಾಗಲು ಸಶಕ್ತಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಮರ ಆಧಾರಿತ ಕೃಷಿಯ ಆರ್ಥಿಕ ಸಾಮರ್ಥ್ಯವನ್ನು ಅನ್‌ಲಾಕ್ ಮಾಡುವಲ್ಲಿ ಇದು ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ಈ ಮಾರ್ಗಸೂಚಿಗಳು ಕಾವೇರಿ ಕೂಗು ಅಭಿಯಾನದಡಿಯಲ್ಲಿ ಈಗಾಗಲೇ ಮರ ಆಧಾರಿತ ಕೃಷಿಯನ್ನು ಅಳವಡಿಸಿಕೊಂಡಿರುವ 2 ಲಕ್ಷಕ್ಕೂ ಹೆಚ್ಚು ರೈತರಿಗೆ ಲಾಭ ನೀಡುವ ನಿರೀಕ್ಷೆ ಇದೆ. ಇದು ಇದುವರೆಗೆ 12.2 ಕೋಟಿಗೂ ಹೆಚ್ಚು ಮರಗಳನ್ನು ನೆಡಲು ಅನುವು ಮಾಡಿಕೊಟ್ಟಿದೆ, 2024–25ರಲ್ಲಿ ಮಾತ್ರ 1.36 ಕೋಟಿ ಸಸಿಗಳನ್ನು ನೆಡಲಾಗಿದೆ.

ಹೊಸಬಾಳೆ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿ ತಹಸೀಲ್ದಾರ್‌ಗೆ ಮನವಿ

ಮೈಸೂರು, ಜು. 2– ಸಂವಿಧಾನ ಪೀಠಿಕೆಯಿಂದ ಸಮಾಜವಾದಿ, ಜಾತ್ಯಾತೀತ ಪದಗಳನ್ನು ಕೈಬಿಡಬೇಕು ಎಂದು ಹೇಳಿಕೆ ನೀಡಿರುವ ಆರ್‌ಎಸ್‌ಎಸ್ ಸಹ ಕಾರ್ಯವಾಹಕ ದತ್ತಾತ್ರೇಯ ಹೊಸಬಾಳೆ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಆಗ್ರಹಿಸಿ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ತಹಶೀಲ್ದಾರ್ ರೇಖಾ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದಾರೆ.



ದತ್ತಾತ್ರೇಯ ಹೊಸಬಾಳೆ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ತಹಸೀಲ್ದಾರ್ ರೇಖಾ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಎಸ್ ಮಾತನಾಡಿ, ಸಂವಿಧಾನದ ಪೀಠಿಕೆಯಿಂದ ಸಮಾಜವಾದ ಮತ್ತು ಜಾತ್ಯತೀತ ಪದಗಳನ್ನು ತೆಗೆದು ಹಾಕಬೇಕು ಎಂಬ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆ ಅತ್ಯಂತ ಪ್ರಚೋದನಕಾರಿಯಾಗಿದ್ದು, ಕೋಮು ಸಾಮರಸ್ಯ ಮತ್ತು ದೇಶದ ಜಾತ್ಯತೀತ ತತ್ವಗಳಿಗೆ ಗಂಭೀರ ಅಪಾಯವನ್ನುಂಟು ಮಾಡುತ್ತವೆ ಎಂದು ಕಿಡಿಕಾರಿದ್ದಾರೆ.

ಹಿಂದೂಗಳೆಲ್ಲ ಒಂದು ಎನ್ನುವ ಆರ್‌ಎಸ್‌ಎಸ್‌ಗೆ ಜಾತ್ಯತೀತ, ಸಮಾಜವಾದ ಅಂದರೆ ಅಸಹನೆ. ಸಮಾಜವಾದ ಮತ್ತು ಜಾತ್ಯತೀತ ಪದಗಳು ಮನುಸ್ಮೃತಿಗೆ ಸಂಪೂರ್ಣ ವಿರುದ್ಧವಾದುದು. ಹಾಗಾಗಿ ಜಾತ್ಯತೀತ ಪದವನ್ನು ಆರ್‌ಎಸ್‌ಎಸ್ ವಿರೋಧಿಸುತ್ತಿದೆ. ಸಮಾಜವಾದಿ ಮತ್ತು ಜಾತ್ಯತೀತ ಸಿದ್ಧಾಂತ ದೇಶದ ಐಕ್ಯತೆಗೆ ಮುಖ್ಯ ಆದರೆ, ಹಿಂದುತ್ವವಾದಿಗಳಿಗೆ ಮಾತ್ರ ಇವು ಅಪಥ್ಯ ಪದಗಳು ಎಂದು ಆರೋಪಿಸಿದ್ದಾರೆ.

ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ದೇಶದಲ್ಲಿ ಸಮಾನತೆ ತರುವುದು ಅತೀ ಮುಖ್ಯವಾಗಿತ್ತು. ಅಲ್ಪಸಂಖ್ಯಾತ, ಹಿಂದುಳಿದವರ ಹಾಗೂ ದಲಿತರ ಸದುದ್ದೇಶದಿಂದ ಸಂವಿಧಾನಕ್ಕೆ 42ನೇ ತಿದ್ದುಪಡಿ ತಂದು ಸಮಾಜವಾದಿ, ಜಾತ್ಯಾತೀತ ಎಂಬ ಪದಗಳನ್ನು ಸಂವಿಧಾನದಲ್ಲಿ ಸೇರಿಸುವ ಕೆಲಸ ಮಾಡಿದರು. ಈ ತಿದ್ದುಪಡಿಯನ್ನು ಸಂಘ ಪರಿವಾರದವರು ಒಪ್ಪುತ್ತಿಲ್ಲ. ಜಾತಿ, ಧರ್ಮಗಳ ಹೆಸರಿನಲ್ಲಿ ಪ್ರಚೋದಿಸುವ ಕೆಲಸ ಮಾಡುತ್ತಲೇ ಇದ್ದಾರೆ. ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಒಗ್ಗಟ್ಟನ್ನು ಒಡೆಯುವ ಕೆಲಸವನ್ನು ಮನುವಾದಿಗಳು ಮಾಡುತ್ತಿದ್ದಾರೆ

ಇಂತಹ ವಿಭಜನಕಾರಿ ಹೇಳಿಕೆ ನೀಡಿರುವ ಹೊಸಬಾಳೆ ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲು ಪೊಲೀಸರು ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶನ ನೀಡಬೇಕು ಎಂದು ಮನವಿಯಲ್ಲಿ ವಿನಂತಿಸಿದ್ದಾರೆ

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ರಾಜೀವ್ ಗಾಂಧಿ ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿ ಲೋಕೇಶ್, ಸೇವಾದಳ ಕಾರ್ಯಧ್ಯಕ್ಷ ಮೋಹನ್ ಕುಮಾರ್, ಕೃಷ್ಣಪ್ಪ (ಗಂಟಯ್ಯ)ಹಾಗೂ ಇನ್ನಿತರರು ಹಾಜರಿದ್ದರು.

ಕಮಲ್ ಹಾಸನ್ ವಿರುದ್ಧ ಕನಕಪುರ ಕೋರ್ಟ್‌ನಲ್ಲಿ ಖಾಸಗಿ ದೂರು: ಜು.5ಕ್ಕೆ ವಿಚಾರಣೆ

ರಾಮನಗರ, ಜು.2– ಕನ್ನಡದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದ ನಟ ಕಮಲ್ ಹಾಸನ್ ವಿರುದ್ಧ ಕನಕಪುರದ ಎರಡನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದೂರು ದಾಖಲಾಗಿದೆ.



ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ನಾಗಾರ್ಜುನ್ ಗೌಡ ಎಂಬುವವರು ಕೋರ್ಟ್‌ಗೆ ಖಾಸಗಿ ದೂರು ದಾಖಲು ಮಾಡಿದ್ದಾರೆ. ಕನ್ನಡದ ಬಗ್ಗೆ ಕಮಲ್ ಹಾಸನ್ ಅವಹೇಳನ ಮಾಡಿರೋದು ವೈಯಕ್ತಿಕವಾಗಿ ನೋವು ತಂದಿದೆ. ಜೊತೆಗೆ ಮಾನಸಿಕವಾಗಿ ಖಿನ್ನತೆಯನ್ನು ತರಿಸಿದೆ. ಕನ್ನಡಕ್ಕೆ ಅಪಮಾನ ಮಾಡಿದ ಬಗ್ಗೆ ಕ್ಷಮೆ ಕೇಳದೇ ಉದ್ಧಟತನ ತೋರಿದ್ದಾರೆ ಎಂದು ದಾವೆ ಹೂಡಿರುವ ನಾಗಾರ್ಜುನ್, ಪ್ರಕರಣದ ಸಾಕ್ಷಿಯಾಗಿ ನಟ ಶಿವರಾಜ್‌ಕುಮಾರ್ ಅವರನ್ನು ಪರಿಗಣಿಸುವಂತೆ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ನಾಗಾರ್ಜುನ ಗೌಡ ಪರ ವಕೀಲ ವಿನೋದ್ ಎಂಬುವವರು ವಾದ ಮಂಡಿಸಿದ್ದು, ಪ್ರಕರಣವನ್ನು ಜುಲೈ 5ಕ್ಕೆ ವಿಚಾರಣೆಗೆ ಮುಂದೂಡಿ ಕೋರ್ಟ್ ಆದೇಶಿಸಿದೆ. ಕನಕಪುರದ 2ನೇ ಅಪರ ಸಿವಿಲ್ ಹಾಗೂ ಜೆಎಂಎಫ್ ಸಿ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಸಲಾಗುತ್ತಿದೆ.

ಜೆಎಸ್‌ಎಸ್ ಎಂಕಾಂ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ



ಮೈಸೂರಿನ ಜಿ.ಎಸ್.ಟಿ ಭವನದಲ್ಲಿ ಎಂಟನೇ ವರ್ಷದ ಜಿಎಸ್‌ಟಿ ದಿನದ ಅಂಗವಾಗಿ ಮೈಸೂರಿನ ಜಿಎಸ್‌ಟಿ ಆಯುಕ್ತಾಲಯದ ಜಿಎಸ್‌ಟಿ ಪ್ರಧಾನ ಆಯುಕ್ತರ ಕಛೇರಿ ವತಿಯಿಂದ ಆಯೋಜಿಸಿದ್ದ 'ಭಾರತದಲ್ಲಿ ಜಿಎಸ್‌ಟಿ ತೆರಿಗೆಗಳನ್ನು ಸರಳಗೊಳಿಸುವುದು ಮತ್ತು ನಾಗರಿಕರನ್ನು ಸಬಲೀಕರಣಗೊಳಿಸುವುದು' ವಿಷಯ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಮೈಸೂರು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿದ್ಯಾರ್ಥಿಗಳಾದ ಅನನ್ಯ ಎಚ್.ಸಿ ಗೌಡ (ಪ್ರಥಮ), ವರ್ಷಿತ್ (ದ್ವಿತೀಯ), ಧನ್ಯತಾ (ತೃತೀಯ) ಬಹುಮಾನ ಪಡೆದಿದ್ದಾರೆ. ವಿಜೇತರನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ. ಎಂ. ಪ್ರಭು, ವಿಭಾಗದ ಮುಖ್ಯಸ್ಥ ಡಾ.ಎನ್.ದಿಲೀಪ್ ಅಭಿನಂದಿಸಿದ್ದಾರೆ.

ಬಡತನ ಇದ್ದರೂ ಮಕ್ಕಳಿಗೆ ಶಿಕ್ಷಣ ಕೊಡುವುದನ್ನು ನಿಲ್ಲಿಸಬೇಡಿ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಲಹೆ

ಮೈಸೂರು, ಜು.2(ಬಿಎಲ್‌ಯು)– ಎಷ್ಟೆ ಬಡತನ ಇದ್ದರೂ ಮಕ್ಕಳಿಗೆ ಶಿಕ್ಷಣ ಕೊಡಿಸುವುದನ್ನು ಬಿಡಬಾರದು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಪೋಷಕರಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದ ಭಾವಸಾರ್ ಕ್ಷತ್ರಿಯ ಸಮಾಜ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಆಯೋಜಿಸಿದ್ದ 11ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವದಲ್ಲಿ ಮಾತಾಡಿದ ಅವರು, ಮಕ್ಕಳಿಗೆ ಶಿಕ್ಷಣವನ್ನೇ ಆಸ್ತಿಯಾಗಿ ನೀಡಬೇಕು. ಶಿಕ್ಷಣ ಇದ್ದರೆ ಮಕ್ಕಳು ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟರು.



ಕುವೆಂಪುನಗರದ ಭಾವಸಾರ್ ಕ್ಷತ್ರಿಯ ಸಮಾಜ ಏರ್ಪಡಿಸಿದ್ದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಕುಲ ಕಸುಬು ಬದುಕಿಗೆ ಮುಖ್ಯ ಆಧಾರ. ಹಾಗೆಂದ ಮಾತ್ರಕ್ಕೆ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿ ಮಾಡಬಾರದು. ಮಕ್ಕಳಿಗೆ ಶಿಕ್ಷಣ ನೀಡುವುದು ಪೋಷಕರ ಮಹತ್ತರ ಜವಾಬ್ದಾರಿ ಎಂದು ಸೋಮಶೇಖರ್ ಹೇಳಿದರು. ಸಂವಿಧಾನ ಮೀಸಲಾತಿ ಸೌಲಭ್ಯ ನೀಡಿದೆ. ಇದನ್ನು ಬಳಸಿಕೊಂಡು ಉಳ್ಳವರ ಪೈಪೋಟಿ ಎದುರಿಸಿ ಶಿಕ್ಷಿತರಾಗುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕಾರವನ್ನು ಕಲಿಸಬೇಕು. ಆಗ ಮಕ್ಕಳು ಪರಿಪೂರ್ಣ ಬದುಕು ಕಟ್ಟಿಕೊಳ್ಳಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಬಿ.ಅಮೂಲ್ಯ, ಆರ್.ರಕ್ಷಾ, ಡಿ. ಪ್ರಿಯಾಂಕ, ಜಿ.ವಿ.ಲಕ್ಷ್ಮಿ, ಬಿ.ಎಂ.ಭೂಮಿತಾ, ಬಿ.ಎಂ.ವರ್ಷಿಣಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಆರ್.ನಿಧಿ, ಮಲ್ಲಿಕಾರ್ಜುನ್, ಆದರ್ಶ್, ವೈಷ್ಣವಿ, ಗೀತಾ, ಪಿ.ವಿ. ಮನೋಜ್, ಆರ್.ವಿ. ದೇವಿಪ್ರಸಾದ್, ಎನ್.ಎಸ್. ವೈಷ್ಣವಿ, ರಕ್ಷಿತ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಭಾವಸಾರ್ ಕ್ಷತ್ರಿಯ ಮಂಡಳಿಯ ಅಧ್ಯಕ್ಷ ಶಿವಾಜಿ ರಾವ್ ರಾಂಪುರೆ, ವಿಠ್ಠಲ ರುಕ್ಮಿಣಿ ಕಲ್ಯಾಣ ಮಂಟಪದ ಅಧ್ಯಕ್ಷ ಜಯರಾಮ್ ರಾವ್ ಲಾಳಿಗೆ, ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಬಿ.ಟಿ.ಮಂಜುನಾಥ್ ಬಗರೆ, ಮಾಜಿ ಅಧ್ಯಕ್ಷ ಬಾಬು ತಾಪ್ಸೆ, ನಾಗೇಂದ್ರ ರಾವ್ ಪಾಟಂಕರ್, ಉಮೇಶ್ ನಾಯಕ್ ಸಂಜಯ್ ಕುಮಾರ್ ರಂಪುರೆ, ಗಿರೀಶ್ ಪತಂಗೆ, ರಾಜೇಶ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ವಸತಿ ನಿಲಯದಿಂದ ಇಬ್ಬರು ನಾಪತ್ತೆ

ಮೈಸೂರು, ಜು.2– ಮೈಸೂರಿನ ತಿಲಕ್‌ನಗರದಲ್ಲಿರುವ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯ ವಸತಿ ನಿಲಯದಿಂದ ಇಬ್ಬರು ಮಕ್ಕಳು ಕಾಣೆಯಾಗಿದ್ದು, ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮು(17) ಹಾಗೂ ರಹೀಂ(17) ಕಾಣೆಯಾದವರು. ಪೋಷಕರಿಲ್ಲದೆ ಅನಾಥರಾಗಿದ್ದ ಕಿವುಡ ಮತ್ತು ಮೂಕರಾದ ರಾಮು ಮತ್ತು ರಹೀಂ ಅವರುಗಳು ಪಾಠಶಾಲೆಯ ವಸತಿ ನಿಲಯದಿಂದ ಕಾಣೆಯಾಗಿದ್ದು, ಎಷ್ಟು ಹುಡುಕಾಡಿದರೂ ಅವರ ಸುಳಿವು ಪತ್ತೆಯಾಗದ ಹಿನ್ನೆಲೆಯಲ್ಲಿ ವಾರ್ಡನ್ ಎ.ಎಂ.ಮಂದಣ್ಣ ಮಂಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಇವರುಗಳ ಬಗ್ಗೆ ಸುಳಿವು ದೊರೆತವರು ದೂ.ಸಂ.: 0821–2418113, 2418313, 2418513, 2418339 ಮೂಲಕ ತಿಳಿಸಲು ಕೋರಲಾಗಿದೆ.

ಕಾನೂನು ಪದವೀಧರರ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಜು.2– 2025–26 ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ 4 ವರ್ಷದ ಅವಧಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಿಂದುಳಿದ ವರ್ಗಗಳಾದ ವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಹಿಂದೆ ಎರಡು ವರ್ಷಗಳೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಣಿ ಮಾಡಿಸಿರಬೇಕು. ಅರ್ಹ ಮತ್ತು ಆಸಕ್ತಿಯುಳ್ಳ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಅರ್ಜಿಯನ್ನು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಕಟ್ಟಡ, ಕೊಠಡಿ ಸಂಖ್ಯೆ:202, 2ನೇ ಮಹಡಿ, ಸಿದ್ದಾರ್ಥನಗರ, ಮೈಸೂರು ಅವರಿಂದ ಪಡೆದು ನಿಗದಿತ ನಮೂನೆಯಲ್ಲಿ ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಜುಲೈ 31ರ ಸಂಜೆ 5.30 ಗಂಟೆಯೊಳಗೆ ಅರ್ಜಿ ಸಲ್ಲಿಸಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಗಳಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ದೂ.ಸಂಖ್ಯೆ: 0821–2342917 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಪ್ರಮುಖ ರಸ್ತೆ, ವೃತ್ತಗಳಲ್ಲಿ ಜಾನುವಾರು ಜಾತ್ರೆ; ವಾಹನ ಚಾಲಕರು, ಸವಾರರಿಗೆ ಸಂಚಕಾರ!



ಮೈಸೂರು, ಜು.2(ಬಿಎಲ್‌ಯು)–ಸಾಂಸ್ಕೃತಿಕ ನಗರಿ ಮೈಸೂರಿನ ರಸ್ತೆ ವೃತ್ತ ಗಳ ಮಧ್ಯೆ ನಿಲ್ಲುವ ಜಾನುವಾರುಗಳಿಂದಾಗಿ ಇತ್ತೀಚಿನ ದಿನಗಳಲ್ಲಂತೂ ವಾಹನ ಸವಾರರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ರಸ್ತೆ ಮಧ್ಯೆಯೇ ಮಲಗುವ ಜಾನುವಾರುಗಳು ವೇಗವಾಗಿ ಸಾಗುವ ವಾಹನಗಳಿಗೆ ಹಠಾತ್ತನೆ ಅಡ್ಡ ನುಗ್ಗುವುದರಿಂದ ಪ್ರತಿನಿತ್ಯ ಒಂದಲ್ಲಾ ಒಂದು ಕಡೆ ಅಪಘಾತಗಳು ಸಂಭವಿಸಿ, ದ್ವಿಚಕ್ರ ವಾಹನ ಸವಾರರು ಗಾಯಗೊಳ್ಳುತ್ತಿದ್ದಾರೆ. ವಾಹನಗಳು ಜಖಂ ಆಗುತ್ತಿವೆ. ಹಸುಗಳಿಂದ ಹಾಲು ಕರೆದುಕೊಂಡು ಬಳಿಕ ಅವುಗಳನ್ನು ರಸ್ತೆಗೆ ಬಿಡುವವರ ವಿರುದ್ಧ ಪಾಲಿಕೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಸಾರ್ವಜನಿಕರು ಸಂಕಷ್ಟ ಎದುರಿಸುವಂತಾಗಿದೆ.

ಮೈಸೂರಿನ ಬಹುತೇಕ ಬಡಾವಣೆಗಳಲ್ಲಿ ಹಸುಗಳನ್ನು ಸಾಕಲಾಗುತ್ತಿದೆ. ಬೆಳಗ್ಗೆ ಹಾಗೂ ಸಂಜೆ ಹಾಲು ಕರೆದುಕೊಂಡ ಬಳಿಕ ಗೋಪಾಲಕರು ಅವುಗಳ ಕಟ್ಟು ಬಿಚ್ಚಿ ರಸ್ತೆಗೆ ಬಿಡುತ್ತಿದ್ದಾರೆ. ಈ ಮೂಲಕ ಯಾವುದೇ ಖರ್ಚಿಲ್ಲದೆ ಪ್ರತಿದಿನ ಹಣ ಸಂಪಾದನೆ ಮಾಡುವುದರತ್ತ ಇರುವ ಕಾಳಜಿ ಅವುಗಳ ರಕ್ಷಣೆ ಬಗ್ಗೆ ಅದರ ಮಾಲೀಕರಿಗೆ ಇಲ್ಲದಂತಾಗಿದೆ.

ಅನೇಕ ವೇಳೆ ರಸ್ತೆ ಹಾಗೂ ವೃತ್ತಗಳಲ್ಲೇ ಹಸುಗಳು ಕರು ಹಾಕಿರುವ ನಿದರ್ಶನಗಳಿವೆ. ಗಬ್ಬದ ಹಸುವನ್ನೂ ರಸ್ತೆಗೆ ಬಿಡುವ ಮಾಲೀಕರು, ಸಂಜೆಯಾಗುತ್ತಲೇ ಹಸು ಹುಡುಕಿಕೊಂಡು ಬಂದಾಗ ಕೆಲವೊಮ್ಮೆ ಅವು ಬಯಲಲ್ಲೇ ಕರು ಹಾಕಿರುತ್ತವೆ. ದ್ವಿಚಕ್ರ ವಾಹನದಲ್ಲಿ ಕರು ಹಾಕಿಕೊಂಡು ಮಾಲೀಕರು ಹೋಗುತ್ತಿದ್ದರೆ, ನಿತ್ರಾಣಗೊಂಡಿರುವ ಹಸು ಕರುಳಿನ ಕರೆಯಂತೆ ಹಿಂದೆ ಓಡಿದರೂ ಅದರ ಬಗ್ಗೆ ಕರುಣೆಯೇ ಇಲ್ಲದಂತೆ ಮಾಲೀಕರು ಅನೇಕ ವೇಳೆ ನಡೆದುಕೊಳ್ಳುತ್ತಿದ್ದಾರೆ.

ನಗರ ಪ್ರದೇಶ ಕಾಂಕ್ರೀಟ್ ಕಾಡಾಗಿದ್ದು, ಜಾನುವಾರುಗಳು ಮೇಯಲು ಹುಲ್ಲು ಬೆಳೆಯುವ ಸ್ಥಳವೇ ಇಲ್ಲದಂತಾಗಿದೆ. ಸಾಕುವವರಂತೂ ಹಸುಗಳಿಗೆ ಸಮರ್ಪಕವಾಗಿ ಮೇವು ನೀಡದೆ ರಸ್ತೆಗೇ ಬಿಡುವುದರಿಂದ ಹಸಿವಿನಿಂದ ಬಳಲುವ ಹಸುಗಳು ಕಸದ ರಾಶಿಯಲ್ಲಿ ಸಿಗುವ ತ್ಯಾಜ್ಯವನ್ನು ಸೇವಿಸುವುದರಿಂದ ಅವುಗಳ ಹೊಟ್ಟೆಯಲ್ಲಿ ಪ್ಲಾಸ್ಟಿಕ್ ಕವರ್‌ನಂತಹ ವಸ್ತುಗಳು ತುಂಬಿಕೊಂಡು ಜೀರ್ಣವಾಗದೇ ಹಸುಗಳು ಪ್ರಾಣ ಬಿಡುತ್ತಿರುವ ನಿದರ್ಶನಗಳು ಸಾಕಷ್ಟು ಕಂಡು ಬರುತ್ತಿವೆ.

ಪಾಲಕರು ಹಸುಗಳಿಗೆ ವಿಮೆ ಮಾಡಿಸಿರುತ್ತಾರೆ. ಹಸು ಇರುವವರೆಗೆ ಹಾಲಿನಿಂದ ಸಂಪಾದನೆ, ಸತ್ತಾಗ ವಿಮೆ ಪರಿಹಾರ ಮಾಲೀಕರಿಗೆ ದೊರೆಯುತ್ತದೆ. ಸತ್ತ ಹಸುವಿನ ಮರಣೋತ್ತರ ಪರೀಕ್ಷೆ ಮಾಡುವ ವೈದ್ಯರು ಇಂತಹ ಹಸುಗಳಿಗೂ ಸಹಜ ಸಾವು ಎಂಬಂತೆ ಮರಣೋತ್ತರ ವರದಿ ನೀಡುವುದರಿಂದಾಗಿ ಪಾಲಕರಿಗೆ ಸುಲಭವಾಗಿ ವಿಮೆ ಪರಿಹಾರ ದೊರಕುತ್ತದೆ.

ಅದೊಂದು ಕಾಲವಿತ್ತು. ಗೋಪಾಲಕರು ಹಸುಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು, ಗೋಮಾತೆ ಎಂದು ಪೂಜಿಸುತ್ತಿದ್ದರು. ಮನೆಯಲ್ಲೇ ಕೊಟ್ಟಿಗೆ ನಿರ್ಮಾಣ ಮಾಡಿ, ಅದಕ್ಕೆ ಹುಲ್ಲು ಹಾಕಿ ಸಾಕುತ್ತಿದ್ದರು. ಆದರೆ ಈಗ ಇಂತಹ ಗೋಪಾಲಕರ ಸಂಖ್ಯೆ ಕಡಿಮೆಯಾಗಿದೆ. ರಸ್ತೆಗೆ ಬಿಡಲಾಗುವ ಹಸುಗಳು ಹಸಿವಿನಿಂದಲೇ ಬಳಲಿ ಸಿಕ್ಕಿದ್ದನ್ನು ತಿನ್ನುವ ಮೂಲಕ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುತ್ತಿವೆ. ಅಲ್ಲದೇ ವಾಹನ ಸವಾರರಿಗೂ ಕಂಟಕಪ್ರಾಯವಾಗುತ್ತಿವೆ. ರಸ್ತೆಯಲ್ಲಿರುವ ಹಸುಗಳಿಗೆ ಡಿಕ್ಕಿ ಹೊಡೆದು ದ್ವಿಚಕ್ರ ವಾಹನ ಸವಾರರು ಗಾಯಗೊಳ್ಳುವುದು ಒಂದೆಡೆಯಾದರೆ, ವಾಹನಗಳ ಡಿಕ್ಕಿಯಿಂದ ಹಸುಗಳೂ ಗಾಯಗೊಂಡು ನರಳುವಂತಾಗಿದೆ.

ರಸ್ತೆಗೆ ಬಿಡುವ ಹಸುಗಳನ್ನು ನಗರ ಪಾಲಿಕೆ ಸಿಬ್ಬಂದಿ ವಶಕ್ಕೆ ಪಡೆದು ಅವುಗಳನ್ನು ಕೂಡಿ ಹಾಕಿ ಸಲಹಲು ಪಾಲಿಕೆಯಿಂದ ದೊಡ್ಡಿಯನ್ನು ನಿರ್ಮಿಸಲಾಗಿದೆ. ಈ ಕಾರ್ಯಾಚರಣೆ ಕೆಲ ದಿನಗಳ ಕಾಲ ನಡೆದಿತ್ತು. ಆದರೆ ಇದೀಗ ರಸ್ತೆಯಲ್ಲಿ ಅಡ್ಡಾಡುವ ಜಾನುವಾರು ಬಗ್ಗೆ ಪಾಲಿಕೆ ಅಧಿಕಾರಿಗಳು ಗಮನಹರಿಸದ ಕಾರಣ ದೊಡ್ಡಿಯೂ ಪಾಳು ಬಿದ್ದಿದೆ. ಈಗಲೂ ಹಸುಗಳನ್ನು ಅತ್ಯಂತ ಶ್ರದ್ಧೆಯಿಂದ ಸಾಕುವವರಿದ್ದಾರೆ. ಮಾಜಿ ಮೇಯರ್ ಧ್ರುವ ಕುಮಾರ್, ಮಾಜಿ ಕಾರ್ಪೊರೇಟರ್ ನಾಗಭೂಷಣ್ ಸೇರಿದಂತೆ ಕೆಲವರು ಬಹಳ ವರ್ಷಗಳಿಂದ ಹಸುಗಳನ್ನು ಸಾಕುತ್ತಿದ್ದಾರೆ. ಕೊಟ್ಟಿಗೆ ನಿರ್ಮಿಸಿಕೊಂಡು ಹುಲ್ಲು, ಹಿಂಡಿ ನೀಡಿ ಪೋಷಿಸುತ್ತಾ ಬಂದಿದ್ದಾರೆ.

> “ ಹಸುಗಳನ್ನು ರಸ್ತೆಗೆ ಬಿಡದಂತೆ ಅದರ ಮಾಲೀಕರಿಗೆ ಆರೋಗ್ಯ ನಿರೀಕ್ಷಕರ ಮೂಲಕ ಎಚ್ಚರಿಕೆ ನೀಡಲಾಗುತ್ತದೆ. ಹಾಗೇನಾದರೂ ರಸ್ತೆಗೆ ಬಿಟ್ಟರೆ ಎರಡು ಬಾರಿ ದಂಡ ವಿಧಿಸಲಾಗುತ್ತದೆ. ನಂತರವೂ ರಸ್ತೆಗೆ ಬಿಟ್ಟಂತಹ ಹಸುಗಳನ್ನು ವಶಕ್ಕೆ ಪಡೆದು ಹರಾಜು ಹಾಕಲಾಗುವುದು. **–ಶೇಖ್ ತನ್ವೀರ್ ಆಸಿಫ್, ಮೈಸೂರು ನಗರಪಾಲಿಕೆ ಆಯುಕ್ತರು.**

> “ ಹಸುಗಳ ಆರೋಗ್ಯದ ಬಗ್ಗೆಯೂ ಅದರ ಮಾಲೀಕರಿಗೆ ಕಾಳಜಿ ಇದ್ದಂತಿಲ್ಲ. ಸಹಜವಾಗಿಯೇ ಹಸುಗಳಿಗೆ ಕಾಲು–ಬಾಯಿ ಸೋಂಕು ಹಾಗೂ ಚರ್ಮ ಗಂಟು ರೋಗ ಬರುತ್ತದೆ. ಅದರ ತಡೆಗಾಗಿ ಹಸುಗಳಿಗೆ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಿ ಎಂದು ನಾವು ಗೋಗರೆದರೂ, ಪಾಲಕರು ಸ್ಪಂದಿಸುತ್ತಿಲ್ಲ. ಹೀಗಾಗಿ ಹಾಲು ಕರೆಯುವ ಸ್ಥಳಕ್ಕೆ ಮುಂಜಾನೆಯೇ ನಾವಾಗಿಯೇ ಹೋಗಿ ಹಸುಗಳಿಗೆ ವ್ಯಾಕ್ಸಿನೇಷನ್ ನೀಡಿ ಅದರ ಕಿವಿಗೆ ಸಂಖ್ಯೆಯನ್ನು ಪಂಚ್ ಮಾಡುತ್ತಿದ್ದೇವೆ. ಮೈಸೂರು ನಗರದಲ್ಲಿ 11 ಸಾವಿರ ಹಸುಗಳಿವೆ. ಬಹಳಷ್ಟು ಪಾಲಕರ ಮನೆಯಲ್ಲಿ ಹಸು ಸಾಕಲು ಸ್ಥಳಾವಕಾಶವೇ ಇರುವುದಿಲ್ಲ. ಹೀಗಾಗಿ ಅವುಗಳನ್ನು ರಸ್ತೆಗೆ ಬಿಡುತ್ತಿದ್ದಾರೆ. **–ಡಾ.ನಾಗರಾಜ್, ಸಹಾಯಕ ನಿರ್ದೇಶಕ, ಪಶು ಸಂಗೋಪನಾ ಇಲಾಖೆ**

> “ ಹಾಲು ಕರೆದುಕೊಂಡು ಹಸುಗಳನ್ನು ರಸ್ತೆಗೆ ಬಿಡುವ ಗೋಪಾಲಕರ ಪರವಾಗಿ ನಾವು ನಿಲ್ಲುವುದಿಲ್ಲ. ಹಸುಗಳನ್ನು ರಸ್ತೆಗೆ ಬಿಟ್ಟು ಅವುಗಳಿಗೆ, ಜನರಿಗೆ ತೊಂದರೆ ಕೊಡಬೇಡಿ ಎಂದು ಸಲಹೆ ನೀಡುತ್ತಿದ್ದೇವೆ. ಹಸುಗಳನ್ನು ರಸ್ತೆಗೆ ಬಿಡುವುದರಿಂದ ಹಲವಾರು ಅನಾಹುತಗಳು ಸಂಭವಿಸುತ್ತಿವೆ. ಇತ್ತೀಚೆಗೆ ದೇವರಾಜ ಅರಸು ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ವೈದ್ಯಕೀಯ ವಿದ್ಯಾರ್ಥಿಯು ಮಲಗಿದ್ದ ಹಸುವಿಗೆ ಡಿಕ್ಕಿ ಹೊಡೆದ ಪರಿಣಾಮ ಆತ ಸಾವಿಗೀಡಾಗಿದ್ದಾನೆ. ಹಸುವೂ ಕೂಡ ಮೃತಪಟ್ಟಿದೆ. ಅಲ್ಲದೇ ದ್ವಿಚಕ್ರ ವಾಹನದಲ್ಲಿ ಬಂದ ಮಹಿಳೆಯೊಬ್ಬರು ಅಡ್ಡಲಾಗಿ ನುಗ್ಗಿದ ಹಸುವಿಗೆ ಡಿಕ್ಕಿ ಹೊಡೆದು ಕಾಲು ಮುರಿದುಕೊಂಡಿದ್ದಾರೆ. ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲುವ ಹಸುಗಳಿಂದ ಸರಣಿ ಅಪಘಾತಗಳು ಸಂಭವಿಸುತ್ತಿವೆ. ಮತ್ತೊಂದೆಡೆ ಸಮರ್ಪಕವಾಗಿ ಮೇವು ಸಿಗದ ಹಸುಗಳು ತ್ಯಾಜ್ಯ ಹಾಗೂ ಪ್ಲಾಸ್ಟಿಕ್ ತಿಂದು ಸಾವನ್ನಪ್ಪುತ್ತಿವೆ. ಹೀಗಾಗಿ ಮನೆಯಲ್ಲಿ ಜಾಗವಿದ್ದರೆ ಹಸುಗಳನ್ನು ಸಾಕಿ. ಹಸುಗಳನ್ನು ರಸ್ತೆಗೆ ಬಿಟ್ಟು ಸಾಯಿಸಬೇಡಿ ಎಂದು ಗೋಪಾಲಕರಿಗೆ ಸಲಹೆ ನೀಡಿದ್ದೇನೆ. **–ಡಿ.ನಾಗಭೂಷಣ್, ಮಾಜಿ ಕಾರ್ಪೊರೇಟರ್, ಮೈಸೂರು ಗೋಪಾಲಕರ ಸಂಘದ ಅಧ್ಯಕ್ಷ**

ಕಚೇರಿ ಶೌಚಾಲಯದಲ್ಲಿ ಮಹಿಳೆಯ ವಿಡಿಯೋ ರೆಕಾರ್ಡ್; ಇನ್ಫೋಸಿಸ್ ಟೆಕ್ಕಿ ಬಂಧನ

ಬೆಂಗಳೂರು: ಬೆಂಗಳೂರಿನ ಇನ್ಫೋಸಿಸ್‌ನ ಕಚೇರಿಯ ಶೌಚಾಲಯದೊಳಗೆ ಮಹಿಳೆಯೊಬ್ಬರ ವಿಡಿಯೋ ರೆಕಾರ್ಡ್ ಮಾಡಿದ ಆರೋಪದ ಮೇಲೆ ಟೆಕ್ಕಿಯೊಬ್ಬರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಆಂಧ್ರಪ್ರದೇಶ ಮೂಲದ 28 ವರ್ಷದ ಉದ್ಯೋಗಿ ಸ್ವಪ್ನಿಲ್ ನಾಗೇಶ್ ಮಲಿ ಎಂದು ಗುರುತಿಸಲಾಗಿದೆ. ನಾಗೇಶ್ ಸ್ವಪ್ನಿಲ್ ಮಲಿ ಶೌಚಾಲಯದಲ್ಲಿ ಮಹಿಳಾ ಉದ್ಯೋಗಿಯ ವಿಡಿಯೋ ರೆಕಾರ್ಡ್ ಮಾಡುವಾಗಲೇ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಆರೋಪಿ ಪಕ್ಕದ ಶೌಚಾಲಯದ ಕಮೋಡ್ ಮೇಲೆ ನಿಂತು ರಹಸ್ಯವಾಗಿ ತನ್ನ ಮೊಬೈಲ್‌ನಲ್ಲಿ ಮಹಿಳಾ ಉದ್ಯೋಗಿಯ ಶೌಚಾಲಯದ ವಿಡಿಯೋ ರೆಕಾರ್ಡ್ ಮಾಡಿದ್ದಾನೆ. ಈತ ರೆಕಾರ್ಡ್ ಮಾಡುತ್ತಿರುವುದು ಎದುರುಗಡೆ ಡೋರ್ ಮೇಲೆ ಪ್ರತಿಬಿಂಬ ಮೂಡಿದೆ. ಕೂಡಲೇ ಹೊರ ಬಂದು ನೋಡಿದಾಗ ಯುವತಿ ಮಾತ್ರ ಕಂಡಿದ್ದಾಳೆ. ಮತ್ತೆ ಶೌಚಾಲಯದ ಒಳ ಹೋಗಿ ಆಕೆ ಪರಿಶೀಲನೆ ಮಾಡಿದ್ದಾರೆ. ಆಗ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುವಾಗ ಆರೋಪಿ ಸಿಕ್ಕಿಬಿದ್ದಿದ್ದಾನೆ.

ಈ ವೇಳೆ ಮಹಿಳೆ ಕಿರುಚಾಡಿದ್ದು, ಅಲ್ಲಿಯೇ ಮಹಿಳಾ ಉದ್ಯೋಗಿಯ ಕ್ಷಮೆ ಕೇಳಿದ್ದಾನೆ. ಈ ಹಂತದಲ್ಲಿ ಹೆಚ್‌ಆರ್ ಸಿಬ್ಬಂದಿ ಬಂದು ಪರಿಶೀಲನೆ ಮಾಡಿದಾಗ ಸುಮಾರು 30ಕ್ಕೂ ಅಧಿಕ ಮಹಿಳೆಯರ ವಿಡಿಯೋ ಇದರಲ್ಲಿ ಪತ್ತೆಯಾಗಿದೆ ಎನ್ನಲಾಗಿದೆ. ಮಹಿಳೆ ಮಂಗಳವಾರ ಎಲೆಕ್ಟ್ರಾನಿಕ್ಸ್ ಸಿಟಿ ಠಾಣೆಗೆ ನೀಡಿದ್ದ ದೂರು ಆಧರಿಸಿ ಇಂದು ಎಲೆಕ್ಟ್ರಾನಿಕ್ಸ್ ಸಿಟಿ ಪೊಲೀಸರು ಟೆಕ್ಕಿಯನ್ನು ಬಂಧಿಸಿದ್ದಾರೆ.

ಅಪ್ರಾಪ್ತನ ಮೇಲೆ ಲೈಂಗಿಕ ದೌರ್ಜನ್ಯ; ಶಿಕ್ಷಕಿ ಬಂಧನ

ಮುಂಬೈ: 16 ವರ್ಷದ ವಿದ್ಯಾರ್ಥಿ ಮೇಲೆ ಹಲವು ತಿಂಗಳುಗಳಿಂದ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ನಗರದ ಪ್ರತಿಷ್ಠಿತ ಶಾಲೆಯ 40 ವರ್ಷದ ಶಿಕ್ಷಕಿಯನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಶಿಕ್ಷಕಿ ವಿವಾಹಿತೆಯಾಗಿದ್ದು, ಆಕೆಯ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, ಬಾಲ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯಡಿಯಲ್ಲಿ ಆರೋಪ ಹೊರಿಸಲಾಗಿದೆ. ಶಿಕ್ಷಕಿ ಹನ್ನೊಂದನೇ ತರಗತಿಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದರು. ಸಂತ್ರಸ್ತ ವಿದ್ಯಾರ್ಥಿ ಕೂಡ 11 ತರಗತಿ ಓದುತ್ತಿದ್ದ.

2023ರ ಡಿಸೆಂಬರ್‌ನಲ್ಲಿ ಶಾಲೆಯ ವಾರ್ಷಿಕೋತ್ಸವಕ್ಕಾಗಿ ನೃತ್ಯ ಪ್ರದರ್ಶಿಸಲು ಗುಂಪನ್ನು ರಚಿಸಲು ಆಯೋಜಿಸಲಾದ ಸಭೆಗಳ ಸಮಯದಲ್ಲಿ ಆರೋಪಿ ವಿದ್ಯಾರ್ಥಿ ಬಗ್ಗೆ ಅನುಚಿತ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು ಎಂದು ಪೊಲೀಸರು ಸುದ್ದಿ ಮಾಧ್ಯಮಕ್ಕೆ ತಿಳಿಸಿದ್ದಾರೆ. 2024ರ ಜನವರಿಯಲ್ಲಿ ಆಕೆ ವಿದ್ಯಾರ್ಥಿಗೆ ಲೈಂಗಿಕ ದೌರ್ಜನ್ಯ ಎಸಗಿದ್ದಾಳೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ ವಿದ್ಯಾರ್ಥಿ ಆಕೆಯಿಂದ ದೂರ ಉಳಿಯಲು ಪ್ರಾರಂಭಿಸಿದಾಗ ಶಿಕ್ಷಕಿ ಶಾಲೆಯಿಂದ ಹೊರಗಿನ ತನ್ನ ಸ್ನೇಹಿತೆಯ ಸಹಾಯ ಕೋರಿದ್ದಾರೆ. ಆಕೆ ಅಪ್ರಾಪ್ತನನ್ನು ಸಂಪರ್ಕಿಸಿ ಅಂತಹ ಸಂಬಂಧಗಳು ಸಾಮಾನ್ಯ ಎಂದು ಹೇಳುವ ಮೂಲಕ ಅವನನ್ನು ಮನವೊಲಿಸಲು ಪ್ರಯತ್ನಿಸಿದ್ದಾಳೆ. ಆತ ಮತ್ತು ಶಿಕ್ಷಕಿ 'ಮೇಡ್ ಫಾರ್ ಈಚ್ ಅದರ್' ಎಂದು ವಿದ್ಯಾರ್ಥಿಗೆ ಹೇಳಿದ್ದಾಳೆ.

ವಯಸ್ಸಾದ ಮಹಿಳೆಯರು ಮತ್ತು ಹದಿಹರೆಯದ ಹುಡುಗರ ನಡುವಿನ ಸಂಬಂಧಗಳು 'ಸಾಕಷ್ಟು ಸಾಮಾನ್ಯವಾಗಿದೆ' ಎಂದು ಸ್ನೇಹಿತೆ ಆತನಿಗೆ ಹೇಳಿರುವುದಾಗಿ ವರದಿಯಾಗಿದ್ದು, ಸ್ನೇಹಿತೆಯ ವಿರುದ್ಧವೂ ಪ್ರಕರಣ ದಾಖಲಾಗಿದೆ.

ಪಂಚ ರಾಷ್ಟ್ರಗಳ ಪ್ರವಾಸ ಆರಂಭಿಸಿದ ಪ್ರಧಾನಿ ಮೋದಿ



ನವದೆಹಲಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಇಂದು ಬುಧವಾರ, ಬ್ರೆಜಿಲ್ ಸೇರಿದಂತೆ ಐದು ದೇಶಗಳಿಗೆ ಒಂದು ವಾರದ ಭೇಟಿಗಾಗಿ ಪ್ರಯಾಣ ಬೆಳೆಸಿದ್ದಾರೆ. ಆರ್ಥಿಕತೆಗಳ ಬೆಳವಣಿಗೆಗೆ ಸಹಕಾರಕ್ಕಾಗಿ ಭಾರತವು ಬ್ರಿಕ್ಸ್ ಅನ್ನು ಪ್ರಮುಖ ವೇದಿಕೆಯಾಗಿ ಬಳಸಲು ಬದ್ಧವಾಗಿದೆ ಎಂದು ಪ್ರಧಾನ ಮಂತ್ರಿಗಳು ಈ ಸಂದರ್ಭದಲ್ಲಿ ಹೇಳಿದ್ದಾರೆ.

ನಾವು ಹೆಚ್ಚು ಶಾಂತಿಯುತ, ಸಮಾನ, ನ್ಯಾಯಯುತ, ಪ್ರಜಾಪ್ರಭುತ್ವ ಮತ್ತು ಸಮತೋಲಿತ ಬಹುಧ್ರುವೀಯ ವಿಶ್ವ ಕ್ರಮಕ್ಕಾಗಿ ಶ್ರಮಿಸುತ್ತೇವೆ ಎಂದು ಪ್ರಧಾನ ಮಂತ್ರಿಗಳು 5 ದೇಶಗಳ ಪ್ರವಾಸ ಆರಂಭ ಸಂದರ್ಭದಲ್ಲಿ ಹೇಳಿದ್ದಾರೆ.

ಪ್ರಧಾನ ಮಂತ್ರಿಗಳು ಘಾನಾ, ಟ್ರಿನಿಡಾಡ್ ಮತ್ತು ಟೊಬಾಗೊ, ಅರ್ಜೆಂಟೀನಾ, ಬ್ರೆಜಿಲ್ ಮತ್ತು ನಮೀಬಿಯಾಕ್ಕೆ ಭೇಟಿ ನೀಡಲಿದ್ದಾರೆ. ಘಾನಾ ಅಧ್ಯಕ್ಷ ಜಾನ್ ಡ್ರಾಮಾನಿ ಮಹಾಮಾ ಅವರ ಆಹ್ವಾನದ ಮೇರೆಗೆ ಇಂದು ಮತ್ತು ನಾಳೆ ಪ್ರವಾಸ ಕೈಗೊಂಡಿದ್ದಾರೆ.

ಘಾನಾಗೆ ಭೇಟಿ ನೀಡಿದ ನಂತರ ಮುಂದಿನ ಎರಡು ದಿನಗಳವರೆಗೆ ಪ್ರಧಾನಿ ಮೋದಿ ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ಇರುತ್ತಾರೆ. ಇದು ಭಾರತವು ಆಳವಾದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಜನರ–ಜನರ ಸಂಪರ್ಕವನ್ನು ಹಂಚಿಕೊಳ್ಳುವ ದೇಶವಾಗಿದೆ. ಈ ವರ್ಷದ ಪ್ರವಾಸಿ ಭಾರತೀಯ ದಿವಸದಲ್ಲಿ ಮುಖ್ಯ ಅತಿಥಿಯಾಗಿದ್ದ ಅಧ್ಯಕ್ಷೆ ಕ್ರಿಸ್ಟೀನ್ ಕಾರ್ಲಾ ಕಂಗಲೂ ಮತ್ತು ಇತ್ತೀಚೆಗೆ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡ ಪ್ರಧಾನಿ ಕಮಲಾ ಪರ್ಸಾದ್–ಬಿಸ್ಸೆಸ್ಸರ್ ಅವರನ್ನು ಮೋದಿ ಭೇಟಿ ಮಾಡಲಿದ್ದಾರೆ. ಪ್ರಧಾನ ಮಂತ್ರಿಗಳು ಜುಲೈ 6 ಮತ್ತು 7 ರಂದು ರಿಯೊ ಡಿ ಜನೈರೊದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ದೇವಭೂಮಿ ಹಿಮಾಚಲದಲ್ಲಿ ಮೇಘಸ್ಫೋಟ

10 ಮಂದಿ ಸಾವು, 34 ಜನ ನಾಪತ್ತೆ, 371 ಕೋಟಿ ಆಸ್ತಿ ನಾಶ



ಮಂಡಿ(ಹಿಮಾಚಲ ಪ್ರದೇಶ), ಜು.2– ಕಳೆದ 32 ಗಂಟೆಗಳಲ್ಲಿ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಮೇಘ ಸ್ಫೋಟ ಮತ್ತು ದಿಢೀರ್ ಪ್ರವಾಹದಿಂದಾಗಿ ಕನಿಷ್ಠ 10 ಜನರು ಸಾವನ್ನಪ್ಪಿದ್ದು 34 ಮಂದಿ ಕಾಣೆಯಾಗಿದ್ದಾರೆ. ರಾಜ್ಯವು 16 ಮೇಘ ಸ್ಫೋಟಗಳು ಮತ್ತು ಮೂರು ದಿಢೀರ್ ಪ್ರವಾಹಗಳಿಗೆ ಸಾಕ್ಷಿಯಾಗಿದೆ. ಅವುಗಳಲ್ಲಿ ಹೆಚ್ಚಿನವು ಮಂಡಿಯಲ್ಲಿ ಕೇಂದ್ರೀಕೃತವಾಗಿದ್ದು, ವ್ಯಾಪಕ ವಿನಾಶಕ್ಕೆ ಕಾರಣವಾಗಿವೆ ಎಂದು ವರದಿಯಾಗಿದೆ.

ಎಸ್‌ಇಒಸಿ ದತ್ತಾಂಶದ ಪ್ರಕಾರ, ಮಂಡಿ ಮಾನ್ಸೂನ್ ವಿಪತ್ತಿನ ಕೇಂದ್ರಬಿಂದುವಾಗಿದೆ. ತುನಾಗ್, ಕರ್ಸೋಗ್ ಮತ್ತು ಗೋಹರ್ ಉಪವಿಭಾಗಗಳ ಹಲವಾರು ಪ್ರದೇಶಗಳಲ್ಲಿ ಸಂಭವಿಸಿದ ಭಾರೀ ಮೇಘಸ್ಫೋಟದಿಂದ ಅಪಾರ ಆಸ್ತಿಪಾಸ್ತಿ ನಾಶವಾಗಿದೆ. ಹತ್ತಾರು ಮಂದಿ ಕಾಣೆಯಾಗಿದ್ದು ಹಲವರ ಸಾವು ಸಂಭವಿಸಿದೆ. ಸಿಯಾಂಜ್ (ಗೋಹರ್)ನಲ್ಲಿ ಎರಡು ಮನೆಗಳು ಕೊಚ್ಚಿ ಹೋಗಿದ್ದು, ಒಂಬತ್ತು ಜನರು ಕಾಣೆಯಾಗಿದ್ದಾರೆ. ಅವರಲ್ಲಿ ಇಬ್ಬರು ಶವಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕುಟ್ಟಿ ಬೈಪಾಸ್ (ಕರ್ಸೋಗ್)ನಲ್ಲಿ ಸಂಭವಿಸಿದ ಮೇಘಸ್ಫೋಟದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಇಬ್ಬರು ಕಾಣೆಯಾಗಿದ್ದಾರೆ ಎಂದು ದೃಢಪಡಿಸಲಾಗಿದೆ. ಆದರೆ ಏಳು ಜನರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಕರ್ಸೋಗ್, ಗೋಹರ್ ಮತ್ತು ಥುನಾಗ್ ಪೀಡಿತ ಪ್ರದೇಶಗಳಲ್ಲಿ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ (ಎಸ್‌ಡಿಆರ್‌ಎಫ್) ತಂಡಗಳೊಂದಿಗೆ ಪ್ರಮುಖ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ವರದಿ ತಿಳಿಸಿದೆ.

ಬಲ್ಹಾ ಗ್ರಾಮದಲ್ಲಿ (ಹಮೀರ್‌ಪುರ) ಸಂಭವಿಸಿದ ಹಠಾತ್ ಪ್ರವಾಹವು ಬಿಯಾಸ್ ನದಿಯ ಬಳಿ ಹಲವಾರು ಕುಟುಂಬಗಳನ್ನು ಸಿಲುಕಿಸಿದೆ. ಪೊಲೀಸ್ ತಂಡಗಳು 30 ಕಾರ್ಮಿಕರು ಮತ್ತು 21 ಸ್ಥಳೀಯರು ಸೇರಿದಂತೆ ಒಟ್ಟು 51 ಜನರನ್ನು ರಕ್ಷಿಸಿವೆ ಎಂದು ಎಸ್‌ಇಒಸಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಪರಿಹಾರ ಕಾರ್ಯಾಚರಣೆಗಳು ಭರದಿಂದ ಸಾಗಿವೆ. ತುರ್ತು ಆಶ್ರಯಗಳನ್ನು ಸ್ಥಾಪಿಸಲಾಗಿದೆ. ಟೆಂಟ್‌ಗಳು, ಕಂಬಳಿಗಳು ಮತ್ತು ಆಹಾರದಂತಹ ಅಗತ್ಯ ಸಾಮಗ್ರಿಗಳನ್ನು ವಿತರಿಸಲಾಗಿದ್ದು ಪರಿಹಾರ ನಿಧಿಗಳನ್ನು ವಿತರಿಸಲಾಗುತ್ತಿದೆ. ತ್ರಿಯಂಬಲದಲ್ಲಿ (ಸೆರ್ತಿ) ಧರ್ಮಪುರದ ಗ್ರಾಮದಲ್ಲಿ ಮೇಘಸ್ಫೋಟದಿಂದಾಗಿ ಜಾನುವಾರು ಮತ್ತು ಆಸ್ತಿಯನ್ನು ಕಳೆದುಕೊಂಡ 17 ಕುಟುಂಬಗಳಿಗೆ ನೆರವು ನೀಡಲಾಯಿತು. ಮಂಡಿಯಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಎರಡೂ ಸಕ್ರಿಯವಾಗಿ ತೊಡಗಿಸಿಕೊಂಡಿವೆ ಎಂದು ಎಸ್‌ಇಒಸಿ ದೃಢಪಡಿಸಿದೆ.

ತುರುಗನೂರು ಗ್ರಾಮ ಪಂಚಾಯಿತಿ ಕಾರ್ಯಾಲಯ

ತುರಗನೂರು ಗ್ರಾಮ, ಬನ್ನೂರು ಹೋಬಳಿ, ತಿ.ನರಸೀಪುರ ತಾಲ್ಲೂಕು-571120 | ಮೊ : 9538685923

ದಿನಾಂಕ : 02.07.2025

ಕೆರೆಗಳ ಮೀನು ಪಾಶುವಾರು ಹಕ್ಕಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ತುರಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಲ್ಲಿ ಮೀನು ಪಾಶುವಾರು ಹಕ್ಕನ್ನು ಹರಾಜು ದಿನದಿಂದ 5 ವರ್ಷದ ಅಂತ್ಯಕ್ಕೆ ಅನ್ವಯವಾಗುವಂತೆ ದಿನಾಂಕ 17.07.2025ರ ಗುರುವಾರ ದಂದು ಬೆಳಗ್ಗೆ 11 ಗಂಟೆಗೆ ತುರಗನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಬಿ ಎನ್ ನಯನರವರ ಅಧ್ಯಕ್ಷತೆಯಲ್ಲಿ ತುರುಗನೂರು ಗ್ರಾಮ ಪಂಚಾಯಿತಿ ಕಛೇರಿ ಆವರಣ"ದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಏರ್ಪಡಿಸಲಾಗಿದ್ದು ಆಸಕ್ತರು ಸದರಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈ ಮೂಲಕ ಕೋರಲಾಗಿದೆ.

–: ವಿಲೇವಾರಿ ಮಾಡಬೇಕಾದ ಕೆರೆಗಳ ವಿವರ :–

ಕ್ರ ಸಂ	ಕೆರೆಗಳ ಹೆಸರು	ಗ್ರಾಮ	ನಿಗಧಿಪಡಿಸಿರುವ ಕನಿಷ್ಠ ಬಿಡ್ ಮೊತ್ತ	ಮುಂಗಡ ಠೇವಣಿ ಮೊತ್ತ	ಹರಾಜು ಪ್ರಕ್ರಿಯೆ ದಿನಾಂಕ
1	ಶ್ರೀ ನಡುಗದ್ದೇಶ್ವರ ದೇವಸ್ಥಾನದ ಹತ್ತಿರದ ಕೆರೆ	ತುರುಗನೂರು	1,25,000/–	12500/–	17.07.2025 ಗುರುವಾರ ಬೆಳಗ್ಗೆ 11–00
2	ಬಾಣಗವಾಡಿ ಕೆರೆ	ಬಾಣಗವಾಡಿ	30000/–	3000/–	
3	ಸ್ನಾನೆ ಕೆರೆ	ತುರುಗನೂರು	3000/–	300/–	
4	ಹಿಟ್ಟಿಕಟ್ಟೆ	ಗೊರವನಹಳ್ಳಿ	3000/–	300/–	

ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯ ಅರ್ಜಿ, ಷರತ್ತುಗಳು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಶ್ರೀಮತಿ ಬಿ.ಎನ್.ನಯನ, ಅಧ್ಯಕ್ಷರು, ತುರಗನೂರು ಗ್ರಾ.ಪಂ.

ಶ್ರೀ ದೇವರಾಜು, ಉಪಾಧ್ಯಕ್ಷರು, ತುರಗನೂರು ಗ್ರಾ.ಪಂ.

ಶ್ರೀ ಮಹೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತುರುಗನೂರು ಗ್ರಾ.ಪಂ.